*Pandit Teaches the Bible Series*

# Let’s Read Galatians!

**Kannada Edition**

**Author: T. Pandit**

**Translator: P. Prakash**

This is the Kannada version of a college level textbook prepared a few years ago for a Bible college in South India. It was written it with the South Indian Christian context in mind. With minor adaptions it should, however, be useful also in other cultural contexts.

T. Pandit has many years of experience as an educationist, a Bible teacher and a college principal, in India as well as internationally. He is now retired.

P. Prakash is pastoring a church in central Karnataka. He is also an experienced Bible teacher and a translator of textbooks for Kannada Satyaveda College and in charge of its Resource Centre.

October 2021

## Copyright waiver

The authors of this work hereby waive all claim of copyright (economic and moral) in this work and immediately place it in the public domain. It may be used, distorted or destroyed in any manner whatsoever without further attribution or notice to the creators.

The authors of this work would, however, object to to any republishing of this work for the purposes of financial gain.

# ಗಲಾತ್ಯದವರಿಗೆ ಬರೆದ ಪತ್ರಿಕೆಯನ್ನು

# ಓದೋಣ !

ಪ್ರಧಾನ ಸಂಪಾದಕರು

**ಟಿ. ಪಂಡಿತ್**

ಲೇಖಕರು

**ಟಿ. ಪಂಡಿತ್**

ಅನುವಾದಕರು

**ಆರ್. ಪ್ರಕಾಶ್ ನಾಯ್ಕ್**

**ಲೇಖಕರ ಪರಿಚಯ**

**ಟಿ. ಪಂಡತ್** ರವರು ಒಬ್ಬ ಶಿಕ್ಷಣತಜ್ಞರಾಗಿಯೂ, ಒಬ್ಬ ಸತ್ಯವೇದ ಉಪದೇಶಕರಾಗಿಯೂ ಮತ್ತು ಒಬ್ಬ ಪ್ರಾಂಶಪಾಲರಾಗಿಯೂ ಅನೇಕ ವರ್ಷಗಳ ಅನುಭವವನ್ನು ಹೊಂದಿದ್ದಾರೆ. ಅವರು ಕನ್ನಡ ಸತ್ಯವೇದ ಮಹಾವಿದ್ಯಾಲಯದೊಂದಿಗೆ, 2006 ರಲ್ಲಿನ ಅದರ ಪ್ರಾರಂಭದಿಂದಲೂ ತಮ್ಮನ್ನು ನಿಕಟವಾಗಿ ತೊಡಗಿಸಿಕೊಂಡಿದ್ದಾರೆ.

ಎಸ್ ಸರ್ ಬಾಸ್ಕ್ ಯೂರೋಪ್ ಮೂಲದ ವರ್ಣಚಿತ್ರ ಕಲಾವಿದರಾಗಿದ್ದಾರೆ. ಈ ಪಠ್ಯದಲ್ಲಿರುವ ಅನೇಕ ನಕ್ಷೆಗಳನ್ನು ಅವರು ತಯಾರಿಸಿದ್ದಾರೆ.

**ಆರ್. ಪ್ರಕಾಶ್ ನಾಯ್ಕ್** ರವರು ಒಬ್ಬ ಎಂ.ಎ. ಮತ್ತು ಎಂ.ಡಿವ್. ಪದವೀದರರಾಗಿದ್ದು, ಕನ್ನಡ ಸತ್ಯವೇದ ಮಹಾವಿದ್ಯಾಲಯದಲ್ಲಿ 2008 ರಿಂದ ಉಪನ್ಯಾಸಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಅದಲ್ಲದೆ ಅವರು ತಮ್ಮ ಪತ್ನಿ ಪ್ರೇಮಲತಾರೊಂದಿಗೆ ಹೂವಿನಹಡಗಲಿಯಲ್ಲಿ ಸಭಾಪಾಲಕರಾಗಿ ದೇವರ ಸೇವೆ ಮಾಡುತ್ತಿದ್ದಾರೆ.

ಈ ಪುಸ್ತಕವು ಮೂಲತಃವಾಗಿ ಆಂಗ್ಲಭಾಷೆಯಲ್ಲಿದ್ದು, ಇದು ಅದರ ಕನ್ನಡದ ತರ್ಜುಮೆಯಾಗಿರುತ್ತದೆ.

ಈ ಪುಸ್ತಕದ ಲೇಖಕರು ಗ್ರಂಥಕರ್ತರಾಗಿ (ಹಣಕಾಸಿನ ಮತ್ತು ನೈತಿಕ) ತಮ್ಮ ಹಕ್ಕನ್ನು ಹೊಂದಿರುತ್ತಾರೆ, ಮತ್ತು ತಕ್ಷಣದಿಂದಲೇ ಈ ಪುಸ್ತಕವು ಅವರ ಅಧಿಕಾರಕ್ಕೊಳಪಟ್ಟಿದೆ. ಆದ್ದರಿಂದ ಅವರ ಗಮನಕ್ಕೆ ತರದೆ ಈ ಪುಸ್ತಕವನ್ನು ತಿದ್ದುವುದಾಗಲಿ ಅಥವಾ ನಕಲು ಮಾಡುವುದಾಗಲಿ ಅಥವಾ ನಾಶಮಾಡುವುದಾಗಲಿ ಮಾಡಕೂಡದೆಂದು ತಿಳಿಸಲಾಗಿದೆ.

ಹೊಸ ಪ್ರತಿ ಜೂನ್ 2020

# ಪರಿವಿಡಿ

## ಅಧ್ಯಯನಗಳು


ಗಲಾತ್ಯ ಪತ್ರಿಕೆಯ ಪರಿಚಯ 6
ಅಧ್ಯಯನ 1: ಇಡೀ ಪತ್ರಿಕೆಯನ್ನು ಓದಿರಿ 10
ಅಧ್ಯಯನ 2: ಗಲಾತ್ಯ ಪತ್ರಿಕೆಯನ್ನು ರಚನೆ ಮಾಡುವುದು 12
ಅಧ್ಯಯನ 3: ವಂದನೆಗಳು (1:1-5) 15
ಅಧ್ಯಯನ 4: ಕೇವಲ ಒಂದೇ ಸುವಾರ್ತೆ (1:6-10) 17
ಅಧ್ಯಯನ 5: ಪೌಲನ ಸುವಾರ್ತೆ (1:11-24) 19
ಅಧ್ಯಯನ 6: ಪೌಲ ಮತ್ತು ಅಪೊಸ್ತಲರು (2:1-10) 21
ಅಧ್ಯಯನ 7: ನಂಬಿಕೆಯಿಂದ ನೀತಿವಂತರೆಂದು ನಿರ್ಣಯಿಸಲ್ಪಟ್ಟವು (2:11-21) 23
ಅಧ್ಯಯನ 8: ಧರ್ಮಶಾಸ್ತ್ರದ ಕಾರ್ಯ ಅಥವಾ ನಂಬಿಕೆ (3:1-14) 26
ಅಧ್ಯಯನ 9: ವಾಗ್ದಾನ ಮತ್ತು ಧರ್ಮಶಾಸ್ತ್ರ (3:15-25) 28
ಅಧ್ಯಯನ 10: ಪುತ್ರರು ಮತ್ತು ಬಾಧ್ಯರು (3:26-4:21) 30
ಅಧ್ಯಯನ 11: ಎರಡು ಒಡಂಬಡಿಕೆಗಳು (4:21-31) 32
ಅಧ್ಯಯನ 12: ಶಿಲುಬೆ ಅಥವಾ ಸುನ್ನತಿ (5:1-12) 34
ಅಧ್ಯಯನ 13: ಆತ್ಮನಲ್ಲಿ ಜೀವಿಸಿರಿ (5:13-26) 36
ಅಧ್ಯಯನ 14: ಬಿತ್ತುವುದು ಮತ್ತು ಕೊಯ್ಯುವುದು (6:1-10) 38
ಅಧ್ಯಯನ 15: ಪೌಲನ ಕಡೇ ಮಾತುಗಳು (6:11-18) 39
ಅಧ್ಯಯನ 16: ಗಲಾತ್ಯ ಪತ್ರಿಕೆಯಿಂದ ನಮಗೆ ಸಂದೇಶ 42


## ಉತ್ತರಗಳು


ಉತ್ತರಗಳು 1: ಇಡೀ ಪತ್ರಿಕೆಯನ್ನು ಓದಿರಿ 50
ಉತ್ತರಗಳು 2: ಗಲಾತ್ಯ ಪತ್ರಿಕೆಯನ್ನು ರಚನೆ ಮಾಡುವುದು 52
ಉತ್ತರಗಳು 3: ವಂದನೆಗಳು (1:1-5) 55
ಉತ್ತರಗಳು 4: ಕೇವಲ ಒಂದೇ ಸುವಾರ್ತೆ (1:6-10) 57
ಉತ್ತರಗಳು 5: ಪೌಲನ ಸುವಾರ್ತೆ (1:11-24) 59
ಉತ್ತರಗಳು 6: ಪೌಲ ಮತ್ತು ಅಪೊಸ್ತಲರು (2:1-10) 61
ಉತ್ತರಗಳು 7: ನಂಬಿಕೆಯಿಂದ ನೀತಿವಂತರೆಂದು ನಿರ್ಣಯಿಸಲ್ಪಟ್ಟವು (2:11-21) 63
ಉತ್ತರಗಳು 8: ಧರ್ಮಶಾಸ್ತ್ರದ ಕಾರ್ಯ ಅಥವಾ ನಂಬಿಕೆ (3:1-14) 65
ಉತ್ತರಗಳು 9: ವಾಗ್ದಾನ ಮತ್ತು ಧರ್ಮಶಾಸ್ತ್ರ (3:15-25) 67
ಉತ್ತರಗಳು 10: ಪುತ್ರರು ಮತ್ತು ಬಾಧ್ಯರು (3:26-4:21) 69
ಉತ್ತರಗಳು 11: ಎರಡು ಒಡಂಬಡಿಕೆಗಳು (4:21-31) 72

ಉತ್ತರಗಳು 12: ಶಿಲುಬೆ ಅಥವಾ ಸುನ್ನತಿ (5:1-12) 73
ಉತ್ತರಗಳು 13: ಆತ್ಮನಲ್ಲಿ ಜೀವಿಸಿರಿ (5:13-26) 76
ಉತ್ತರಗಳು 14: ಬಿತ್ತುವುದು ಮತ್ತು ಕೊಯ್ಯುವುದು (6:1-10) 79
ಉತ್ತರಗಳು 15: ಪೌಲನ ಕಡೇ ಮಾತುಗಳು (6:11-18) 81
**ಅನುಬಂಧ: ಯಾರು ಮತ್ತು ಯಾವಾಗ?** 83

# ಅಧ್ಯಯನಗಳು

# ಗಲಾತ್ಯ ಪತ್ರಿಕೆಯ ಪರಿಚಯ

## ಒಂದು ಪತ್ರ

ಒಂದು ನಿಜವಾದ ಪತ್ರವು ಒಬ್ಬ ವ್ಯಕ್ತಿಯಿಂದ (ಅಥವಾ ವ್ಯಕ್ತಿಗಳ ಒಂದು ಗುಂಪು) ಇನ್ನೊಬ್ಬ ವ್ಯಕ್ತಿಗೆ (ಅಥವಾ ವ್ಯಕ್ತಿಗಳ ಒಂದು ಗುಂಪು) ಬರೆದದ್ದಾಗಿದೆ. ಹೀಗೆ ಒಬ್ಬ ಕಳುಹಿಸುವವನು ಮತ್ತು ಒಬ್ಬ ಸ್ವೀಕರಿಸುವವನು ಇರುತ್ತಾರೆ.

ಒಂದು ಪತ್ರಿಕೆಯ ಸುತ್ತ ಯಾವಾಗಲೂ ಉದ್ದೇಶ ಮತ್ತು ಸಮಯಗಳಂತೆ ಸಂದರ್ಭಗಳು ಸಹ ಇರುತ್ತವೆ. ಒಂದು ಪತ್ರಿಕೆಯನ್ನು ಬರೆಯಲು ಇರುವ ಕಾರಣವು ಕಳುಹಿಸುವವನು ಸ್ವೀಕರಿಸುವಾತನಿಗೆ ತಿಳಿಸಲು ಬಯಸುವ ಒಂದು ಕಾಳಜಿ ಅಥವಾ ಒಂದು ಸಂದೇಶವಾಗಿರಬಹುದು ಅಥವಾ ಸ್ವೀಕೃತನು ಕಳುಹಿಸುವವನಿಗೆ ಕೇಳಿದ ಪ್ರಶ್ನೆಗೆ ಒಂದು ಉತ್ತರವಾಗಿರಬಹುದು ಅಥವಾ ಸ್ವೀಕರಿಸುವವನೊಂದಿಗೆ ಕಳುಹಿಸುವವನು ಹಂಚಿಕೊಳ್ಳಲು ಬಯಸುವ ಆಲೋಚನೆಯಾಗಿರಬಹುದು ಅಥವಾ ಬೇರೆ ಯಾವುದೋ ಕಾರಣವಿರಬಹುದು. ಈ ರೀತಿಯ ಒಂದು ಪರಿಸ್ಥಿತಿಗಳನ್ನು ಪತ್ರಿಕೆಯ ಸಂದರ್ಭವೆಂಬುದಾಗಿ ಕರೆಯಬಹುದು.

ಸಾಮಾನ್ಯವಾಗಿ ಪತ್ರಗಳು (ಪತ್ರಿಕೆಗಳು) ಒಂದು ಪ್ರತ್ಯೇಕ ಮಾದರಿಗಳನ್ನು ಪಾಲಿಸುತ್ತವೆ. ಆ ಮಾದರಿಗಳು ಸಂಸ್ಕೃತಿಯಿಂದ ಸಂಸ್ಕೃತಿಗೆ ಕಾಲದಿಂದ ಕಾಲಕ್ಕೆ ವಿಭಿನ್ನವಾಗಿರುತ್ತವೆ. ಹೀಗೆ ಗಲಾತ್ಯದವರಿಗೆ ಬರೆದ ಪತ್ರಿಕೆಯು ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ರೋಮನ್ ಸಾಮ್ರಾಜ್ಯದ ಕಾಲದಲ್ಲಿ ಬರೆಯಲ್ಪಟ್ಟಿದ್ದು, ಇಂದು ನೀವು ನಿಮ್ಮ ತಂದೆತಾಯಿಗಳಿಗೆ ಬರೆಯುವ ಪತ್ರಗಳಿಗಿಂತ ವಿಭಿನ್ನವಾಗಿರುತ್ತದೆ. ಹೊಸ ಒಡಂಬಡಿಕೆಯ ಪತ್ರಿಕೆಗಳು ಸಾಮಾನ್ಯವಾಗಿ ಆ ದಿನಗಳ ಗ್ರೀಕ್ ಮತ್ತು ಲ್ಯಾಟೀನ್ ಅಕ್ಷರಗಳ ಐದು ಭಾಗದ ಮೂಲ ಮಾದರಿಗಳನ್ನು ಅನುಸರಿಸುತ್ತವೆ: ಕಳುಹಿಸುವವನು – ಸ್ವೀಕರಿಸುವವನು – ಒಂದು ವಂದನೆಗಳು – ಮುಖ್ಯಭಾಗ – ಒಂದು ಅಂತಿಮ ವಂದನೆಗಳು. ಆದರೆ ರೋಮ್ ಸಾಮ್ರಾಜ್ಯದ ದಿನಗಳಲ್ಲಿದ್ದ ಸಾವಿರಾರು ಪತ್ರಿಕೆಗಳಿಗಿಂತಲೂ ಹೊಸ ಒಡಂಬಡಿಕೆಯ ಪತ್ರಿಕೆಗಳು ಹೆಚ್ಚು ಉದ್ದವಾಗಿವೆ.

ಆದರೆ ಹೊಸ ಒಡಂಬಡಿಕೆಯ ಪತ್ರಿಕೆಗಳು ರೋಮನ್ ಸಾಮ್ರಾಜ್ಯದ ದಿನಗಳಿಂದ ಸಾವಿರಾರು ಪತ್ರಿಕೆಗಳಿಗಿಂತ ದೀರ್ಘವಾಗಿವೆ. ಉದಾಹರಣೆಗೆ ಹೊಸ ಒಡಂಬಡಿಕೆಯ ಪತ್ರಿಕೆಯಲ್ಲಿ ಸಾಮಾನ್ಯವಾಗಿ ನಾವು ಆರಂಭದಲ್ಲಿ ಒಂದು ಸ್ತುತಿವಾಕ್ಯ ಮತ್ತು ಒಂದು ಆಶೀರ್ವಾದವನ್ನು ಮತ್ತು ಕೊನೆಯಲ್ಲಿ ಒಂದು ಅಂತ್ಯ ಆಶೀರ್ವಾದವನ್ನು ಕಾಣುತ್ತೇವೆ. ಹೆಚ್ಚುವರಿಯಾಗಿ, ಹೆಚ್ಚಿನ ಹೊಸ ಒಡಂಬಡಿಕೆಯ ಪತ್ರಿಕೆಗಳ ಮುಖ್ಯಭಾಗವು ಆದಿಸಭೆಯಲ್ಲಿನ ದೈವಶಾಸ್ತ್ರೀಯ ಮತ್ತು ನೈತಿಕ ಸಮಸ್ಯೆಗಳೊಂದಿಗೆ ವ್ಯವಹರಿಸಿದ ವಿಧಾನವು ವಿವರಣೆಯಾಗಿರುತ್ತದೆ.

## ಕಳುಹಿಸುವವನು

ಗಲಾತ್ಯ ಪತ್ರಿಕೆಯನ್ನು ಕಳುಹಿಸುವವನು ತನ್ನನ್ನು ಪೌಲನೆಂಬುದಾಗಿ ಕರೆದುಕೊಳ್ಳುತ್ತಾನೆ ಮತ್ತು ತನ್ನನ್ನು ಆತನು ಒಬ್ಬ ಅಪೊಸ್ತಲನೆಂಬುದಾಗಿ ವರ್ಣಿಸುತ್ತಾನೆ (1:1). ಪೌಲನು ಹೊಸ ಒಡಂಬಡಿಕೆಯಲ್ಲಿನ ಒಬ್ಬ ಮುಖ್ಯ ವ್ಯಕ್ತಿಯಾಗಿದ್ದಾನೆ. ನಾವು ಆತನನ್ನು ಮೊದಲು ಅಪೊಸ್ತಲರ ಕೃತ್ಯಗಳಲ್ಲಿ ಯೆರೂಸಲೇಮ್ ಮತ್ತು ಯೂದಾಯದಲ್ಲಿನ ಸಭೆಗಳನ್ನು ಹಿಂಸಿಸುವ ಹಿಂಸಕನನ್ನಾಗಿ ಸಂಧಿಸುತ್ತೇವೆ. ಆದರೆ ದಮಸ್ಕದ ದಾರಿಯಲ್ಲಿ ಕ್ರಿಸ್ತನು ಆತನಿಗೆ ಕಾಣಿಸಿಕೊಂಡು ಕ್ರೈಸ್ತೀಯ ಸೇವೆಗೆ ಕರೆದನು. ಅನಂತರ ನಾವು ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ಸುಮಾರು ಕ್ರಿ.ಶ. 34 ರಿಂದ ಕ್ರಿ.ಪೂ. 62 ರವರೆಗೆ ಹೆಚ್ಚೂ ಕಡಿಮೆ 30 ವರ್ಷಗಳ ಕಾಲ ಒಬ್ಬ

ಸಭಾಪಾಲಕ ಮತ್ತು ಮಿಷನರಿಯಾಗಿ ತನ್ನ ಕರ್ತನು ಮತ್ತು ರಕ್ಷಕನಿಗೆ ಸೇವೆ ಮಾಡಿ ಕೈಸರೆ ಮತ್ತು ರೋಮಿನಲ್ಲಿ ತನ್ನ ಸೆರೆಯೊಂದಿಗೆ ಮುಕ್ತಾಯಗೊಳಿಸುವುದರ ಬಗ್ಗೆ ನಾವು ಓದುತ್ತೇವೆ. ಅಪೊಸ್ತಲರ ಕೃತ್ಯಗಳಲ್ಲಿ ಲೂಕನ ಪ್ರಕಾರ ರೋಮಿನಲ್ಲಿ ಮುಕ್ತಾಯಗೊಳ್ಳುತ್ತದೆ. ಆದರೆ ಪೌಲನ ನಂತರದ ವರ್ಷಗಳ ಬಗ್ಗೆ ಯಾವುದೇ ಮಾಹಿತಿಯಿಲ್ಲ.

ಪೌಲನು ಯೇಸುಕ್ರಿಸ್ತನ ಮೂಲ ಹನ್ನೆರಡು ಅಪೊಸ್ತರಲ್ಲಿ ಒಬ್ಬನಾಗಿರಲಿಲ್ಲ ಮತ್ತು ಬಹುಶಃ ಆತನು ವ್ಯಕ್ತಿರೂಪದಲ್ಲಿದ್ದ ಯೇಸುವನ್ನು ತನ್ನ ದಮಸ್ಕದ ರಸ್ತೆಯ ಮೇಲಿನ ನಾಟಕೀಯ ಅನುಭವದವರೆಗೂ ಎಂದೂ ಸಂಧಿಸಿರಲಿಲ್ಲ. ಆದರೂ ಪೌಲನು ಯೇಸುಕ್ರಿಸ್ತನು ಮತ್ತು ತಂದೆಯ ಮೂಲಕ ಅನ್ಯಜನರ ನಡುವೆ ಸೇವೆ ಮಾಡಲು ನೇಮಿಸಲ್ಪಟ್ಟ ಒಬ್ಬ ಅಪೊಸ್ತಲನೆಂಬುದಾಗಿ ತನ್ನನ್ನು ಕರೆದುಕೊಳ್ಳುತ್ತಾನೆ (1:1, 17, 2:8).

## ಸ್ವೀಕೃತರು

ಪೌಲನು ತನ್ನ ಪತ್ರಿಕೆಯನ್ನು ಗಲಾತ್ಯದಲ್ಲಿರುವ ಸಭೆಗಳಿಗೆ ಬರೆಯುತ್ತಾನೆ (1:2) ಮತ್ತು ಅವರನ್ನು "ಬುದ್ಧಿಯಿಲ್ಲದ ಗಲಾತ್ಯದವರೇ" ಎಂದು ಕರೆಯುತ್ತಾನೆ (3:1). ಗಲಾತ್ಯದವರು ಇಂಥವರಾಗಿದ್ದರೆಂಬುದನ್ನು ಸತ್ಯವೇದ ಪಂಡಿತರುಗಳು ಒಪ್ಪುವುದಿಲ್ಲ. ಈ ವಿವಾದಕ್ಕೆ ಕಾರಣವು ಆ ದಿನಗಳಲ್ಲಿನ "ಗಲಾತ್ಯವು" ಎರಡು ವಿಭಿನ್ನವಾದ ಭೌಗೋಳಿಕ ಪ್ರದೇಶಗಳನ್ನು ಒಳಗೊಂಡಿತ್ತು, ಒಂದು ಸಣ್ಣ ಪ್ರದೇಶ (ಗಲಾತ್ಯದ ಜಿಲ್ಲೆ) ಮತ್ತು ವಿಶಾಲವಾದ ಪ್ರದೇಶ (ಗಲಾತ್ಯದ ಪ್ರಾಂತ್ಯ). ಅಲ್ಲದೇ ಇದು ಸಣ್ಣ ಜಿಲ್ಲೆಗಳನ್ನೂ ಸಹ ಒಳಗೊಂಡಿತ್ತು.

ಆದರೆ ಗಲಾತ್ಯದವರು ನಿಜವಾಗಲೂ ಯಾರಾಗಿದ್ದರೆಂಬ ಸಮಸ್ಯೆ ಮತ್ತು ಅವರ ನಿಖರವಾದ ಭೌಗೋಳಿಕ ಪ್ರದೇಶವು ಪೌಲನು ಸಂಬೋಧಿಸುವ ಸಭೆಯ ವಿಶ್ವಾಸಿಗಳ ಹಿನ್ನಲೆಯ ಕುರಿತು ನಮ್ಮ ತಿಳುವಳಿಕೆಗೆ ಪ್ರಾಮುಖ್ಯವಾದದ್ದಲ್ಲ. ಅವರು ಅನ್ಯಜನರಾಗಿದ್ದು ಅವರ ಮಧ್ಯದಲ್ಲಿನ ಪೌಲನ ಸೇವೆಯ ಪರಿಣಾಮವಾಗಿ ಅವರು ಕ್ರಿಸ್ತನನ್ನು ಅಂಗೀಕರಿಸಿದ್ದರು (4:8, 1:8, 11, 4:13).

"ಗಲಾತ್ಯದವರು" ಮತ್ತು "ಗಲಾತ್ಯದ" ಕುರಿತಾಗಿ ಹೆಚ್ಚಿನ ಮಾಹಿತಿಗಾಗಿ ಪುಸ್ತಕದ ಕೊನೆಯಲ್ಲಿನ ಪರಿವಿಡಿಯಲ್ಲಿ **ಯಾರು ಮತ್ತು ಯಾವಾಗ?** ನೋಡಿ.

## ಪತ್ರಿಕೆಯು ಯಾವಾಗ ಬರೆಯಲ್ಪಟ್ಟಿತು?

**ಪತ್ರಿಕೆಯ ದಿನಾಂಕವು ಈ ಎರಡು ಪ್ರಶ್ನೆಗಳ ವಿಶಾಲವಾದ ಉತ್ತರದ ಮೇಲೆ ಅವಲಂಭನೆಯಾಗಿದೆ:**

- ಪೌಲನು ಬರೆದ "ಗಲಾತ್ಯದವರು" ಯಾರಾಗಿದ್ದಾರೆ?
- ಗಲಾತ್ಯ 2:1-10 ರಲ್ಲಿ ಯೆರೂಸಲೇಮಿನಲ್ಲಿ ಅಪೊಸ್ತಲರೊಂದಿಗಿನ ಪೌಲನ ಭೇಟಿಯು ಅಪೊಸ್ತಲರ ಕೃತ್ಯ 15 ರಲ್ಲಿ "ಯೆರೂಸಲೇಮಿನ ಸಮ್ಮೇಳನ" ದಂತಹ ಭೇಟಿಯಾಗಿತ್ತಾ?

ಗಲಾತ್ಯ ಪತ್ರಿಕೆಯು ಪೌಲನ ಮೊದಲ ಸೇವಾ ಪ್ರಯಾಣದ ನಂತರ (ಬಹುಶಃ ಇದು ಕ್ರಿ.ಶ. 48 ರಿಂದ 49 ರ ಅವಧಿಯಲ್ಲಿ) ನಡೆದದ್ದು. ಆದರೆ ಯೆರೂಸಲೇಮಿನ ಸಮ್ಮೇಳನಕ್ಕಿಂತ ಮೊದಲು (ಬಹುಶಃ ಇದು ಕ್ರಿ.ಶ 49 ರಲ್ಲಿ ನಡೆದದ್ದು) ಬರೆಯಲ್ಪಟ್ಟಿದೆ ಎಂಬುದಾಗಿ ಅನೇಕ ಸತ್ಯವೇದ ಪಂಡಿತರುಗಳು ಯೋಚಿಸುತ್ತಾರೆ.

ಗಲಾತ್ಯ ಪತ್ರಿಕೆಯು ಪೌಲನ ಮೂರನೇ ಸೇವಾ ಪ್ರಯಾಣದ ಅವಧಿಯಲ್ಲಿ (ಬಹುಶಃ ಇದು ಕ್ರಿ.ಶ. 53 ರಿಂದ 57 ರಲ್ಲಿ ನಡೆದದ್ದು) ಬರೆಯಲ್ಪಟ್ಟಿತೆಂಬುದಾಗಿ ಉಳಿದ ಸತ್ಯವೇದ ಪಂಡಿತರುಗಳು ಯೋಚಿಸುತ್ತಾರೆ. ಗಲಾತ್ಯ ಪತ್ರಿಕೆಯು ಪೌಲನ ಮೂರನೇ ಸೇವಾ ಪ್ರಯಾಣದ ಕೊರಿಂಥದಿಂದ ಬರೆಯಲ್ಪಟ್ಟ ರೋಮಾಪುರದವರಿಗೆ ಬರೆದ ಪತ್ರಿಕೆಯ ವಿಷಯಗಳಿಗೆ ಸಮಾನವಾಗಿರುವುದು. ಇದಕ್ಕೆ ನಂತರದ ದಿನಾಂಕವನ್ನು ಕೊಡಲು ಇರುವ ಒಂದು ಕಾರಣವಾಗಿದೆ.

ಈ ಪಠ್ಯಪುಸ್ತಕದಲ್ಲಿ ನಾವು ಎರಡನೇ ಆಯ್ಕೆಯನ್ನು ಅನುಸರಿಸಲಿದ್ದೇವೆ. ಆರನೇ ಅಧ್ಯಯನದಲ್ಲಿ ನಾವು ಗಲಾತ್ಯ 2:1-10 ನ್ನು ಅಪೊಸ್ತಲರ ಕೃತ್ಯಗಳು ಅಧ್ಯಾಯ 15 ರೊಂದಿಗೆ ಹೋಲಿಸಿ, ಎರಡು ಸಂಗತಿಗಳು ಸಹ ಬಹುಶಃ ಯೆರೂಸಲೇಮಿನಲ್ಲಿ ಪೌಲ ಬಾರ್ನಬ ಮತ್ತು ಅಪೊಸ್ತಲರ ನಡುವಿನ ಆದಿಸಭೆಯನ್ನೇ ಸೂಚಿಸುತ್ತದೆಂಬ ತೀರ್ಮಾನಕ್ಕೆ ಬರುತ್ತದೆ.

ಗಲಾತ್ಯ ಪತ್ರಿಕೆಯು ಯಾವಾಗ ಬರೆಯಲ್ಪಟ್ಟಿತ್ತೆಂಬುದರ ಕುರಿತು ಹೆಚ್ಚಿನ ಮಾಹಿತಿಗಾಗಿ ಈ ಪುಸ್ತಕದ ಕೊನೆಯಲ್ಲಿ ಪರಿವಿಡಿಯಲ್ಲಿನ ಯಾರು ಮತ್ತು ಯಾವಾಗ? ನೋಡಿರಿ.

## ಪತ್ರಿಕೆಯ ಸಂದರ್ಭ

ಪೌಲನು ಗಲಾತ್ಯದವರನ್ನು ಬಿಟ್ಟುಹೋದಾಗ ಎಲ್ಲವೂ ಸರಿಯಾಗಿತ್ತು. ಆತನು ತಮಗೆ ಸಾರಿದ ಸುವಾರ್ತೆಯನ್ನು ಅವರು ಅರ್ಥೈಸಿಕೊಂಡಿದ್ದರು. ಅವರು ಯೇಸುಕ್ರಿಸ್ತನನ್ನು ತಮ್ಮ ಸ್ವಂತ ರಕ್ಷಕನಾಗಿ ಅಂಗೀಕರಿಸಿದರು. ಅವರು ತಮ್ಮ ಹಳೆಯ ಅನ್ಯ ಪಾಪಮಯ ಮಾರ್ಗಗಳನ್ನು ಬಿಟ್ಟು ಬಿಟ್ಟು ಪವಿತ್ರಾತ್ಮನಿಂದ ನಿಯಂತ್ರಿಸಲ್ಪಟ್ಟ ಬದುಕನ್ನು ನಡೆಸುತ್ತಿದ್ದರು.

ಆದರೆ ಆಗ ಏನೋ ಸಂಭವಿಸಿತು. ಒಂದು ಹೊಸ ಸಂದೇಶವನ್ನು ಹರಡುವ ಬೇರೆ ಪ್ರಸಂಗಿಗಳು (ಬೋಧಕರುಗಳು) ಈ ಜನರನ್ನು ನಾವು ಯೆಹೂದಿ ಮತದವರೆಂದು ಕರೆಯುತ್ತೇವೆ. ಅವರ ಹಿನ್ನಲೆಯು ಯೆಹೂದಿಯಾಗಿತ್ತು. ಅನ್ಯ ಹಿನ್ನಲೆ ವಿಶ್ವಾಸಿಗಳು ದೀಕ್ಷಾಸ್ನಾನ ಮಾಡಿಸಿಕೊಂಡು ತಮ್ಮ ಹಳೆಯ ಅನ್ಯ ಆಚಾರಗಳನ್ನು ಬಿಟ್ಟು ಬರುವುದಷ್ಟೇ ಸಾಲದು ಎಂಬುದು ಅವರ ಸಿದ್ಧಾಂತವಾಗಿತ್ತು. ಅವರು ತಾವು ದೇವಜನರಿಗೆ ಸೇರಿದವರಾಗಿದ್ದೇವೆ ಎಂಬುದರ ಸಂಕೇತವಾಗಿ ಸುನ್ನತಿ ಮಾಡಿಸಿಕೊಳ್ಳಬೇಕಿತ್ತು ಮತ್ತು ಹಾಗೆಯೇ ಮೋಶೆಯ ಧರ್ಮಶಾಸ್ತ್ರವನ್ನು ಪಾಲಿಸಬೇಕಿತ್ತು. ಅನ್ಯವಿಶ್ವಾಸಿಗಳು “ಯೆಹೂದಿ ಕ್ರೈಸ್ತ” ವಿಶ್ವಾಸಿಗಳಾಗುವುದು ಅವಶ್ಯಕವಾಗಿತ್ತು ಎಂಬುದಾಗಿ ಯೆಹೂದಿ ಮತದವರು ಸಾರಿದರು.

ಪೌಲನು ಇದನ್ನು ಕೇಳಿದಾಗ ಆತನು ತೀವ್ರವಾಗಿ ನೊಂದುಕೊಂಡು ಚಿಂತಿತನಾದನು. ಸುವಾರ್ತೆಯ ಸತ್ಯವು ಅಂಚಿನಲ್ಲಿದೆ ಎಂಬುದಾಗಿ ಆತನು ಅರಿತುಕೊಂಡನು. ಹಾಗಾಗಿ ಸಮಸ್ಯೆಗಳನ್ನು ತಿಳಿಸಿ, ವಿಷಯಗಳನ್ನು ಪುನಃ ಕ್ರಮಪಡಿಸುವುದಕ್ಕಾಗಿ ಗಲಾತ್ಯದಲ್ಲಿರುವ ಸಭೆಗೆ ಒಂದು ಪತ್ರಿಕೆಯನ್ನು ಬರೆಯಲು ಆತನು ನಿರ್ಧರಿಸಿದನು. ಯಾಕೆ ತಾನು ಮತ್ತು ತನ್ನ ಸುವಾರ್ತೆಯು ಸರಿ ಮತ್ತು ಯಾಕೆ ಯೆಹೂದಿ ಮತದವರು ಮತ್ತು ಅವರ ಸುವಾರ್ತೆಯು ತಪ್ಪಾದದ್ದಾಗಿದೆ ಎಂಬುದನ್ನು ಗಲಾತ್ಯದವರಿಗೆ ವಿವರಿಸಲು ಆತನು ಬಯಸಿದನು.

## ಈ ಪತ್ರಿಕೆ ಇಂದು ನಮಗೆ ಸಂಬಂಧಪಡುತ್ತದೆಯೋ?

ಪೌಲನು ಗಲಾತ್ಯ ಪತ್ರಿಕೆಯನ್ನು 21 ನೇ ಶತಮಾನದಲ್ಲಿನ ಕರ್ನಾಟಕದ ಸಭೆಗಳಿಗೆ ಬರೆಯಲಿಲ್ಲ, ಬದಲಾಗಿ ರೋಮನ್ ಸಾಮ್ರಾಜ್ಯದ ಸಮಯದಲ್ಲಿ ಗಲಾತ್ಯದಲ್ಲಿರುವ ಸಭೆಗಳಿಗೆ ಬರೆದನು. ಆ ದಿನಗಳಲ್ಲಿ ತನಗೆ ಮತ್ತು ಗಲಾತ್ಯದ ಸಭೆಗಳಿಗೆ ಅತೀ ಪ್ರಾಮುಖ್ಯವಾದ ವಿಷಯಗಳೊಂದಿಗೆ ಪೌಲನು ವ್ಯವಹರಿಸಿದನೆಂಬುದು ಇದರರ್ಥವಾಗಿದೆ. ಹಾಗಾಗಿ “ಈ ಪತ್ರಿಕೆಯು ಇಂದು ನಮಗೆ ಸಂಬಂಧ

ಪಡುತ್ತದಾ?" ಎಂಬ ಪ್ರಶ್ನೆಯನ್ನು ಕೇಳುವುದು ಸಮಂಜಸವಾಗಿದೆ. ಒಂದು ವೇಳೆ ನಮ್ಮ ಉತ್ತರವು "ಹೌದು" ಎಂದಾದರೆ, "ಯಾವ ರೀತಿಯಲ್ಲಿ ಗಲಾತ್ಯ ಪತ್ರಿಕೆ ನಮಗೆ ಸಂಬಂಧಪಡುತ್ತದೆ?" ಎಂಬ ಇನ್ನೊಂದು ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕು.

ಮೊದಲ ಪ್ರಶ್ನೆಗೆ ಉತ್ತರವು "ಹೌದು" ಎಂದಾಗಿದೆ, ಗಲಾತ್ಯದಲ್ಲಿರುವ ಸಭೆಗಳಿಗೆ ಪೌಲನು ಬರೆದ ಪತ್ರಿಕೆಯು ನೇರವಾಗಿ ನಮಗೆ ಬರೆಯಲ್ಪಡದಿದ್ದರೂ ಸಹ ಇಂದು ಕ್ರಿಸ್ತನಲ್ಲಿನ ವಿಶ್ವಾಸಿಗಳಿಗೆ ಸಂಬಂಧಪಡುತ್ತದೆ.

ಎರಡನೇ ಪ್ರಶ್ನೆಯ ಉತ್ತರವು ಕ್ಲಿಷ್ಟಕರವಾಗಿದೆ, ಆದರೆ ಅದನ್ನು ಈ ರೀತಿ ಸಾರಾಂಶಗೊಳಿಸಬಹುದಾಗಿದೆ: ಗಲಾತ್ಯದಲ್ಲಿನ ಸಭೆಗಳ ಪರಿಸ್ಥಿತಿಯೊಂದಿಗೆ ತಾನು ವ್ಯವಹರಿಸುವಾಗ ಪೌಲನು ಯಾವಾಗಲೂ ಮತ್ತು ಎಲ್ಲಾ ಕಡೆಯಿರುವ ಕ್ರೈಸ್ತ ಸಭೆಗಳಿಗೆ ಅನ್ವಯವಾಗುವ ಬಹು ಪ್ರಾಮುಖ್ಯವಾದ ಕ್ರೈಸ್ತ ಬೋಧನೆಗಳನ್ನು (ತತ್ವ) ಸ್ಪಷ್ಟಪಡಿಸಿದ್ದೇ ಗಲಾತ್ಯ ಪತ್ರಿಕೆಯು ಇಂದು ಕ್ರಿಸ್ತನಲ್ಲಿರುವ ವಿಶ್ವಾಸಿಗಳಿಗೆ ಸಂಬಂಧಿಸಲು ಕಾರಣವಾಗಿದೆ. ಈ ಬೋಧನೆ (ತತ್ವ) ಗಳು ನಿಜವಾದ (ಸತ್ಯ) ಸುವಾರ್ತೆಯ ಸಂದೇಶ (ನ್ಯಾಯ, ನೀತಿ ಮತ್ತು ರಕ್ಷಣೆ) ಮತ್ತು ಒಬ್ಬ ನಿಜವಾದ ವಿಶ್ವಾಸಿಯ ದೈನಂದಿನ ಜೀವಿತಕ್ಕೆ ಸಂಬಂಧಿಸಿದೆ.

ಈ ಪ್ರಶ್ನೆಗಳನ್ನು ನಾವು **ಅಧ್ಯಯನ 16: ನಮಗಾಗಿನ ಗಲಾತ್ಯ ಪತ್ರಿಕೆಯ ಸಂದೇಶದಲ್ಲಿ** ವಿವರವಾಗಿ ನೋಡಲಿದ್ದೇವೆ.

## ಪ್ರಶ್ನೆಗಳು

ಈ ಪ್ರಶ್ನೆಗಳನ್ನು ಮೇಲ್ಕಂಡ ಪಠ್ಯಗಳಲ್ಲಿ ಸುಲಭವಾಗಿ ಕಂಡುಕೊಳ್ಳಬಹುದು, ಹಾಗಾಗಿ ಈ ಪುಸ್ತಕದ ಉತ್ತರ ವಿಭಾಗದಲ್ಲಿ ಯಾವುದೇ ಉತ್ತರಗಳನ್ನು ಕೊಟ್ಟಿರುವುದಿಲ್ಲ. ಆದರೆ ಮೇಲ್ಕಂಡ ಪಠ್ಯವನ್ನು ನೋಡದೆ ಪ್ರಶ್ನೆಗಳನ್ನು ಉತ್ತರಿಸಲು ಪ್ರಯತ್ನಿಸಿರಿ.

1. ರೋಮನ್ ಸಾಮ್ರಾಜ್ಯದ ಸಮಯದಲ್ಲಿನ ಒಂದು ಸಾಮಾನ್ಯ ಪತ್ರಿಕೆ ಮತ್ತು ಹೊಸ ಒಡಂಬಡಿಕೆಯಲ್ಲಿ ಕಂಡುಬರುವ ಪತ್ರಿಕೆಯ ನಡುವಿನ ವ್ಯತ್ಯಾಸವನ್ನು ವಿವರಿಸಿರಿ.
2. ಗಲಾತ್ಯ ಪತ್ರಿಕೆಯ ಸ್ವೀಕೃತರನ್ನು ಸತ್ಯವೇದ ಪಂಡಿತರು ಯಾಕೆ ಒಪ್ಪುವುದಿಲ್ಲವೆಂಬುದನ್ನು ವಿವರಿಸಿರಿ.
3. ಗಲಾತ್ಯ ಪತ್ರಿಕೆ ಯಾವಾಗ ಬರೆಯಲ್ಪಟ್ಟಿತೆಂಬುದನ್ನು ಸತ್ಯವೇದ ಪಂಡಿತರು ಯಾಕೆ ಒಪ್ಪುತ್ತಿಲ್ಲವೆಂಬುದನ್ನು ವಿವರಿಸಿರಿ.
4. ಪೌಲನು ಗಲಾತ್ಯ ಪತ್ರಿಕೆಯನ್ನು ಯಾಕೆ ಬರೆದನೆಂಬುದನ್ನು ವಿವರಿಸಿರಿ.
5. ಎರಡು ಸಾವಿರ ವರ್ಷಗಳ ಹಿಂದೆ ಜಗತ್ತಿನ ವಿಭಿನ್ನ (ಬೇರೆ) ಭಾಗದಲ್ಲಿ ಜೀವಿಸುತ್ತಿದ್ದ ಜನರಿಗೆ ಗಲಾತ್ಯ ಪತ್ರಿಕೆಯು ಬರೆಯಲ್ಪಟ್ಟಿದೆ. ಹಾಗಾದರೆ ಯಾಕೆ ಈ ಪತ್ರಿಕೆಯು ಕ್ರಿಸ್ತನಲ್ಲಿರುವ ವಿಶ್ವಾಸಿಗಳಿಗೆ ಸಹ ಅನ್ವಯವಾಗುತ್ತದೆ?

# ಅಧ್ಯಯನ 1: ಇಡೀ ಪತ್ರಿಕೆಯನ್ನು ಓದಿರಿ

## ಪೀಠಿಕೆ

ಪೌಲನಿಂದ ಗಲಾತ್ಯದಲ್ಲಿರುವ ಸಭೆಗಳು ಸ್ವೀಕರಿಸಿದ ಪತ್ರಿಕೆಯನ್ನು ನಾವಿಂದು "ಗಲಾತ್ಯದವರಿಗೆ" ಎಂದು ಕರೆಯುತ್ತೇವೆ. ಭಾನುವಾರದ ಆರಾಧನೆಯಲ್ಲಿ ಸಭೆ ಸೇರಿದಾಗ ಸಭೆಯ ಹಿರಿಯರೆಲ್ಲರೂ ಪ್ರಾರಂಭದಿಂದ ಕೊನೆಯವರೆಗೂ ಇಡೀ ಪತ್ರಿಕೆಯನ್ನು ಓದಲಿ. ಇದು ನಾವಿಂದು ನಮ್ಮ ಸಭೆಗಳಲ್ಲಿ ಹೊಸ ಒಡಂಬಡಿಕೆಯ ಪುಸ್ತಕಗಳನ್ನು ಓದಿದಂತೆ ಅಲ್ಲ. ಬದಲಾಗಿ ಪಠ್ಯದ ವಿಸ್ತಾರವಾದ ಹಿನ್ನಲೆಗೆ ಹೆಚ್ಚು ಗಮನ ಕೊಡದೆ ಸತ್ಯವೇದದ ಒಂದು ಚಿಕ್ಕ ಭಾಗವನ್ನು ಆಯ್ದುಕೊಂಡು ಓದುವುದಾಗಿದೆ.

ಒಂದು ಹೊಸ ಒಡಂಬಡಿಕೆಯ ಪುಸ್ತಕದ ಗಂಭೀರವಾದ ಅಧ್ಯಯನವು ಈ ರೀತಿ ಇರಬೇಕು: ವಾಕ್ಯಭಾಗದ ಸಂದೇಶವನ್ನು ನಮ್ಮ ಸ್ವಂತ ಸನ್ನಿವೇಶಕ್ಕೆ ಅಳವಡಿಸುವ ಮುಕ್ತಾಯದೊಂದಿಗೆ ಪ್ರತೀ ವಾಕ್ಯಭಾಗವನ್ನು ವಿವರವಾಗಿ ಅಭ್ಯಾಸಿಸುವುದರೊಂದಿಗೆ ಇಡೀ ಪುಸ್ತಕವನ್ನು ಓದಬೇಕಿದೆ.

ಈ ಪುಸ್ತಕದಲ್ಲಿನ ಗಲಾತ್ಯ ಪತ್ರಿಕೆಯನ್ನು ನಾವು ಮೂರು ಹಂತಗಳಲ್ಲಿ ಅಧ್ಯಯನ ಮಾಡಲಿದ್ದೇವೆ: ಮೊದಲನೇಯದಾಗಿ, ಪೌಲನ ಪೂರ್ಣಸಂದೇಶದ ಒಂದು ಭಾವನೆಯನ್ನು ಹೊಂದಿಕೊಳ್ಳಲು ಇಡೀ ಪುಸ್ತಕವನ್ನು ಒಮ್ಮೆ ಕುಳಿತು ಓದುವುದು, ಅನಂತರ ಪೌಲನ ವಾದ ಮತ್ತು ಅಂಶಗಳ ಒಂದು ಸರಿಯಾದ ತಿಳುವಳಿಕೆಯನ್ನು ಹೊಂದಿಕೊಳ್ಳಲು ಪ್ರತೀ ವಾಕ್ಯಭಾಗದ ವಿವರವಾದ ಅಧ್ಯಯನ. ಕೊನೆಯ ಅಧ್ಯಯನವು ಕ್ರಿಸ್ತನಲ್ಲಿನ ಇಂದಿನ ವಿಶ್ವಾಸಿಗಳಿಗೆ ಗಲಾತ್ಯ ಪತ್ರಿಕೆಯ ಪ್ರಸ್ತುತತೆಯನ್ನು ಎತ್ತಿ ತೋರಿಸುತ್ತದೆ.

## ಓದಿರಿ ಮತ್ತು ಉತ್ತರಿಸಿರಿ

ಗಲಾತ್ಯದವರಿಗೆ ಬರೆದ ಇಡೀ ಪತ್ರಿಕೆಯನ್ನು ಒಬ್ಬರಾದ ನಂತರ ಒಬ್ಬರು ಗುಂಪಿನಲ್ಲಿ ಜೋರಾಗಿ ಓದಿರಿ. ಪ್ರತೀ ಅಧ್ಯಾಯ ಓದಿ ಮುಗಿದ ಮೇಲೆ ಕೆಳಕಂಡ ಪ್ರಶ್ನೆಗಳನ್ನು ಒಟ್ಟಾಗಿ ಉತ್ತರಿಸಲು ಪ್ರಯತ್ನಿಸಿರಿ. ಪ್ರತೀ ಪ್ರಶ್ನೆಯಲ್ಲಿ ಹೆಚ್ಚು ಸಮಯ ಕಳೆಯಬೇಡಿ. ಮುಂದಿನ ಅಧ್ಯಯನಗಳಲ್ಲಿ ಮತ್ತೆ ನಾವು ಅವುಗಳನ್ನು ವಿವರವಾಗಿ ನೋಡಲಿದ್ದೇವೆ.

**ಅಧ್ಯಾಯ 1**

1. ಪೌಲನು ಗಲಾತ್ಯದವರೊಂದಿಗೆ ಹಂಚಿಕೊಂಡ ಸುವಾರ್ತೆಯನ್ನು ಎಲ್ಲಿಂದ ಪಡೆದಿದ್ದನು?
2. ಪೌಲನನ್ನು ಅಪೊಸ್ತಲನನ್ನಾಗಿ ನೇಮಿಸಿದವರು ಯಾರು?
3. ಯೂದಾಯದಲ್ಲಿನ ಸಭೆಗಳು ಯಾಕೆ ಪೌಲನಿಗಾಗಿ ದೇವರನ್ನು ಕೊಂಡಾಡುತ್ತಾರೆ?

**ಅಧ್ಯಾಯ 2**

1. ಯೆರೂಸಲೇಮಿನಲ್ಲಿನ ಸಭೆಯ ಮುಖ್ಯ ನಾಯಕರುಗಳಾಗಿ ಯಾರು ಪರಿಗಣಿಸಲ್ಪಟ್ಟಿದ್ದರು?
2. ಯೆರೂಸಲೇಮಿನ ನಾಯಕರೊಂದಿಗಿನ ಪೌಲ ಮತ್ತು ಬಾರ್ನಬರ ಭೇಟಿಯ ಅಂತ್ಯವೇನಾಗಿತ್ತು?
3. ಯೆರೂಸಲೇಮಿಗೆ ಕೊಟ್ಟ ತನ್ನ ಭೇಟಿಯ ಸಂಬಂಧದಲ್ಲಿ ಪೌಲನು ತೀತನ ಬಗ್ಗೆ ಯಾಕೆ ಹೇಳುತ್ತಾನೆ?

4. ಪೌಲನ ಸುವಾರ್ತೆಗನುಸಾರವಾಗಿ ನಾವು ಹೇಗೆ ನೀತಿವಂತರೆಂದು ನಿರ್ಣಯಿಸಲ್ಪಡುತ್ತೇವೆ?

**ಅಧ್ಯಾಯ 3**

1. ವಿಶ್ವಾಸಿಗಳು ಮತ್ತು ಅಬ್ರಹಾಮನ ನಡುವಿನ ಸಂಬಂಧವೇನು?
2. ಕ್ರಿಸ್ತನಲ್ಲಿ ನಂಬಿಕೆಗೆ ಬರುವುದಕ್ಕಿಂತ ಮೊದಲು ಧರ್ಮಶಾಸ್ತ್ರದ ಪಾತ್ರವೇನಾಗಿತ್ತು?
3. ಪೌಲನು ಗಲಾತ್ಯದವರೊಂದಿಗೆ ಸುವಾರ್ತೆಯನ್ನು ಸಾರುವಾಗ, ಅವರಿಗೆ ಯೇಸುಕ್ರಿಸ್ತನನ್ನು ಹೇಗೆ ವಿವರಿಸುತ್ತಾನೆ (ವರ್ಣಿಸುತ್ತಾನೆ)?
4. ಸಭೆಯ ಐಕ್ಯತೆಯನ್ನು ಪೌಲನು ಹೇಗೆ ವಿವರಿಸುತ್ತಾನೆ ("ಕ್ರಿಸ್ತನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರೂ ಕ್ರಿಸ್ತನನ್ನು ಧರಿಸಿಕೊಂಡಿರಿ")?

**ಅಧ್ಯಾಯ 4**

1. ದೇವರನ್ನು ಅರಿತುಕೊಳ್ಳುವುದಕ್ಕಿಂತ ಮುಂಚಿನ ಗಲಾತ್ಯದವರ ಜೀವಿತವನ್ನು ಪೌಲನು ಹೇಗೆ ವಿವರಿಸುತ್ತಾನೆ?
2. ವಾಗ್ದಾನದ ಫಲವಾಗಿ ಹುಟ್ಟಿದವರು ಯಾವ ಒಡಂಬಡಿಕೆಗೆ ಸೇರಿದವರಾಗಿದ್ದಾರೆ?
3. ಮಕ್ಕಳಾದ ನಾವು ಎಂದಿಗೂ ದಾಸರಲ್ಲ. ನಮ್ಮ ಪುತ್ರತ್ವವನ್ನು ವಿವರಿಸಲು ಪೌಲನು ಯಾವ ಹೇಳಿಕೆಯನ್ನು ಕೊಡುತ್ತಾನೆ?

**ಅಧ್ಯಾಯ 5**

1. "ದಾಸತ್ವದ ನೊಗ" ಮತ್ತು ಸುನ್ನತಿಯ ನಡುವೆ ಪೌಲನು ಯಾವ ಸಂಬಂಧವನ್ನು ಕಲ್ಪಿಸುತ್ತಾನೆ?
2. ಧರ್ಮಶಾಸ್ತ್ರದ ಮೂಲಕ ನೀತಿವಂತರೆಂದು ನಿರ್ಣಯಿಸಲ್ಪಡಲು ಅವರು ಪ್ರಯತ್ನಿಸಿದರೆ ಗಲಾತ್ಯದವರಿಗೆ ಅದರಿಂದಾಗುವ ಪರಿಣಾಮವೇನು?
3. ಅಧ್ಯಾಯದ ಎರಡನೇ ಭಾಗದಲ್ಲಿ ಪೌಲನು ಜೀವನದ ಎರಡು ವಿಧಗಳನ್ನು ತದ್ವಿರುದ್ಧವಾಗಿ ತೋರಿಸುತ್ತಾನೆ. ಅವು ಯಾವುವು?

**ಅಧ್ಯಾಯ 6**

1. ಅಧ್ಯಾಯದ ಮೊದಲ ಭಾಗದಲ್ಲಿ ಪೌಲನು ಗಲಾತ್ಯದವರಿಗೆ ಕ್ರೈಸ್ತೀಯ ಜೀವನಶೈಲಿಯ ಕುರಿತು ಅನೇಕ ಅಂಶಗಳನ್ನು ಕೊಡುತ್ತಾನೆ. ಇಂದು ಯಾವುದು ಕ್ರಿಸ್ತನಲ್ಲಿರುವ ಸಹೋದರರಿಗೆ ಹೆಚ್ಚು ಸವಾಲಿನದ್ದಾಗಿದೆ ಎಂಬುದಾಗಿ ನೀವು ಯೋಚಿಸುವಿರಿ.
2. ಮನುಷ್ಯರಾಗಿ ನಾವು ಅನೇಕ ಸಂಗತಿಗಳ ಬಗ್ಗೆ ಹೆಚ್ಚಳಪಡುತ್ತೇವೆ. ಪೌಲನು ಯಾವುದರ ಕುರಿತು ಹೆಚ್ಚಳಪಡುತ್ತಾನೆ?

# ಅಧ್ಯಯನ 2: ಗಲಾತ್ಯ ಪತ್ರಿಕೆಯನ್ನು ರಚನೆ ಮಾಡುವುದು

ಹಿಂದಿನ ಅಧ್ಯಯನದಲ್ಲಿ ಇಡೀ ಪತ್ರಿಕೆಯನ್ನು ಒಂದೇ ಬಾರಿಗೆ ನೀವು ಓದಿದ್ದೀರಿ. ಹೀಗೆ ಈಗ ನೀವು ಯಾವುದರ ಕುರಿತಾಗಿದೆ ಎಂಬ ಒಂದು ನ್ಯಾಯೋಚಿತವಾದ ವಿಚಾರವನ್ನು ಹೊಂದಿರಬೇಕು. ಅಲ್ಲದೇ ನಿಮ್ಮ ಸತ್ಯವೇದದಲ್ಲಿನ ಅಧ್ಯಾಯ ಮತ್ತು ವಚನದ ವಿಭಾಗಗಳಿಂದ ಅತಿಯಾಗಿ ದಾರಿತಪ್ಪದೇ ಪತ್ಯವನ್ನು ರಚನೆ ಮಾಡುವವರಾಗಿರಬೇಕು. ಪೌಲನ ಪತ್ರಿಕೆಯು ಯಾವುದೇ ಅಧ್ಯಾಯಗಳನ್ನಾಗಲಿ ಅಥವಾ ವಚನಗಳನ್ನಾಗಲಿ ಅಥವಾ ಸ್ಪಷ್ಟಪಡಿಸುವ ತಲೆಬರಹದೊಂದಿಗಿನ ಯಾವುದೇ ವಿಭಾಗಗಳನ್ನು ಹೊಂದಿರುವುದಿಲ್ಲ. ಶತಮಾನಗಳ ನಂತರ ಅಧ್ಯಾಯ ಮತ್ತು ವಚನಗಳು ನಮ್ಮ ಸತ್ಯವೇದಗಳಿಗೆ ಸೇರಿಸಲ್ಪಟ್ಟಿವೆ. ಮತ್ತು ತಲೆ ಬರಹದೊಂದಿಗಿನ ವಿಭಾಗಗಳು ಸತ್ಯವೇದ ಆವೃತ್ತಿಗಳ ನಡುವೆ ಬದಲಾಗುತ್ತವೆ.

ಗುಂಪಾಗಿ ನೀವು ಕಾರ್ಯಮಾಡುವಾಗ **ಸತ್ಯವೇದ** ಮತ್ತು **ಪವಿತ್ರ ಗ್ರಂಥ** ಇವೆರಡನ್ನೂ ಇಟ್ಟುಕೊಳ್ಳಲು ಮರೆಯದಿರಿ.

## ದೊಡ್ಡ ಚಿತ್ರಣ

ಪ್ರತೀ ವಿಭಾಗವು ಎರಡು ಅಧ್ಯಾಯಗಳನ್ನು ಒಳಗೊಳ್ಳುವಂತೆ ಗಲಾತ್ಯ ಪತ್ರಿಕೆಯ ಅಧ್ಯಾಯಗಳನ್ನು 3 ಮುಖ್ಯ ಭಾಗಗಳಾಗಿ ವಿಭಾಗಿಸಬಹುದೆಂದು ಸತ್ಯವೇದದ ಪಂಡಿತರು ಸೂಚಿಸುತ್ತಾರೆ. ಅದನ್ನು ನಿಮ್ಮ ಗುಂಪಿನಲ್ಲಿ ಮಾಡಲು ಪ್ರಯತ್ನಿಸಿ. ಪ್ರತೀ ಭಾಗದಲ್ಲಿನ ಮುಖ್ಯ ವಿಷಯವು ಯಾವುದೆಂಬುದಾಗಿ ನೀವು ಸೂಚಿಸುವಿರಿ.

ವಿವರಗಳಲ್ಲಿ ಸಿಲುಕಿಕೊಳ್ಳಬೇಡಿ. ಬದಲಾಗಿ ಪತ್ರಿಕೆಯ ಸಂದರ್ಭದ ಕುರಿತು ಯೋಚಿಸಿರಿ: ಗಲಾತ್ಯದಲ್ಲಿನ ಸಭೆಯಲ್ಲಿನ ಪರಿಸ್ಥಿತಿಯ ಬಗ್ಗೆ ಯಾಕೆ ಪೌಲನು ಅಷ್ಟೊಂದು ಅಸಮಧಾನಗೊಂಡಿದ್ದನು? ಆತನು ಅವರನ್ನು ಬಿಟ್ಟುಹೋದ ನಂತರ ಅಲ್ಲಿ ಏನಾಯಿತು? ಅವರಿಗಾಗಿ ಆತನ ಸಂದೇಶವೇನು? ತನ್ನ ಸಂದೇಶಕ್ಕೆ ಅವರು ಹೇಗೆ ಪ್ರತಿಕ್ರಯಿಸಬೇಕೆಂದು ಆತನು ಬಯಸುತ್ತಾನೆ?

## ಪ್ರಶ್ನೆಗಳು

1. 1-2 ಅಧ್ಯಾಯಗಳು **ಮುಖ್ಯವಾಗಿ** ಯಾವುದರ ಕುರಿತಾಗಿವೆ?
2. 3-4 ಅಧ್ಯಾಯಗಳು **ಮುಖ್ಯವಾಗಿ** ಯಾವುದರ ಕುರಿತಾಗಿವೆ?
3. 5-6 ಅಧ್ಯಾಯಗಳು **ಮುಖ್ಯವಾಗಿ** ಯಾವುದರ ಕುರಿತಾಗಿವೆ?

## ಹೆಚ್ಚು ವಿವರವಾದ ರಚನೆ

ಗಲಾತ್ಯ ಪತ್ರಿಕೆಯ ಒಂದು ವಿವರವಾದ ರಚನೆಯನ್ನು ಅನೇಕ ವಿಧಗಳಲ್ಲಿ ಮಾಡಬಹುದಾಗಿದೆ. ವಿಭಿನ್ನ ಸತ್ಯವೇದ ಭಾಷಾಂತರಗಳು, ವಿಭಿನ್ನ ಸತ್ಯವೇದ ಆವೃತ್ತಿಗಳು ಮತ್ತು ವಿಭಿನ್ನ ಅಧ್ಯಯನ ಸತ್ಯವೇದಗಳೊಂದಿಗೆ ನೀವು ಹೋಲಿಸುವಾಗ ಇದು ಸ್ಪಷ್ಟವಾಗುತ್ತದೆ. ಅವುಗಳಲ್ಲಿ ಯಾವುದೂ ಸಹ ಅಧ್ಯಾಯದ ವಿಭಾಗವನ್ನು ಪೂರ್ಣವಾಗಿ ಪಾಲಿಸುವುದಿಲ್ಲ

- ಯಾವ ಅಧ್ಯಾಯವು ಸಹ ಒಂದೇ ವಿಭಾಗವನ್ನು ಪಡಕೊಂಡಿರುವುದಿಲ್ಲ. ಉದಾಹರಣೆಗೆ, **ಪವಿತ್ರ ಗ್ರಂಥವು** 1 ನೇ ಅಧ್ಯಾಯದಲ್ಲಿ 3 ವಿಭಾಗಗಳನ್ನು ಒಳಗೊಂಡಿದೆ.
- ಕೆಲವು ಪ್ರಕರಣಗಳಲ್ಲಿ ಒಂದು ವಿಭಾಗವು ಮುಂದಿನ ಅಧ್ಯಾಯದಲ್ಲೂ ಮುಂದುವರೆಯುತ್ತದೆ. ಉದಾಹರಣೆಗೆ, **ಸತ್ಯವೇದ**ದಲ್ಲಿರುವ ಒಂದು ವಿಭಾಗವು 1:11 ರಲ್ಲಿ ಪ್ರಾರಂಭವಾಗಿ 2:10 ರಲ್ಲಿ ಮುಕ್ತಾಯವಾಗುತ್ತದೆ.

### ಪ್ರಶ್ನೆ

ಗಲಾತ್ಯ ಪತ್ರಿಕೆಯ ಎಲ್ಲಾ 6 ಅಧ್ಯಾಯಗಳನ್ನು ಕನ್ನಡ ಸತ್ಯವೇದದ ಎರಡು ಭಾಷಾಂತರಗಳಲ್ಲಿ ಹೋಲಿಸಿರಿ (ಉದಾಹರಣೆಗೆ **ಪವಿತ್ರ ಗ್ರಂಥ ಮತ್ತು ಸತ್ಯವೇದವು**). ಪ್ರತೀ ಭಾಷಾಂತರಕ್ಕಾಗಿ ವಿಭಾಗಗಳ ಒಂದು ಪಟ್ಟಿಯನ್ನು ಮಾಡಿರಿ.

### ಈ ಪುಸ್ತಕದಲ್ಲಿ ಬಳಸಲಾದ ರಚನೆ

ಈ ಪುಸ್ತಕದಲ್ಲಿ ಗಲಾತ್ಯ ಪತ್ರಿಕೆಯ ಪತ್ಯವು ಈ ರೀತಿಯಾಗಿ 12 ಅಧ್ಯಯನಗಳಾಗಿ ರಚಿಸಲ್ಪಟ್ಟಿದೆ:

ವಂದನೆಗಳು, 1:1-5

ಕೇವಲ ಒಂದೇ ಸುವಾರ್ತೆ ,1:6-10

ಪೌಲನು ಮತ್ತು ಅಪೊಸ್ತಲರು, 2:1-10

ನಂಬಿಕೆಯಿಂದ ನೀತಿವಂತರೆಂದು ನಿರ್ಣಯಿಸಲ್ಪಟ್ಟೆವು, 2:11-21

ಧರ್ಮಶಾಸ್ತ್ರ ಅಥವಾ ನಂಬಿಕೆಯ ಕಾರ್ಯಗಳು, 3:1-14

ವಾಗ್ದಾನ ಮತ್ತು ಧರ್ಮಶಾಸ್ತ್ರ, 3:15-25

ಪುತ್ರರು ಮತ್ತು ಬಾಧ್ಯರು, 3:26-4:40

ಎರಡು ಒಡಂಬಡಿಕೆಗಳು, 4:21-31

ಶಿಲುಬೆ ಅಥವಾ ಸುನ್ನತಿ, 5:1-12

ಆತ್ಮನಿಗೆ ಅನುಸಾರವಾಗಿ ನಡೆದುಕೊಳ್ಳುವುದು, 5:13-26

ಬಿತ್ತುವುದು ಮತ್ತು ಕೊಯ್ಯುವುದು, 6:1-10

ಪೌಲನ ಮುಕ್ತಾಯಗಳು, 6:11-18

ಪ್ರತೀ ಅಧ್ಯಯನದಲ್ಲಿ ಪತ್ಯದ ಪ್ರಶ್ನೆಗಳು ("ಪ್ರಶ್ನೆಗಳು" ಎಂದು ಕರೆಯಲ್ಪಡುವ) ಮತ್ತು ಬೇರೆ ಪ್ರಶ್ನೆಗಳಿವೆ ("ಆಲೋಚಿಸಿರಿ ಮತ್ತು ಚರ್ಚಿಸಿರಿ ಎಂದು ಕರೆಯಲ್ಪಡುವ). ಪುಸ್ತಕದ ಉತ್ತರದ ವಿಭಾಗದಲ್ಲಿ ಪ್ರಶ್ನೆಗಳಿಗೆ ಉತ್ತರಗಳು ಮತ್ತು ಆಲೋಚಿಸಿರಿ ಮತ್ತು ಚರ್ಚಿಸುವುದರ ಕುರಿತು ಟಿಪ್ಪಣಿಗಳನ್ನು ಕಾಣಬಹುದು.

ಕೊನೆಯ ಅಧ್ಯಯನವು ("ಅಧ್ಯಯನ 16: ನಮಗಾಗಿನ ಗಲಾತ್ಯ ಪತ್ರಿಕೆಯ ಸಂದೇಶ") ಗಲಾತ್ಯ ಪತ್ರಿಕೆಯಲ್ಲಿನ ಪೌಲನ ಕೆಲವು ಮುಖ್ಯ ವಿಷಯಗಳನ್ನು ಪುನಃ ತಿಳಿಸುತ್ತದೆ. ಈ ಅಧ್ಯಯನದೊಂದಿಗೆ ಯಾವುದೇ ಉತ್ತರಗಳು ಅಥವಾ ಟಿಪ್ಪಣಿಗಳನ್ನು ಕೊಡಲ್ಪಟ್ಟಿಲ್ಲ.

# ಅಧ್ಯಯನ 3: ವಂದನೆಗಳು (1:1-5)

## ಪೀಠಿಕೆ ಮತ್ತು ಟಿಪ್ಪಣಿಗಳು

ಹೊಸ ಒಡಂಬಡಿಕೆ ಕಾಲದ ಪತ್ರಿಕೆಯು ಯಾವಾಗಲೂ ಕಳುಹಿಸಿದವರು ಮತ್ತು ಸ್ವೀಕೃತರ ಕುರಿತು ತಿಳಿಸುವುದರೊಂದಿಗೆ ಪ್ರಾರಂಭವಾಗುತ್ತದೆ. ಪೌಲನು ಈ ಸಂಪ್ರದಾಯವನ್ನು ಪಾಲಿಸುತ್ತಾನೆ. ಅನಂತರ ಆತನು ಸಾಮಾನ್ಯವಾಗಿ ಒಂದು ಆಶೀರ್ವಾದ ಮತ್ತು ಸ್ತೋತ್ರವನ್ನು ಸೇರಿಸುತ್ತಾನೆ (ಒಂದು ಕೃತಜ್ಞತೆಯ ಪ್ರಾರ್ಥನೆಯೊಂದಿಗೆ). ಆದರೆ ಆತನು ಈ ನಾಲ್ಕು ಭಾಗಗಳನ್ನು ತನ್ನ ಪತ್ರಿಕೆಯ ಮುಖ್ಯಭಾಗದಲ್ಲಿ ವ್ಯವಹರಿಸುವ ವಿಷಯಗಳನ್ನು ಸೂಚಿಸುವ ವಿವರದೊಂದಿಗೆ ವಿಸ್ತರಿಸುತ್ತಾನೆ. ಹಾಗಾಗಿ ದೇವರ ವಾಕ್ಯದ ಗಂಭೀರ ವಿದ್ಯಾರ್ಥಿಗಳಾದ ನಾವು ಪೌಲನು ತನ್ನ ಪರಿಚಯಾತ್ಮಕ ವಚನಗಳಲ್ಲಿ ಸೇರಿಸುವ ಸುಳಿವುಗಳಿಗೆ ಗಮನ ಕೊಡಬೇಕು. ಅವು ಪತ್ರಿಕೆಯ ಮುಖ್ಯಭಾಗದಲ್ಲಿರುವ ಆತನ ವಾದಗಳಿಗಾಗಿ ಪೌಲನ ಓದುಗರನ್ನು ಸಿದ್ಧಪಡಿಸುವ ಅರ್ಥವನ್ನು ಕೊಡುತ್ತದೆ. ಪೌಲನು ಗಲಾತ್ಯದವರ ಬಗ್ಗೆ ಅಸಮಧಾನಗೊಂಡಿದ್ದಾನೆ ಮತ್ತು ಅವರಿಗೆ ಬರೆಯುವ ತನ್ನ ಪತ್ರಿಕೆಯ ಮುಖ್ಯಭಾಗಕ್ಕೆ ಬರುವ ಆತುರದಲ್ಲಿದ್ದಾನೆ. ಹೀಗಾಗಿ ಯಾವುದೇ ಕೃತಜ್ಞತಾ ಪ್ರಾರ್ಥನೆಯನ್ನು ಸೇರಿಸುವ ಯೋಚನೆಗೆ ಹೋಗುವುದಿಲ್ಲ. ಇದರ ಹೊರತಾಗಿಯೂ ಗಲಾತ್ಯ ಪತ್ರಿಕೆಯ ಮೊದಲ ವಚನಗಳು ಮುಂದೆ ಸೂಚಿಸುವ ಭಾವನೆಗಳನ್ನು ಒಳಗೊಂಡಿವೆ.

- ಒಬ್ಬ ಅಪೊಸ್ತಲನಾಗಿ ತನ್ನ ಅಧಿಕಾರದ ಬಗ್ಗೆ ಪೌಲನ ಹೇಳಿಕೆಗಳು
- ಪೌಲನ ಸುವಾರ್ತೆ
- ಈ ಪ್ರಸ್ತುತ ಕೆಟ್ಟಯುಗದಲ್ಲಿ ಕ್ರಿಸ್ತನಲ್ಲಿನ ವಿಶ್ವಾಸಿಗಳಾಗಿ ಹೇಗೆ ಜೀವಿಸಬೇಕೆಂಬುದರ ಕುರಿತ ಪೌಲನ ಬೋಧನೆ.

***ಅಪೊಸ್ತಲ*** (ವ. 1): ಸಾಮಾನ್ಯ ಅರ್ಥದಲ್ಲಿ ಗ್ರೀಕ್ ಪದವು "ಸಂದೇಶಕ" ಎಂದು ಅರ್ಥೈಸುತ್ತದೆ. ಹೆಚ್ಚುವರಿಯಾಗಿ ಹೊಸ ಒಡಂಬಡಿಕೆಯು ಈ ಪದವನ್ನು ಯೇಸುವಿನ ಹನ್ನೆರಡು ಶಿಷ್ಯರು ಮತ್ತು ಇನ್ನೂ ಕೆಲವರೊಂದಿಗಿನ ಉಲ್ಲೇಖದೊಂದಿಗೆ ಒಂದು ಸಂಕುಚಿತ ಅರ್ಥದಲ್ಲಿ ಉಪಯೋಗಿಸುತ್ತದೆ (ಉದಾರಣೆಗೆ ಯೇಸುವಿನ ತಮ್ಮನಾದ ಯಾಕೋಬ ಮತ್ತು ಪೌಲ). ಇವರಿಗೆ ವಿಶಿಷ್ಟವಾದ ರೀತಿಯಲ್ಲಿ ಸುವಾರ್ತೆಯ ಸಂದೇಶಕರುಗಳಾಗುವ ಜವಾಬ್ದಾರಿಯನ್ನು ದೇವರು ವಹಿಸಿದ್ದನು.

***ಗಲಾತ್ಯ*** (ವ. 2): **ಗಲಾತ್ಯ ಪತ್ರಿಕೆಯ ಪೀಠಿಕೆಯಲ್ಲಿ** ನಾವು ಪೌಲನು ಗಲಾತ್ಯದ ಕುರಿತು ಹೇಳುವುದನ್ನು ಸತ್ಯವೇದ ಪಂಡಿತರು ಒಪ್ಪದೇ ಇರುವುದನ್ನು ನಾವು ನೋಡಿದ್ದೇವೆ. ಗಲಾತ್ಯದವರು ಮತ್ತು ಗಲಾತ್ಯದ ಕುರಿತ ಒಂದು ಚರ್ಚೆಗಾಗಿ ಈ ಪುಸ್ತಕದ ಕೊನೆಯಲ್ಲಿನ **ಅನುಭಂದ: ಯಾರು ಮತ್ತು ಯಾವಾಗ?** ನೋಡಿರಿ. ಅಲ್ಲಿ ನೀವು ಪೌಲನು ಗಲಾತ್ಯ ಪತ್ರಿಕೆಯನ್ನು ಯಾವಾಗ ಬರೆದಿರಬಹುದೆಂಬುದರ ಕುರಿತು ಮಾಹಿತಿಯನ್ನು ನೀವು ಕಂಡುಕೊಳ್ಳುವಿರಿ.

## ಪ್ರಶ್ನೆಗಳು

1. ಪತ್ರದ ಈ ನಾಲ್ಕು ಮುಖ್ಯಭಾಗಗಳನ್ನು ಗುರುತಿಸಿರಿ.
    - ಕಳುಹಿಸುವವನು
    - ಸ್ವೀಕೃತರು

- ಆಶೀರ್ವಾದ
- ಸ್ತುತಿವಾಕ್ಯ

2. ಪೌಲನು ತನ್ನ ಕುರಿತಾಗಿ ಎರಡು ಮುಖ್ಯ ಮಾಹಿತಿಗಳನ್ನು ಹೊಂದಿದ್ದಾನೆ. ಅವು ಯಾವುವು?
3. ಈ ಪತ್ರದಲ್ಲಿ ಪೌಲನು ತಂದೆಯಾದ ದೇವರ ಕುರಿತ ಯಾವ ಅಂಶವನ್ನು ಸೇರಿಸಿದ್ದಾನೆ?
4. ಈ ಪತ್ರದಲ್ಲಿ ಪೌಲನು ಯೇಸುಕ್ರಿಸ್ತನ ಯಾವ ಅಂಶವನ್ನು ಸೇರಿಸಿದ್ದಾನೆ?
5. ಪ್ರಸ್ತುತ ಈ ಜಗತ್ತನ್ನು ಪೌಲನು ಹೇಗೆ ಅರ್ಥೈಸಿಕೊಂಡಿದ್ದಾನೆ?

## ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಪೌಲನು ತನ್ನ ಕುರಿತಾಗಿ ಹೆಚ್ಚುವರಿ ಮಾಹಿತಿಯನ್ನು ಸೇರಿಸಲು ಕಾರಣವೇನಿರಬಹುದು?
2. ಪರಿಚಯಾತ್ಮಕ ವಚನಗಳಿಂದ “ಪೌಲನ ರಕ್ಷಣೆಯ ದೈವಶಾಸ್ತ್ರದ” ಕುರಿತಾಗಿ ನಾವು ಯಾವ ತೀರ್ಮಾನಕ್ಕೆ ಬರಬಹುದು?
3. ಪರಿಚಯಾತ್ಮಕ ವಚನಗಳಿಂದ ಜೀವನ ಶೈಲಿಯ ಬಗ್ಗೆ ನಾವು ಯಾವ ತೀರ್ಮಾನಕ್ಕೆ ಬರಬಹುದು?

# ಅಧ್ಯಯನ 4: ಕೇವಲ ಒಂದೇ ಸುವಾರ್ತೆ (1:6-10)

## ಪೀಠಿಕೆ ಮತ್ತು ಟಿಪ್ಪಣಿಗಳು

ಪೌಲನು ಈಗ ನೇರವಾಗಿ ಪತ್ರಿಕೆಯನ್ನು ಬರೆಯುವ ಕಾರಣಕ್ಕೆ ಹೋಗುತ್ತಾನೆ: ಗಲಾತ್ಯದವರು ಮತ್ತು ಅವರ ನಂಬಿಕೆಯ ಅಸ್ಥಿರತೆಯ ಬಗ್ಗೆ ಆತನು ಆಶ್ಚರ್ಯ ಮತ್ತು ಅಸಮಧಾನಗೊಂಡನು (3:1-5 ನ್ನು ಹೋಲಿಸಿ). ಅತಿಥಿ ಬೋಧಕರ ಅಸಂಪ್ರದಾಯಕ ಸಂದೇಶವನ್ನು ಕೇಳಿ ಅದನ್ನು ಒಪ್ಪಿಕೊಳ್ಳುವ ಮೂಲಕ ಅವರು ತಮ್ಮ ಕ್ರೈಸ್ತೀಯ ನಂಬಿಕೆಯನ್ನು ಬಿಟ್ಟುಬಿಟ್ಟಿದ್ದರು. ಸುವಾರ್ತೆಯ ಸತ್ಯವನ್ನು ರಕ್ಷಿಸುವಾಗ ಪೌಲನು ಅಸಮಧಾನಗೊಳ್ಳುತ್ತಾನೆ.

***ಸುವಾರ್ತೆ*** (ವ. 6-7): **ಇವ್ಯಾಂಗೆಲಿಯೋನ್** ಎಂಬ ಗ್ರೀಕ್ ಪದವು ಸಾಮಾನ್ಯವಾಗಿ ಶುಭಸಂದೇಶ (ಸಮಾಚಾರ) ಎಂಬ ಅರ್ಥಕೊಡುತ್ತದೆ. ಹೊಸ ಒಡಂಬಡಿಕೆಯಲ್ಲಿ ಇದು ಯೇಸುಕ್ರಿಸ್ತನ ಮೂಲಕ ದೇವರ ರಕ್ಷಣಾಕಾರ್ಯದ ಶುಭಸಮಾಚಾರದ ಕುರಿತು ಉಪಯೋಗಿಸಲಾಗಿದೆ. ಹಾಗಾಗಿ ಕೆಲವೊಮ್ಮೆ ಪೌಲನು ಇದನ್ನು "ದೇವರ ಸುವಾರ್ತೆ" ಎಂದು ಕರೆಯುತ್ತಾನೆ (ರೋಮ 1:1, 15:16). ಸುವಾರ್ತೆಯು ನಂಬುವವರೆಲ್ಲರಿಗೆ ಯೇಸು ಮತ್ತು ಆತನ ಬಾಧೆ, ಮರಣ ಮತ್ತು ಪುನರುತ್ಥಾನದ ಕುರಿತದ್ದಾಗಿದೆ. ಪರಿಣಾಮವಾಗಿ ಪೌಲನಿದನ್ನು "ಕ್ರಿಸ್ತನ ಸುವಾರ್ತೆ" ಎಂದು ಕರೆಯುತ್ತಾನೆ (ವಚನ 7, ಅಲ್ಲದೇ ರೋಮಾ. 15:19, 1 ಕೊರಿಂಥ 9:12, 2 ಕೊರಿಂಥ 4:4, 9:13, 10:14, ಫಿಲಿಪ್ಪಿ. 1:27, 1 ಥೆಸಲೋನಿಕ 3:2 ನ್ನು ನೋಡಿರಿ). ಇದು ತನ್ನ ಸೇವಾ ಪ್ರಯಾಣಗಳಲ್ಲಿ ಪೌಲನು ಸಾರಲು ಆದೇಶ ಹೊಂದಿದ ಸುವಾರ್ತೆಯಾಗಿದೆ. ಹಾಗಾಗಿ ಆತನು ಇದರ ಬಗ್ಗೆ "ನಾನು ಸಾರುವ ಸುವಾರ್ತೆ" ಎಂಬ ಮಾತನ್ನು ಧೈರ್ಯವಾಗಿ ಹೇಳುತ್ತಾನೆ (ರೋಮಾ. 16:25, 2 ತಿಮೊಥಿ 2:6).

***ಅವನು ಶಾಪಗ್ರಸ್ತನಾಗಲಿ*** (ವ. 8-9): **ಅನಾಥೆಮಾ** ಎಂಬ ಗ್ರೀಕ್ ಪದವನ್ನು ದೇವರಿಗೆ ಮೀಸಲಾದದ್ದನು ತೆಗೆದುಕೊಂಡರೆ ಕೇಡುಂಟಾಗುವುದೆಂಬ ಹಳೇ ಒಡಂಬಡಿಕೆಯ ಸಂಗತಿಗೆ ಬಳಸಲಾಗಿದೆ (ಉದಾ: ಯೆಹೋಶುವ 6:18 ನ್ನು ನೋಡಿರಿ). ಹಾಗಾಗಿ ಪೌಲನು ಈ ಸುಳ್ಳು ಬೋಧಕರುಗಳನ್ನು ನ್ಯಾಯತೀರ್ಪು ಮತ್ತು ನಿತ್ಯವಾದ ದಂಡನೆಗಾಗಿ ದೇವರ ಕೈಗೆ ಒಪ್ಪಿಸಿಕೊಡುತ್ತಾನೆ. ದೇವಜನರಿಗೆ ಸೇರದ ಅವರು ಶಾಪಗ್ರಸ್ತರಾಗಿದ್ದಾರೆ. ರೋಮಾ. 9:3 ರಲ್ಲಿ ಪೌಲನು ತನ್ನ ಕುರಿತಾಗಿ ಈ ಪದವನ್ನು ಬಳಸುತ್ತಾನೆ: ತನ್ನ ಯೆಹೂದಿ ಸಹೋದರರಿಗೋಸ್ಕರ ಸಾಧ್ಯವಾದರೆ ತಾನೇ ಕ್ರಿಸ್ತನನ್ನು ಅಗಲಿ ಶಾಪಗ್ರಸ್ತನಾಗುವುದಕ್ಕೆ ಸಂತೋಷವುಳ್ಳವನಾಗಿರುವನು.

***ಕ್ರಿಸ್ತನ ಒಬ್ಬ ದಾಸ*** (ವ. 10): ರೋಮಾ ಪತ್ರಿಕೆಯ ಆರಂಭದಲ್ಲಿ ತನ್ನ ಕುರಿತಾಗಿ ಪೌಲನು ಈ ಮಾತನ್ನು ಉಪಯೋಗಿಸುತ್ತಾನೆ (1:1, "ನಮ್ಮ ಪ್ರಿಯ ಜೊತೆಯ ದಾಸನಾದ ಎಪಫ್ರನು" ಕೊಲೊಸ್ಸೆ. 1:7 ಮತ್ತು "ನಂಬಿಗಸ್ತನಾದ ಸೇವಕನೂ ಕರ್ತನಲ್ಲಿ ಜೊತೆಯ ದಾಸನೂ ಆಗಿರುವ ತುಖಿಕನು" ಕೊಲೊಸ್ಸೆ 4:7 ನ್ನು ಹೋಲಿಸಿರಿ).

## ಪ್ರಶ್ನೆಗಳು

1. ಈ ವಾಕ್ಯಭಾಗದ ಮೂಲಕ ಪೌಲ ಮತ್ತು ಗಲಾತ್ಯದವರ ನಡುವಿನ ಪ್ರಾರಂಭಿಕ ಸಂಬಂಧದ ಕುರಿತಾಗಿ ನಾವು ಏನನ್ನು ತಿಳಿದುಕೊಳ್ಳಬಹುದು?
2. ಅವರ ಮಧ್ಯೆ ಅಯೋಗ್ಯವಾಗಿ ನಡೆಸಿಕೊಂಡ ದಿನದಿಂದ ಪೌಲನು ಗಲಾತ್ಯದವರ ನಂಬಿಕೆಯನ್ನು ಹೇಗೆ ವಿವರಿಸುತ್ತಾನೆ?

3. “ಬೇರೆ ಸುವಾರ್ತೆ” ಮತ್ತು ಅದನ್ನು ಸಾರಿದವರನ್ನು ಪೌಲನು ಹೇಗೆ ವಿವರಿಸುತ್ತಾನೆ?

4. ಈ ವಾಕ್ಯಭಾಗದ ಕೊನೆಯಲ್ಲಿ ಪೌಲನು ತಾನು ಎದುರಿಸುವ ಒಂದು ಸಂಘರ್ಷ (ಹೋರಾಟ) ದ ಕುರಿತು ತಿಳಿಸುತ್ತಾನೆ. ಆ ಸಂಘರ್ಷ (ಹೋರಾಟ) ವನ್ನು ವಿವರಿಸಿರಿ.

## ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಪೌಲನ ಶಾಪವನ್ನು ವಿವರಿಸಿರಿ. ಬೇರೆ ಸುವಾರ್ತಾ ಕಾರ್ಯಕರ್ತರನ್ನು ಶಪಿಸಲು ಪೌಲನಿಗೆ ಹಕ್ಕಿದೆಯೋ?

2. ಪೌಲನು ಎದುರಿಸಿದ ಹೋರಾಟದಂತೆ ನಿಮ್ಮ ಸ್ವಂತ ಅನುಭವವೇನು (ವ. 10)? ದಕ್ಷಿಣ ಭಾರತದಲ್ಲಿನ ಸುವಾರ್ತಾ ಸೇವಕರಿಗೆ ಇದೊಂದು ಸಾಮಾನ್ಯವಾದ ಹೋರಾಟವಾಗಿದೆಯೋ?

# ಅಧ್ಯಯನ 5: ಪೌಲನ ಸುವಾರ್ತೆ (1:11-24)

## ಪೀಠಿಕೆ ಮತ್ತು ಟಿಪ್ಪಣಿಗಳು

ತಾನು ಅವರಿಗೆ ಸಾರಿದ ಸುವಾರ್ತೆಯ ಮೂಲದ ಬಗ್ಗೆ ಪೌಲನು ಗಲಾತ್ಯದವರಿಗೆ ವಿವರವಾಗಿ ತಿಳಿಸುತ್ತಾನೆ. ಇದು ಯಾವುದೇ ವ್ಯಕ್ತಿಯಿಂದ ಬಂದದ್ದಲ್ಲ. ಆತನಿದನ್ನು ಯಾವುದೇ ಮನುಷ್ಯನ ಅಧಿಕಾರದಿಂದಾಗಲೀ, ಯೆರೂಸಲೇಮಿನಲ್ಲಿನ ಅಪೊಸ್ತಲರಿಂದಾಗಲೀ ಉಪದೇಶ ಹೊಂದಲಿಲ್ಲ. ಪೌಲನ ಸುವಾರ್ತೆಯ ಮೂಲವು ದೈವೀಕವಾದದ್ದು. ಅದು ಆತನಿಗೆ ತಿಳಿಸಲ್ಪಟ್ಟಿತು. ಅದನ್ನು ಸಾಬೀತುಪಡಿಸಲು ಪೌಲನು ಕ್ರಿಸ್ತನಲ್ಲಿನ ಒಬ್ಬ ವಿಶ್ವಾಸಿಯಾಗಿ ತನ್ನ ಜೀವನದ ಆರಂಭದ ಲೆಕ್ಕವನ್ನು ಕೊಡುತ್ತಾನೆ. ಅಪೊಸ್ತರ ಕೃತ್ಯದಲ್ಲಿ (ಅಧ್ಯಾಯ 9, 22 ಮತ್ತು 26) ಮೆಸ್ಸೀಯ ಮತ್ತು ತನ್ನನ್ನು ನಂಬುವವರೆಲ್ಲರ ಪಾಪಗಳನ್ನು ಕ್ಷಮಿಸುವವನಾಗಿ ಯೇಸುವು ತನ್ನನ್ನೇ ಹೇಗೆ ಪ್ರಕಟಿಸಿಕೊಂಡನು ಮತ್ತು ಪೌಲನನ್ನು ಒಬ್ಬ ಸೇವಕ (ದಾಸ) ಮತ್ತು ಸುವಾರ್ತೆಯ ಒಂದು ಸಾಕ್ಷಿಯಾಗಿ ಹೇಗೆ ಯೇಸುವಿನಿಂದ ನೇಮಿಸಲ್ಪಟ್ಟನೆಂದು ನಾವು ನೋಡುತ್ತೇವೆ (ಅಪೊಸ್ತಲರ ಕೃತ್ಯಗಳು 26:15-18).

***ಯೇಸುಕ್ರಿಸ್ತನೇ ಅದನ್ನು ನನಗೆ ಪ್ರಕಟಿಸಿದನು*** (ವ. 12): ಗ್ರೀಕ್ ಹೇಳಿಕೆಯು "ಯೇಸುವಿನ ಪ್ರಕಟಣೆಯಾಗಿದೆ". ಇದನ್ನು "ಯೇಸುವಿನ ಒಂದು ಪ್ರಕಟಣೆ" (ಯೇಸುವು ಪೌಲನಿಗೆ ಪ್ರಕಟಿಸಿದನು ಎಂದರ್ಥ) ಅಥವಾ "ಯೇಸುವಿನಿಂದ ಬಂದ ಪ್ರಕಟಣೆ" (ಯೇಸುವು ಪೌಲನಿಗೆ ಒಂದು ಪ್ರಕಟಣೆಯನ್ನು ಕೊಟ್ಟನು ಎಂದರ್ಥ) ಎಂಬುದಾಗಿ ಸಹ ಅರ್ಥಮಾಡಿಕೊಳ್ಳಬಹುದು. **ಪವಿತ್ರಗ್ರಂಥ ಮತ್ತು ಸತ್ಯವೇದ**ವೆರಡೂ ಸಹ ಎರಡನೇ ಪರ್ಯಾಯ ಹೇಳಿಕೆಯನ್ನು ಆರಿಸಿಕೊಂಡಿವೆ. ಉಳಿದ ಭಾಷಾಂತರುಗಳು ಮೊದಲ ಪರ್ಯಾಯ ಹೇಳಿಕೆಯನ್ನು ಆರಿಸಿಕೊಂಡಿವೆ (ಹೋಲಿಸಿ "ದೇವರು ತನ್ನ ಮಗನನ್ನು ನನ್ನೊಳಗೆ ಪ್ರಕಟಿಸುವುದಕ್ಕೆ ಇಚ್ಛೈಸಿದಾಗಲೇ" ವ. 15-16). ಪರ್ಯಾಯವಾದರೂ ಹೇಗೂ ಪೌಲನ ವಾದವನ್ನು ಬೆಂಬಲಿಸುತ್ತದೆ. ಆತನು ಸಾರಿದ ಸುವಾರ್ತೆಗೆ ಒಂದು ದೈವೀಕ ಮೂಲವಿದೆ. ಪೌಲನ ಸುವಾರ್ತೆಯು ಯಾವುದೇ ಮನುಷ್ಯನಿಂದ ಬಂದಿಲ್ಲ.

***ಯೆಹೂದ್ಯ ಮತ*** (ವ. 13): ಯೆಹೂದಿ ನಂಬಿಕೆ ಮತ್ತು ಜೀವನ ಕಲೆಯು ಕ್ರಿಸ್ತನಿಗಿಂತ ಶತಮಾನಗಳ ಮುಂಚೆ ಮೊದಲು ಬಾಬೆಲ್ ಮತ್ತು ಅನಂತರ ಯೂದಾಯದಲ್ಲಿ ಬೆಳೆದುಬಂದಿತು.

***ಅರೇಬಿಯಾ*** (ಅರಬಸ್ಥಾನ): ಬಹುಶಃ ದಮಸ್ಕ ಮತ್ತು ಯೂದಾಯದ ಪೂರ್ವದಲ್ಲಿರುವ ನಬಾತ್ಯರ ಸಾಮ್ರಾಜ್ಯವನ್ನು ಸೂಚಿಸುತ್ತಿರಬಹುದು. 2 ಕೊರಿಂಥ 11:32 ರೊಂದಿಗೆ ಹೋಲಿಸಿರಿ. ಇಲ್ಲಿ ಪೌಲನು ದಮಸ್ಕದಿಂದ ತಪ್ಪಿಸಿಕೊಂಡ ಅರಸನಾದ ಅರೇತನ ಕುರಿತು (ಆತನು ನಬಾತ್ಯರ ಅರಸನಾಗಿದ್ದನು).

***ಕೇಫ*** (ವ. 18): ಇದು ಅಪೊಸ್ತಲ ಪೇತ್ರನ ಅರಾಮ್ಯಕ್ ಹೆಸರು. ಎರಡೂ ಹೆಸರಿನ ಅರ್ಥ "ಬಂಡೆ" ಎಂದಾಗಿದೆ (ಮತ್ತಾಯ 16:18). **ಪವಿತ್ರಗ್ರಂಥವು** "ಕೇಫನ" ಬದಲು "ಪೇತ್ರ"ನನ್ನು ಆರಿಸಿಕೊಂಡಿದೆ.

***ಕರ್ತನ ತಮ್ಮನಾದ ಯಾಕೋಬ*** (ವ. 19): ಈ ಯಾಕೋಬನು ಯೇಸುವಿನ ಮೂಲ ಹನ್ನೆರಡು ಶಿಷ್ಯರಲ್ಲಿ ಒಬ್ಬನಾಗಿರಲಿಲ್ಲ. ಆದರೆ ಬಹುಬೇಗ ಆತನು ಯೆರೂಸಲೇಮಿನ ಸಭೆಯ ಒಬ್ಬ ಪ್ರಮುಖ ನಾಯಕನಾದನು.

***ಸಿರಿಯ*** (ವ. 21): ಸಿರಿಯವು ಯೂದಾಯದ ಉತ್ತರದ ರೋಮನ್ ಪ್ರಾಂತ್ಯವಾಗಿತ್ತು. ದಮಸ್ಕವು ಪ್ರಾಂತ್ಯದ ದಕ್ಷಿಣ ಭಾಗದಲ್ಲಿತ್ತು. ಬಹುದೊಡ್ಡ ಸಂಖ್ಯೆಯ ಯೆಹೂದ್ಯರನ್ನೊಳಗೊಂಡ ಅಂತಿಯೋಕ್ಯವು ಇದರ ರಾಜಧಾನಿಯಾಗಿತ್ತು. ಅಂತಿಕೋಕ್ಯವು ರೋಮನ್

ಸಾಮ್ರಾಜ್ಯದ ಮೂರನೇ ಬಹುದೊಡ್ಡ ನಗರವಾಗಿತ್ತು. ಪೌಲ ಮತ್ತು ಬಾರ್ನಬರು ತಮ್ಮ ಮಿಷನರಿ ಅಡಿಪಾಯವನ್ನು ಅಂತಿಯೋಕ್ಯ ಸಭೆಯಲ್ಲಿಯೇ ಹೊಂದಿದ್ದರು (ಅಪೊ.ಕೃತ್ಯ. 11:9-27, 13:1-4, ವ. 26-28).

***ಕಿಲಿಕ್ಯ*** (ವ. 21): ಕಿಲಿಕ್ಯವು ಸಿರಿಯ ಮತ್ತು ಗಲಾತ್ಯ ಪ್ರಾಂತ್ಯಗಳ ನಡುವೆ ಇರುವ ಒಂದು ರೋಮನ್ ಪ್ರಾಂತ್ಯವಾಗಿತ್ತು. ಇದರ ರಾಜಧಾನಿಯು ತಾರ್ಷಿಷ ಆಗಿದ್ದು ಇಲ್ಲಿಯೇ ಪೌಲನು ಹುಟ್ಟಿ ಬೆಳೆದನು (ಅಪೊ.ಕೃತ್ಯ. 21:39, 22:3).

## ಪ್ರಶ್ನೆಗಳು

1. ತನ್ನ ಸುವಾರ್ತೆಯ ಬಗ್ಗೆ ಪೌಲನು ತನ್ನ ಓದುಗರಿಗೆ ಏನೆಂದು ಹೇಳುತ್ತಾನೆ (ವ. 11-12)?
2. ಯೇಸುಕ್ರಿಸ್ತನು ತನಗೆ ಪ್ರಕಟಿಸಿಕೊಳ್ಳುವುದಕ್ಕಿಂತ ಮೊದಲಿನ ಮತ್ತು ನಂತರದ ತನ್ನ ಜೀವಿತದ ಬಗ್ಗೆ ತನ್ನ ಓದುಗರಿಗೆ ಪೌಲನು ಏನೆಂದು ಹೇಳುತ್ತಾನೆ (ವ. 13-17)?
3. ಪೌಲನ ಮಾನಸಾಂತರ ಮತ್ತು ಆರಂಭಿಕ ಸೇವೆಯ ಕುರಿತು ಕೇಳಿದಾಗ ಯೂದಾಯದಲ್ಲಿದ್ದ ಯೇಸುವನ್ನು ನಂಬಿದ್ದ ಯೆಹೂದ್ಯರು ಹೇಗೆ ಪ್ರತಿಕ್ರಯಿಸಿದರು?

## ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಒಂದು ದೈವೀಕ ಪ್ರಕಟಣೆ ಮೂಲಕ ತಾನು ಸುವಾರ್ತೆಯನ್ನು ಹೊಂದಿದೆನು ಎಂಬುದಾಗಿ ಪೌಲನು ಬರೆಯುತ್ತಾನೆ. ನಮ್ಮ ಕುರಿತೇನು? ಸುವಾರ್ತೆಯನ್ನು ಸಾರುವುದಕ್ಕಿಂತ ಮೊದಲು ನಮಗೂ ಸಹ ಒಂದು ಪ್ರಕಟಣೆಯ ಅವಶ್ಯಕತೆ ಇದೆಯೇ? ನಾವು ಸಾರುವ ಸುವಾರ್ತೆಯನ್ನು ನಾವು ಹೇಗೆ ಸ್ವೀಕರಿಸುತ್ತೇವೆ?
2. ಯೆರೂಸಲೇಮ್ ಯೂದಾಯದೊಂದಿಗಿನ ತನ್ನ ಆರಂಭಿಕ ಸಂಪರ್ಕವನ್ನು ವಿವರಿಸುವ ಮೂಲಕ ಪೌಲನು ಹೇಳಲು ಬಯಸುತ್ತಿರುವುದು ಏನು (ವ. 17-23)?
3. ಪೌಲನು ಕ್ರಿಸ್ತನಲ್ಲಿ ಒಬ್ಬ ವಿಶ್ವಾಸಿ ಆದ ನಂತರ ಆತನ ಜೀವಿತದ ಕುರಿತ ಹೊಸ ಒಡಂಬಡಿಕೆಯ ಅನೇಕ ಅಂಶಗಳು ಹೇಗೆ ಸರಿಹೊಂದುತ್ತವೆ ಎಂಬುದನ್ನು ತಿಳಿದುಕೊಳ್ಳುವುದು ಸತ್ಯವೇದ ಪಂಡಿತರಿಗೆ ಕಷ್ಟಕರವಾಗಿದೆ. ಓದಿರಿ ಮತ್ತು ಹೋಲಿಸಿರಿ ಅಪೊ.ಕೃತ್ಯ 9:18-30 (ಲೂಕನ ಲೆಕ್ಕಾಚಾರ). ಅಪೊ.ಕೃತ್ಯ 22:1-21 (ಯೆರೂಸಲೇಮಿನಲ್ಲಿ ಯೆಹೂದಿ ಸಮೂಹಕ್ಕೆ ಪೌಲನ ಸಾಕ್ಷಿಯ ಕುರಿತ ಲೂಕನ ಲೆಕ್ಕಾಚಾರ) ಗಲಾತ್ಯ 1:13-24 (ಗಲಾತ್ಯದಲ್ಲಿನ ಸಭೆಗೆ ಪೌಲನ ಸಾಕ್ಷಿ) ಕೆಲವು ಅವಲೋಕನಗಳನ್ನು ಪಟ್ಟಿಮಾಡಿರಿ.

   ಮುಂದಿನ ಅಧ್ಯಯನದಲ್ಲಿ ನಾವು ಗಲಾತ್ಯ 2:1-10 ಮತ್ತು ಅಪೊ.ಕೃತ್ಯ. 15:1-29 ನ್ನು ಹೋಲಿಸಲಿದ್ದೇವೆ. ಗಲಾತ್ಯ ಮತ್ತು ಅಪೊಸ್ತಲರ ಕೃತ್ಯದಲ್ಲಿನ ಘಟನೆಗಳ ಕಾಲಗಣನೆಯ ಕುರಿತ ನಮ್ಮ ತಿಳುವಳಿಕೆಯು ಗಲಾತ್ಯದಲ್ಲಿನ ಸಭೆಗಳಿಗೆ ಪೌಲನು ತನ್ನ ಪತ್ರಿಕೆಯನ್ನು ಬರೆದಾಗ ಅದರ ಕುರಿತ ನಮ್ಮ ಅಭಿಪ್ರಾಯದ ಮೇಲೆ ಪರಿಣಾಮ ಬೀರುತ್ತದೆ. ಪುಸ್ತಕದ ಕೊನೆಯಲ್ಲಿನ **ಅನುಬಂಧ: ಯಾರು ಮತ್ತು ಯಾವಾಗ?** ಇದರಲ್ಲಿನ ನನ್ನದೇ ತೀರ್ಮಾನಗಳನ್ನು ಇಟ್ಟಿದ್ದೇನೆ.

# ಅಧ್ಯಯನ 6: ಪೌಲ ಮತ್ತು ಅಪೊಸ್ತಲರು (2:1-10)

## ಪೀಠಿಕೆ ಮತ್ತು ಟಿಪ್ಪಣಿಗಳು

ಅನಂತರ ಪೌಲನು ದೇವರು ತನಗೆ ಪ್ರಕಟಪಡಿಸಿದ ಸುವಾರ್ತೆಯನ್ನು, ಸುನ್ನತಿಯ ದಾಸತ್ವ ಮತ್ತು ಯೆಹೂದಿ ಧರ್ಮಶಾಸ್ತ್ರದ ಪಾಲನೆಯಿಂದ ಮುಕ್ತವಾಗಿರುವ ಒಂದು ಸುವಾರ್ತೆಯನ್ನು ಅನ್ಯಜನರಿಗೆ ಸಾರುವುದಕ್ಕೆ ಅಪೊಸ್ತಲನಾಗುವ ಪೌಲನ ದೈವೀಕ ಕರೆಯನ್ನು ಯೆರೂಸಲೇಮಿನಲ್ಲಿನ ಅಪೊಸ್ತಲರು ಗುರುತಿಸಿದರೆಂಬುದನ್ನು ಗಲಾತ್ಯದವರಿಗೆ ವಿವರಿಸುತ್ತಾನೆ. ಪೌಲ ಮತ್ತು ಯೆರೂಸಲೇಮಿನ ಸಭೆಯ ಕಂಬಗಳ ನಡುವೆ (ಯಾಕೋಬ, ಪೇತ್ರ ಮತ್ತು ಯೋಹಾನ) ಒಂದು ಭೇಟಿಯಲ್ಲಿ ಒಮ್ಮತ ಚರ್ಚೆಯಾಗಿತ್ತು.

***ಹದಿನಾಲ್ಕು ವರ್ಷಗಳ ಮೇಲೆ*** (ವ. 1): 1:18 ರಲ್ಲಿ ತಿಳಿಸಲಾದ ಘಟನೆಯಿಂದ ಹದಿನಾಲ್ಕು ವರ್ಷಗಳು ಎಂಬುದು ಪೌಲನ ಅರ್ಥವಾಗಿದೆ ಎಂದು ಹಿನ್ನಲೆಯು ಸೂಚಿಸುತ್ತದೆ (ಪೇತ್ರ/ ಕೇಫನೊಂದಿಗೆ ಮಾತನಾಡಲು ಯೆರೂಸಲೇಮಿಗೆ ಆತನ ಭೇಟಿ). ಆತನು ಯೇಸುವನ್ನು ಸಂಧಿಸಿದ ಹದಿನಾಲ್ಕು ವರ್ಷಗಳ ನಂತರ ಎಂಬುದು ಪೌಲನು ಹೇಳುತ್ತಿರುವುದುರ ಅರ್ಥವಾಗಿದೆ ಎಂದು ಕೆಲವು ಸತ್ಯವೇದ ಪಂಡಿತರು ಯೋಚಿಸುತ್ತಾರೆ.

***ಬಾರ್ನಬನು*** (ವ. 1): ಈತನು ಕುಪ್ರದ್ವೀಪದ ಒಬ್ಬ ಯೆಹೂದಿ ಹಿನ್ನಲೆಯ ವಿಶ್ವಾಸಿ ಮತ್ತು ಯೆರೂಸಲೇಮಿನಲ್ಲಿನ ಆದಿಸಭೆಯ ಒಬ್ಬ ಸದಸ್ಯ (ಅಪೊ.ಕೃತ್ಯ. 4:36). ನಂತರದಲ್ಲಿ ಪೌಲನ ಗುರು (ಅಪೊ.ಕೃತ್ಯ. 9:27). ಅಂತಿಯೋಕ್ಯ ಸಭೆಯಲ್ಲಿ ಪೌಲನೊಂದಿಗಿನ ಸಹ-ಸಭಾಪಾಲಕ (ಅಪೊ.ಕೃತ್ಯ. 11:22, 25). ಮೊದಲ ಸೇವಾಪ್ರಯಾಣದಲ್ಲಿ ಪೌಲನೊಂದಿಗೆ ಇದ್ದವನು (ಅಪೊ.ಕೃತ್ಯ. 13:1-4).

***ತೀತ*** (ವ. 1): ಒಬ್ಬ ಅನ್ಯಹಿನ್ನಲೆಯ ವಿಶ್ವಾಸಿ ಮತ್ತು ಪೌಲನ ಜೊತೆಕೆಲಸದವನು (2 ಕೊರಿಂಥ 2:13, 7:6, 13-14, 8:23, 12:18). ಈತನ ಅಪೊಸ್ತಲರ ಕೃತ್ಯದ ಬಗ್ಗೆ ತಿಳಿಸಿಲ್ಲ. ಪೌಲನು ತೀತನಿಗೆ ಬರೆದ ಪತ್ರಿಕೆಯನ್ನು ಸ್ವೀಕರಿಸಿದವನು.

***ದೈವಪ್ರೇರಣೆ*** (ವ. 2): ಪೌಲನು ಯಾವ ಪ್ರೇರಣೆಯ ಕುರಿತು ಹೇಳುತ್ತಾನೆ ಎಂಬುದು ನಮಗೆ ಗೊತ್ತಿಲ್ಲ. ದೈವಪ್ರೇರಣೆ ಅಥವಾ ಪ್ರಕಟಣೆಯು ಆದಿಸಭೆಯ ಜೀವಿತದಲ್ಲಿ ಒಂದು ನಿರಂತರವಾದ ಲಕ್ಷಣವಾಗಿರುವಂತೆ ತೋರುತ್ತದೆ (2 ಕೊರಿಂಥ 14:26 ನ್ನು ನೋಡಿರಿ).

***ಸುನ್ನತಿಯಾಗಬೇಕೆಂದು ಬಲಾತ್ಕರಿಸಲ್ಪಟ್ಟಿದ್ದು*** (ವ. 3): ಯೆಹೂದಿ ಮತಕ್ಕೆ ಸೇರಿದವರು ಸುನ್ನತಿ ಮಾಡಿಸಿಕೊಳ್ಳಬೇಕಿತ್ತು. ಸುಳ್ಳು ಸಹೋದರರು ಯೆಹೂದಿ ಮತದವರಾಗಿದ್ದು ಕ್ರೈಸ್ತ ನಂಬಿಕೆಗೆ ಬಂದ ಅನ್ಯಜನರು ಸಹ ಸುನ್ನತಿ ಮಾಡಿಸಿಕೊಳ್ಳಬೇಕೆಂದು ಇವರು ಹೇಳುತ್ತಿದ್ದರು.

***ಕ್ರಿಸ್ತ ಯೇಸುವಿನಲ್ಲಿ ನಮಗೆ ದೊರಕಿರುವ ಸ್ವಾತಂತ್ರ್ಯವು ... ನಮ್ಮನ್ನು ದಾಸತ್ವದಲ್ಲಿ ಸಿಲುಕಿಸಲು*** (ವ. 4): ಯೆಹೂದಿ ಸಂಪ್ರದಾಯದ ಶಾಸ್ತ್ರಗಳನ್ನು ಪಾಲಿಸದೆ ಇರುವ ಕ್ರೈಸ್ತೀಯ ಸ್ವಾತಂತ್ರ್ಯ. ಯೆಹೂದಿ ಶಾಸ್ತ್ರವನ್ನು ಪಾಲಿಸಲು ಅನ್ಯಹಿನ್ನಲೆಯಿಂದ ಬಂದ ಕ್ರೈಸ್ತ ವಿಶ್ವಾಸಿಗಳನ್ನು ಒತ್ತಾಯಿಸುವುದು ಸಭೆಯಲ್ಲಿ ದಾಸತ್ವವನ್ನು ಪರಿಚಯಿಸುವಂತಿರುತ್ತದೆ ಎಂದು ಪೌಲನು ಹೇಳುತ್ತಾನೆ.

***ಸ್ತಂಭಗಳು*** (ವ. 9): ಯೆರೂಸಲೇಮಿನ ಸಭೆಯ ಬಹುಮುಖ್ಯ ನಾಯಕರುಗಳು (ವ. 2 ಮತ್ತು 6 ರೊಂದಿಗೆ ಹೋಲಿಸಿ). ಅವರು ಮುಖ್ಯ ಅಪೊಸ್ತಲರಾಗಿರಬೇಕು (ಅಪೊಸ್ತಲ ಎಂಬ ಪದವು ವಚನ 8 ರಲ್ಲಿ ಪೇತ್ರನ ಬಗ್ಗೆ ಉಪಯೋಗಿಸಲ್ಪಟ್ಟಿದೆ) ಮತ್ತು ಸಭೆಯ ವಿಷಯದಲ್ಲಿ ಅಂತಿಮ ಅಧಿಕಾರವನ್ನು ಹೊಂದಿದವರೆಂದು ಪರಿಗಣಿಸಲ್ಪಟ್ಟವರು.

## ಪ್ರಶ್ನೆಗಳು

1. ಹದಿನಾಲ್ಕು ವರ್ಷಗಳ ನಂತರ ಪೌಲನು ಯಾಕೆ ಪುನಃ ಯೆರೂಸಲೇಮಿಗೆ ಹೋಗುತ್ತಾನೆ?
2. ಯೆರೂಸಲೇಮಿನಲ್ಲಿ ಪೌಲನು ಯಾರನ್ನು ಸಂಧಿಸುತ್ತಾನೆ ಮತ್ತು ಅವರಿಗೆ ಏನನ್ನು ಹೇಳುತ್ತಾನೆ?
3. ಪೌಲನು "ಸುಳ್ಳು ಸಹೋದರರನ್ನು" ಹೇಗೆ ನಿಭಾಯಿಸುತ್ತಾನೆ ಮತ್ತು ಆತನ ಈ ಸ್ವಭಾವಕ್ಕೆ ಕಾರಣವೇನಾಗಿತ್ತು?
4. ಅಪೊಸ್ತಲರೊಂದಿಗಿನ ಪೌಲನ ಭೇಟಿಯ ಅಂತ್ಯವೇನಾಗಿತ್ತು?
5. ಯೆರೂಸಲೇಮಿನ ನಾಯಕರಲ್ಲಿ ಒಂದು ಮನವಿ ಇತ್ತು. ಅದು ಯಾವುದಾಗಿತ್ತು?

## ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಪೌಲನ ಲೆಕ್ಕಾಚಾರದಲ್ಲಿ ತೀತನು ವಹಿಸುವ ಪಾತ್ರವನ್ನು ವಿವರಿಸಿರಿ.
2. ಪೌಲನು ನಿಜವಾದ ಸುವಾರ್ತೆಯನ್ನು ಸಾರಿದ ಒಬ್ಬ ನಿಜವಾದ ಅಪೊಸ್ತಲನಾಗಿದ್ದನೆಂಬುದನ್ನು ಪೌಲನ ಪತ್ರಿಕೆಯ ಸ್ವೀಕೃತರಿಗೆ ಈ ವಾಕ್ಯಭಾಗವು ಹೇಗೆ ಮನವರಿಕೆ ಮಾಡಿಕೊಳ್ಳುತ್ತದೆ?
3. ಗಲಾತ್ಯ 2:1-10 ಮತ್ತು ಅಪೊ.ಕೃತ್ಯ. 15:1-29 ಪರಸ್ಪರ ಒಂದಕ್ಕೊಂದು ಹೇಗೆ ಸಂಬಂಧಿಸುತ್ತವೆ ಎಂಬುದನ್ನು ಸತ್ಯವೇದ ಪಂಡಿತರು ಒಪ್ಪುವುದಿಲ್ಲ. ಅವೆರಡೂ ಒಂದೇ ರಿತಿಯ ಭೇಟಿಯನ್ನು ದಾಖಲಿಸುತ್ತವೆಯೋ? ಅಥವಾ ಅವು ಬೇರೆ ಬೇರೆ ಭೇಟಿಗಳನ್ನು ದಾಖಲಿಸುತ್ತವೆಯೋ? ಲೆಕ್ಕಾಚಾರವನ್ನು ಹೋಲಿಸಿ ಮತ್ತು ನಿಮ್ಮದೇ ತೀರ್ಮಾನಗಳನ್ನು ಪಟ್ಟಿಮಾಡಿರಿ.

# ಅಧ್ಯಯನ 7: ನಂಬಿಕೆಯಿಂದಲೇ ನೀತಿವಂತರೆಂದು ನಿರ್ಣಯಿಸಲ್ಪಟ್ಟದ್ದು (2:11-22)

## ಪೀಠಿಕೆ ಮತ್ತು ಟಿಪ್ಪಣಿಗಳು

ಹಿಂದಿನ ವಾಕ್ಯಭಾಗವು ಯೆರೂಸಲೇಮಿನ ಮುಖ್ಯ ಅಪೊಸ್ತಲರು ಅನ್ಯಜನರಿಗೆ ಮಿಷನರಿಗಳಾದ ಪೌಲ ಮತ್ತು ಬಾರ್ನಬರೊಂದಿಗೆ ಕೈಕುಲುಕುವದರೊಂದಿಗಿನ ಸಾಂಗತ್ಯದಲ್ಲಿ ಮುಕ್ತಾಯವಾಗುತ್ತದೆ. ಅನ್ಯ ಹಿನ್ನಲೆಯ ವಿಶ್ವಾಸಿಗಳು ಮತ್ತು ಯೆಹೂದಿ ಶಾಸ್ತ್ರವನ್ನು ಅವರು ಪಾಲಿಸುವುದರ ಕುರಿತ ವಿಷಯವು ಕೊನೆಗೊಳ್ಳುತ್ತದೆ.

ಆದರೆ ಅನಂತರ ಯೆರೂಸಲೇಮಿನ ಸಭೆಯಲ್ಲಿನ ಎರಡು ಪಾಲುದಾರರ ನಡುವೆ ಅಂತಿಯೋಕ್ಯದಲ್ಲಿ ಒಂದು ವಿವಾದವಿತ್ತು. ಯೆಹೂದಿ ಸಂಪ್ರದಾಯ ಮತ್ತು ಶಾಸ್ತ್ರಗಳ ಅನುಸರಣೆಗೆ ಸಂಬಂಧಿಸಿದ ವಿಷಯದಲ್ಲಿ ಕಪಟತನಕ್ಕಾಗಿ ಪೌಲನು ಪೇತ್ರನನ್ನು ಬಹಿರಂಗವಾಗಿ ದೂಷಿಸುತ್ತಾನೆ.

ಹಾಗೆಯೇ ಪೌಲನು ಪೇತ್ರನ ಸ್ವಭಾವವನ್ನು ಯಾಕೆ ನಿರ್ಲಕ್ಷಿಸಲಿಲ್ಲ ಎಂಬುದನ್ನು ಗಲಾತ್ಯ ಪತ್ರಿಕೆಯ ಓದುಗರಿಗೆ ವಿವರಿಸುತ್ತಾನೆ. ಇದು ಸುವಾರ್ತೆಯ ಸತ್ಯವನ್ನು ಅಪಾಯಕ್ಕೆ ಸಿಲುಕಿಸಿತು. ಯೆಹೂದ್ಯರು ಮಾತ್ರವಲ್ಲದೇ ಅನ್ಯರೂ ಸಹ ಯೇಸುಕ್ರಿಸ್ತನಲ್ಲಿನ ನಂಬಿಕೆಯ ಮೂಲಕವೇ ನೀತಿವಂತರೆಂದು ನಿರ್ಣಯಿಸಲ್ಪಡುತ್ತಾರೆಯೇ ಹೊರತು ಯೆಹೂದಿ ನೇಮನಿಷ್ಠೆಗಳನ್ನು ಪಾಲಿಸುವದರಿಂದ ಅಲ್ಲ. ನಾವು ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವರಾಗಿದ್ದೇವೆ ಮತ್ತು ಧರ್ಮಶಾಸ್ತ್ರದ ಪಾಲಿಗೆ ಸತ್ತು ಆ ಮೂಲಕ ನಮ್ಮಲ್ಲಿ ವಾಸಿಸುವ ದೇವಕುಮಾರನಾದ ಕ್ರಿಸ್ತನ ಮೂಲಕ ದೇವರಿಗಾಗಿ ಒಂದು ಪುನರುತ್ಥಾನ ಹೊಂದಿದ ಜೀವಿತವನ್ನು ಜೀವಿಸುವವರಾಗಿದ್ದೇವೆ.

ಅನ್ಯಜನರಿಗೆ ಸುವಾರ್ತೆಯನ್ನು ಸಾರಿದ ಮೊದಲ ಬೋಧಕನಾಗಿ ಆತನ ಭಿನ್ನತೆಯ ಬೆಳಕಿನಲ್ಲಿ ಪೇತ್ರನ ವರ್ತನೆಯು ಅಚ್ಚರಿ ಮತ್ತು ದುಃಖವನ್ನು ಉಂಟುಮಾಡುವಂತದ್ದಾಗಿದೆ (ಅಪೊ.ಕೃತ್ಯ. 15:7 ಮತ್ತು ಅಪೊ.ಕೃತ್ಯ. ಅಧ್ಯಾಯ 10 ನ್ನು ನೋಡಿರಿ).

ಪೇತ್ರನ ಕಪಟತನದ ವರ್ತನೆಯು ಯೆಹೂದಿ ಮತದವರ ದುರ್ಬೋಧನೆಯನ್ನು ಒಪ್ಪಿಕೊಳ್ಳುವುದಕ್ಕೆ ಮೊದಲ ಹೆಜ್ಜೆ ಆಗಿರುತ್ತದೆ ಎಂಬುದಾಗಿ ಪೌಲನು ಪರಿಗಣಿಸಿದ್ದನು. ಇದು ಯೇಸುಕ್ರಿಸ್ತನಲ್ಲಿನ ದೇವರ ಕೃಪೆಯನ್ನು ಇಲ್ಲವಾಗಿಸಿತು ಅಥವಾ ತಿರಸ್ಕರಿಸಿತು ಮತ್ತು ಇದು ಸಭೆಯ ಐಕ್ಯತೆಯನ್ನು ಕೆಡಿಸಿತು.

ಪೌಲನ ಪ್ರಕಾರ ನಾವು ನೀತಿವಂತರಾಗಿ ನಿರ್ಣಯಿಸಲ್ಪಡುವ ಏಕೈಕ ಮಾರ್ಗವು ಯೇಸುಕ್ರಿಸ್ತನಲ್ಲಿನ ನಂಬಿಕೆಯ ಮೂಲಕವಾಗಿದೆ. ನಮ್ಮ ನೀತಿವಂತಕೆಯು ಯೇಸುಕ್ರಿಸ್ತನಲ್ಲಿನ ನಂಬಿಕೆಯ ಮೂಲಕ ದೇವರಿಂದ ಬರುವುದಾಗಿದೆ ಮತ್ತು ಇದು ಯೆಹೂದ್ಯರು, ಅನ್ಯರು ಅಂತು ನಂಬುವವರೆಲ್ಲರಿಗೂ ಇರುವುದಾಗಿದೆ (ರೋಮಾ. 3:21-22 ನ್ನು ಹೋಲಿಸಿರಿ). ನಮ್ಮ ನೀತಿವಂತಿಕೆಯು ಧರ್ಮಶಾಸ್ತ್ರದ ಮೂಲಕ ಬಂದಿಲ್ಲ. ಆದರೆ ಧರ್ಮಶಾಸ್ತ್ರವು ಯೇಸುಕ್ರಿಸ್ತನ ಮೂಲಕ ಇರುವ ದೇವರ ರಕ್ಷಣೆಯ ವಾಗ್ದಾನಕ್ಕೆ ವಿರುದ್ಧವಾದದೆಂದು ಅರ್ಥವಲ್ಲ (ಗಲಾತ್ಯ 3:21-22).

***ಕೇಫ/ ಪೇತ್ರನು ಅಂತಿಯೋಕ್ಯಕ್ಕೆ ಬಂದಾಗ*** (ವ. 11): ಈ ಭೇಟಿಯು ಅಪೊಸ್ತಲರ ಕೃತ್ಯದಲ್ಲಿ ದಾಖಲಾಗಿಲ್ಲ.

***ಯಾಕೋಬನು*** (ವ. 12): ಈತನು ಯೇಸುಕ್ರಿಸ್ತನ ತಮ್ಮನೂ ಯೆರೂಸಲೇಮಿನ ಸಭೆಯಲ್ಲಿನ ಮುಂಚೂಣಿಯಲ್ಲಿರುವ ಒಬ್ಬ ಅಪೊಸ್ತಲ.

***ಸುನ್ನತಿಯವರ ಗುಂಪು*** (ವ. 12): ಅವರು ದೇವಜನರ ಮಧ್ಯದಲ್ಲಿ ಸೇರಿಸಲ್ಪಡಲು ಮತ್ತು ಕ್ರಿಸ್ತನಲ್ಲಿ ನಿಜವಾದ ವಿಶ್ವಾಸಿಗಳಾಗಲು ಅನ್ಯಹಿನ್ನಲೆಯಿಂದ ಬಂದ ವಿಶ್ವಾಸಿಗಳು ಯೆಹೂದ್ಯರಾಗಲೇಬೇಕೆಂದು ಬೋಧಿಸಿದ ಯೆಹೂದಿ ಮತದವರಾಗಿದ್ದರು (ಸುನ್ನತಿ ಮತ್ತು ಮೋಶೆಯ ಧರ್ಮಶಾಸ್ತ್ರವನ್ನು ಪಾಲಿಸುವುದರ ಮೂಲಕ).

***ಮಿಕ್ಕಾದ ಯೆಹೂದ್ಯರು*** (ವ. 13): ಸಭೆಯ ಯೆಹೂದಿ ಹಿನ್ನಲೆಯ ಸದಸ್ಯರು.

***ನಾವಂತೂ ಹುಟ್ಟು ಯೆಹೂದ್ಯರು, ಪಾಪಿಗಳೆನಿಸಿಕೊಂಡ ಅನ್ಯಜನರಲ್ಲ*** (ವ. 5): ಕ್ರಿಸ್ತನಲ್ಲಿನ ಯೆಹೂದಿ ಹಿನ್ನಲೆಯ ವಿಶ್ವಾಸಿಗಳ ಕುರಿತು ಪೌಲನ ವರ್ಣನೆ. ಅನಂತರ ಪೌಲನು ಆದರೂ ನೇಮನಿಷ್ಠೆಗಳನ್ನು ಪಾಲಿಸುವುದರಿಂದಲ್ಲ, ಬದಲಾಗಿ ಯೇಸುಕ್ರಿಸ್ತನ ಮೇಲಣ ನಂಬಿಕೆಯ ಮೂಲಕ ಅವರು ನೀತಿವಂತರೆಂದು ನಿರ್ಣಯಿಸಲ್ಪಡುವರೆಂದು (ವಿಶ್ವಾಸಿಗಳಾದ ಅನ್ಯಜನರಲ್ಲ) ಹೇಳುತ್ತಾ ಹೋಗುತ್ತಾನೆ.

***ನಾವು ಪಾಪಿಗಳಾಗಿ ತೋರಿಬಂದರೆ*** (ವ. 17): "ಪಾಪಿಗಳಾಗಿ ತೋರಿಬಂದರೆ" ಎಂಬ ಪೌಲನ ಹೇಳಿಕೆಯು ಬಹುಶಃ ಯೆಹೂದಿ ಆಚಾರಗಳನ್ನು ಪಾಲಿಸದ ಅನ್ಯಹಿನ್ನಲೆಯ ವಿಶ್ವಾಸಿಗಳೊಂದಿಗೆ ಆತನು ಅನ್ಯೋನ್ಯನಾಗಿ, ಅವರ ಸಂಗಡ ಊಟ ಮಾಡಿದ ನಿಮಿತ್ತ ಯೆಹೂದ್ಯರು ಆತನನ್ನು ಒಬ್ಬ ಪಾಪಿಯೆಂಬುದಾಗಿ ಕರೆದಿರಬಹುದೆಂಬುದು ಅರ್ಥವಾಗಿದೆ. ಯೇಸುವಿನ ಕುರಿತು "ಸುಂಕದವ ಮತ್ತು ಪಾಪಿಗಳ ಸ್ನೇಹಿತ" ನೆಂಬ ಜನರ ಅಭಿಪ್ರಾಯ (ಲೂಕ 7:34) ಮತ್ತು "ಯೆಹೂದ್ಯನು ಅನ್ಯಜನರ ಕೂಡ ಹೊಕ್ಕುಬಳಿಕೆ ಮಾಡುವುದು ಯೆಹೂದ್ಯರ ಸಂಪ್ರದಾಯಕ್ಕೆ ವಿರುದ್ಧವಾಗಿದೆ ಎಂದು ನೀವು ಬಲ್ಲಿರಷ್ಟೆ" ಎಂದು ಕೊರ್ನೆಲ್ಯನ ಮನೆಯಲ್ಲಿನ ಪೇತ್ರನ ಪ್ರಾರಂಭಿಕ ಮಾತುಗಳೊಂದಿಗೆ ಹೋಲಿಸಿರಿ (ಅಪೊ.ಕೃತ್ಯ. 10:28).

***ಕ್ರಿಸ್ತನಲ್ಲಿ ಪಾಪಕ್ಕೆ ಒಬ್ಬ ದಾಸನೋ*** (ವ. 17): ಪೌಲನ ವಿರೋಧಿಗಳು ಆತನಿಗೆ ಈ ರೀತಿ ಹೇಳಿರಬಹುದು: "ಪಾಪಿಗಳೊಂದಿಗೆ ಸೇರುವುದರ ಮೂಲಕ ಮತ್ತು ಅನ್ಯವಿಶ್ವಾಸಿಗಳು ಧರ್ಮಶಾಸ್ತ್ರವನ್ನು ಪಾಲಿಸಲು ಒತ್ತಾಯಿಸದೆ ಇರುವುದರ ಮೂಲಕ ಕ್ರಿಸ್ತನು ಯೆಹೂದಿ ವಿಶ್ವಾಸಿಗಳಾದ ನಮಗೆ ಆಜ್ಞೆ ಮೀರುವವರಾಗಲು ಅನುಮತಿಸುತ್ತಾನೆಂದು ಹೇಳುವುದರ ಮೂಲಕ ನೀನು ಕ್ರಿಸ್ತನನ್ನು ಪಾಪಕ್ಕೆ ಒಬ್ಬ ಸಹಾಯಕನನ್ನಾಗಿ ಮಾಡುತ್ತಿರುವಿ".

***ಬಹುಶಃ ಅವರು ಹೀಗೆ ಸಹ ಹೇಳಿರಬಹುದು*** (ರೋಮಾ. 6:1 ರೊಂದಿಗೆ ಹೋಲಿಸಿರಿ): ಪೌಲನೇ, ಒಂದು ವೇಳೆ ನಾವು ಕ್ರಿಸ್ತನಲ್ಲಿಯೇ ನೀತಿವಂತರೆಂದು ನಿರ್ಣಯಿಸಲ್ಪಟ್ಟರೆ ನಾವು ಪಾಪ ಮಾಡುತ್ತಲೇ ಹೋಗುತ್ತೇವೆ". ಹಾಗಾಗಿ ನಿನ್ನ ಉಪದೇಶವು ಜನರನ್ನು ಇನ್ನೂ ಕೆಟ್ಟ ಪಾಪಿಗಳಾಗಲು ಪ್ರೇರೇಪಿಸುತ್ತದೆ. "ಕ್ರಿಸ್ತನ ಮೇಲಣ ನಂಬಿಕೆಯಿಂದಲೇ ನೀತಿವಂತರೆಂಬ ನಿರ್ಣಯ" ಎಂಬ ನಿನ್ನ ಸಿದ್ಧಾಂತವು ಕ್ರಿಸ್ತನನ್ನು ಪಾಪಕ್ಕೆ ಸಹಾಯಕನನ್ನಾಗಿ ಮಾಡುತ್ತದೆ". ಈ ಕಲ್ಪನೆಗಳಿಗೆ ಪೌಲನ ಪ್ರತಿಕ್ರಿಯೆಯು "ಖಂಡಿತವಾಗಿಯೂ ಇಲ್ಲ" ಎಂದಾಗಿದೆ!

***ನಾನು ಕೆಡವಿದ್ದನ್ನೇ ತಿರುಗಿ ಕಟ್ಟಿದರೆ ನನ್ನನ್ನು ನಾನೇ ಅಪರಾಧಿ ಎಂದು ತೋರಿಸಿಕೊಳ್ಳುತ್ತೇನಲ್ಲಾ*** (ವ. 18): ಸತ್ಯವೇದ ಪಂಡಿತರು ಈ ವಚನವನ್ನು ಮುಖ್ಯವಾಗಿ ಎರಡು ಬೇರೆ ಬೇರೆ ರೀತಿಯಲ್ಲಿ ಅರ್ಥೈಸಿಕೊಂಡಿದ್ದಾರೆ.

1. ಧರ್ಮಶಾಸ್ತ್ರವನ್ನು ಅನುಸರಿಸುವುದರ ಮೂಲಕ ಅವರು ನೀತಿವಂತರೆಂಬ ನಿರ್ಣಯ ಹೊಂದಬಹುದೆಂಬ ಯೋಚನೆಯು ವಿಶ್ವಾಸಿಗಳಿಗೆ ಮರುಕಳಿಸುವುದನ್ನು ಪೌಲನು ಸೂಚಿಸಿ ಹೇಳುತ್ತಾನೆ ("ಅವರು ಕೆಡವಿದ್ದನ್ನೇ ತಿರುಗಿ ಕಟ್ಟುವರು"). ಅಂತಹ ಜನರು "ತಮ್ಮನ್ನೇ ಅಪರಾಧಿಗಳೆಂದು ತೋರಿಸುವರು".

2. ಪೌಲನು ಕ್ರಿಸ್ತನ ಮೇಲಣ ನಂಬಿಕೆಯ ಮೂಲಕ ನೀತಿವಂತರೆಂಬ ನಿರ್ಣಯ ಹೊಂದಿದ ನಂತರ ತಮ್ಮ ಹಳೆಯ ಪಾಪಮಾರ್ಗಗಳಿಗೆ ಹಿಂತಿರುಗಿದ ವಿಶ್ವಾಸಿಗಳ ಕುರಿತು ಹೇಳುತ್ತಿದ್ದಾನೆ. ಅದಕ್ಕಾಗಿ ಅವರು ಕ್ರಿಸ್ತನನ್ನು ದೂರುವಂತಿಲ್ಲ. ಅದು ಅವರ ಜವಬ್ದಾರಿಯಾಗಿದೆ. ಯಾರು ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡರೋ, ಯಾರಲ್ಲಿ ಕ್ರಿಸ್ತನು ವಾಸಿಸುತ್ತಿದ್ದನೋ, ಯಾರು

ಕ್ರಿಸ್ತನ ಮೇಲಣ ನಂಬಿಕೆಯಿಂದ ನೀತಿವಂತರೆಂದು ನಿರ್ಣಯಿಸಲ್ಪಟ್ಟರೋ ಅವರೇ ಅಪರಾಧಿಗಳು. ಅವರು ದೇವರ ಕೃಪೆಯನ್ನು ದೂರ ತಳ್ಳಿದವರಾಗಿದ್ದಾರೆ (ವ. 19-21).

## ಪ್ರಶ್ನೆಗಳು

1. ಪೌಲನು ಬಹಿರಂಗವಾಗಿ ಪೇತ್ರನನ್ನು ವಿರೋಧಿಸುತ್ತಾನೆ. ಆದಿಸಭೆಯಲ್ಲಿ ಪೇತ್ರನ ಸ್ಥಾನವನ್ನು ಪರಿಗಣಿಸಿದರೆ ಈ ರೀತಿ ಮಾಡುವುದು ಒಂದು ಅಪಾಯಕಾರಿ ಸಂಗತಿಯಾಗಿತ್ತು. ಹಾಗಾಗಿ ಯಾಕೆ ಪೌಲನು ಈ ತೊಂದರೆಯನ್ನು ತೆಗೆದುಕೊಳ್ಳುತ್ತಾನೆ ಮತ್ತು ಆತನು ಯಾವುದಕ್ಕಾಗಿ ಪೇತ್ರನನ್ನು ದೂರುತ್ತಾನೆ?
2. ಪೇತ್ರನ ವರ್ತನೆಯು ಬಾರ್ನಬ ಮತ್ತು ಅಂತಿಯೋಕ್ಯದ ಸಭೆಯಲ್ಲಿದ್ದ ಯೆಹೂದಿ ಹಿನ್ನಲೆಯ ವಿಶ್ವಾಸಿಗಳ ಮೇಲೆ ಯಾವ ಪರಿಣಾಮ ಬೀರಿತು?
3. ವಚನ 16 ರಲ್ಲಿ ನೀತಿವಂತರೆಂಬ ನಿರ್ಣಯದ ಕುರಿತು ಪೌಲನು ಏನೆಂದು ಹೇಳುತ್ತಾನೆ?
4. ವಚನ 19-20 ರಲ್ಲಿ ಪೌಲನು ತನ್ನ ಜೀವಿತವನ್ನು ಹೇಗೆ ವರ್ಣಿಸುತ್ತಾನೆ?
5. ವಚನ 21 ರಲ್ಲಿ "ದೇವರ ಕೃಪೆಯನ್ನು ತಿರಸ್ಕರಿಸುವುದು" ("ನಿರರ್ಥಕ ಮಾಡುವುದು") ಎಂದು ಪೌಲನು ಹೇಳುವುದರ ಅರ್ಥವೇನು?

## ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಪೇತ್ರನ ಕಪಟತನವನ್ನು ಕಾಣುವಂತೆ ಮಾಡಿದ ಮತ್ತು ಸಭೆಯ ಐಕ್ಯತೆಗೆ ಒಂದು ಪ್ರತ್ಯಕ್ಷ ಬೆದರಿಕೆಯಾಗಿ ಮಾಡಿದ ಸಭಾಜೀವಿತದಲ್ಲಿನ ಸಂದರ್ಭ ಯಾವುದಿರಬಹುದು?
2. ವಚನ 15-16 ರಲ್ಲಿನ ಪೌಲನ ವಾದವನ್ನು (ಸಂಭಾಷಣೆ) ವಿವರಿಸಿರಿ.
3. "ಎಂದಿಗೂ ಹೇಳಬಾರದು" ಎಂಬ ಪೌಲನ ಹೇಳಿಕೆಯ ಹಿನ್ನಲೆಯೇನು? (ವ. 17). ಮೇಲ್ಕಂಡ ನನ್ನ ಟಿಪ್ಪಣಿಗಳನ್ನು ನೋಡದೇ ವಿವರಿಸಿರಿ.

# ಅಧ್ಯಯನ 8: ಧರ್ಮಶಾಸ್ತ್ರದ ಕಾರ್ಯಗಳು (3:1-14)

## ಪೀಠಿಕೆ ಮತ್ತು ಟಿಪ್ಪಣಿಗಳು

ಪೌಲನು ಗಲಾತ್ಯದವರನ್ನು "ಬುದ್ಧಿಯಿಲ್ಲದವರೇ" ಎಂದು ಕರೆಯಲು ಒಂದು ಒಳ್ಳೆಯ ಉದ್ದೇಶವಿದೆ. ಶಿಲುಬೆಗೆ ಹಾಕಲ್ಪಟ್ಟ ಕ್ರಿಸ್ತನ ಮೇಲಣ ನಂಬಿಕೆಯ ಮೂಲಕ ದೊರಕಿದ ದೇವರ ರಕ್ಷಣೆಯ ಕುರಿತಾದ ಪೌಲನ ಸುವಾರ್ತೆಯನ್ನು ಸ್ವೀಕರಿಸಿದಾಗ ಅವರು ಅತ್ಯಧಿಕವಾದ ಆತ್ಮೀಕ ಆಶೀರ್ವಾದವನ್ನು ಅನುಭವಿಸಿದರು. ಆದರೆ ನಂತರದಲ್ಲಿ ಅವರು ಯೆಹೂದಿ ಮತದವರು ಸಾರಿದ ಕರ್ಮಾಚರಣೆಯ ವಾದದಿಂದ ಗೊಂದಲಕ್ಕೊಳಗಾದರು. ಕೃಪೆ ಮತ್ತು ಸತ್ಯದ ಸುವಾರ್ತೆಯ ಕುರಿತ ಅವರ ತಿಳುವಳಿಕೆಯು ನೇಮನಿಷ್ಠೆಗಳ ಕರ್ಮಾಚರಣೆಯ ಸುವಾರ್ತೆಯೆಂದು ಕರೆಯಲ್ಪಡುವ ಸುಳ್ಳಿನಿಂದ ಭ್ರಷ್ಟಗೊಂಡಿತ್ತು.

ಹಾಗಯೇ ಪೌಲನು ಗಲಾತ್ಯದವರಿಗೆ ಅಬ್ರಹಾಮ ಅನೇಕ ಜನಾಂಗಗಳಾಗುವ ಮತ್ತು ಅನ್ಯಜನರಿಗೂ ಆಶೀರ್ವಾದವಾಗುವ ದೇವರ ವಾಗ್ದಾನದಲ್ಲಿನ ಆತನ ನಂಬಿಕೆ ಮತ್ತು ಭರವಸೆಯನ್ನು ನೆನಪಿಸುತ್ತಾನೆ. ಶಿಲುಬೆ ಮೇಲೆ ನಮಗಾಗಿ ಶಾಪವಾಗುವುದರ ಮೂಲಕ ಧರ್ಮಶಾಸ್ತ್ರದೊಳಗಿನ ಶಾಪದಿಂದ ನಮ್ಮನ್ನು ಬಿಡಿಸಿದ ಕ್ರಿಸ್ತ ಯೇಸುವಿನಲ್ಲಿ ದೇವರ ಆಶೀರ್ವಾದದ ವಾಗ್ದಾನವು ನೆರವೇರಿತು. ಈ ಬಿಡುಗಡೆಯ ಫಲಿತಾಂಶವಾಗಿ ಯೆಹೂದ್ಯನಾಗಲೀ ಅನ್ಯನಾಗಲಿ ಆತನಲ್ಲಿ ನಂಬಿಕೆಯಿಡುವವರೆಲ್ಲರೂ ಸಹ ಆತ್ಮನ ಜೀವಿತವನ್ನು ಹೊಂದಿಕೊಂಡು ಧರ್ಮಶಾಸ್ತ್ರದ ನೇಮನಿಷ್ಠೆಗಳಿಂದಲ್ಲ, ಬದಲಾಗಿ ನಂಬಿಕೆಯ ಮೂಲಕ ಅಬ್ರಹಾಮನ ನಿಜವಾದ ಮಕ್ಕಳಾಗುವರು. ಯೆಹೂದ್ಯ ಅಥವಾ ಅನ್ಯರೆನ್ನದೇ ಕ್ರಿಸ್ತ ಯೇಸುವಿನ ಮೇಲಣ ನಂಬಿಕೆಯ ಮೂಲಕ ನಾವೆಲ್ಲರೂ ದೇವರ ಮಕ್ಕಳಾಗಿದ್ದೇವೆ. ಒಟ್ಟಾಗಿ ನಾವೆಲ್ಲರೂ ದೇವಜನರಾಗಿದ್ದೇವೆ.

***ಗಲಾತ್ಯದವರು*** (ವ. 1): ತನ್ನ ಪತ್ರಿಕೆಯ ಸ್ವೀಕೃತರನ್ನು "ಗಲಾತ್ಯದವರು" ಎಂದು ಪೌಲನು ಕರೆಯುವ ವಾಸ್ತವಾಂಶವು ಗಲಾತ್ಯದ ರೋಮನ್ ಪ್ರಾಂತ್ಯದ ಉತ್ತರ ಭಾಗದಲ್ಲಿ ವಾಸಿಸುತ್ತಿದ್ದ ಅವರು ಜನಾಂಗೀಯ ಗಲಾತ್ಯದವರಾಗಿದ್ದರೆಂಬುದನ್ನು ಸೂಚಿಸುತ್ತದೆ. ಪೌಲನು ಈ ಸ್ಥಳವನ್ನು ತನ್ನ ಎರಡನೇ ಮತ್ತು ಮೂರನೇ ಸೇವಾ ಪ್ರಯಾಣದಲ್ಲಿ ಸಂಧಿಸುತ್ತಾನೆಯೇ ಹೊರತು ಮೊದಲ ಪ್ರಯಾಣದಲ್ಲಲ್ಲ.

***ನೀವು ದೇವರಾತ್ಮನನ್ನು ಹೊಂದಿರುವುದು*** (ವ. 2): "ದೇವರಾತ್ಮನನ್ನು ಹೊಂದಿದ್ದು" ಎಂಬ ಪೌಲನ ಹೇಳಿಕೆಯು (ಯೇಸುವಿನ "ಆತ್ಮನಿಂದ ಹುಟ್ಟಬೇಕು" ಯೋಹಾನ 3:3-8 ಎಂಬ ಹೇಳಿಕೆಯೊಂದಿಗೆ ಹೋಲಿಸಿರಿ), ಯೇಸುಕ್ರಿಸ್ತನ ಮೇಲಣ ನಂಬಿಕೆಯ ಮೂಲಕ ನೀತಿವಂತರೆಂದು ನಿರ್ಣಯಿಸಲ್ಪಟ್ಟ ನಾವು ಬದುಕುವವರಾಗಿ ಮಾಡಲ್ಪಟ್ಟಿದ್ದೇವೆಂಬ ಸತ್ಯಾಂಶವನ್ನು ಸೂಚಿಸುತ್ತದೆ (ವಚನ 21 ರಲ್ಲಿ "ಬದುಕಿಸುವುದಕ್ಕೆ ಶಕ್ತವಾಗಿರುವ" ಎಂಬ ಪೌಲನ ಹೇಳಿಕೆಯೊಂದಿಗೆ ಹೋಲಿಸಿರಿ). ದೇವರಾತ್ಮನು ನಮ್ಮೊಳಗೆ ವಾಸಿಸುವವರೆಗೂ ನಮಗೆ ಆತ್ಮೀಕ ಮತ್ತು ನಿಜವಾದ ಜೀವವಿರಲಾರದು.

***ನೀವು ಬಾದೆಗಳನ್ನು ಅನುಭವಿಸಿದ್ದು*** (ವ. 4): ಗ್ರೀಕ್ ಪದವು "ಅನುಭವಿಸು" ಎಂಬ ಅರ್ಥ ಕೊಡುತ್ತದೆ. ಆದರೆ ಇದು ಕನ್ನಡ ಸತ್ಯವೇದಗಳಲ್ಲಿ ಭಾಷಾಂತರಿಸಿದಂತೆ "ಬಾಧೆಪಡು" ಎಂಬ ಅರ್ಥವನ್ನು ಸಹ ಕೊಡುತ್ತದೆ. ಮುಂಬರುವ ವಚನದ ಹಿನ್ನಲೆಯಲ್ಲಿ "ಅನುಭವಿಸುವುದು" ಸಮರ್ಪಕವಾದ ಅರ್ಥ ಕೊಡುತ್ತದೆ" *"ದೇವರು ತನ್ನ ಆತ್ಮನನ್ನು ನಿಮಗೆ ಹೇರಳವಾಗಿ ಕೊಟ್ಟು ನಿಮ್ಮಲ್ಲಿ ಮಹತ್ಕಾರ್ಯಗಳನ್ನು ನಡಿಸುತ್ತಾ ಬಂದದ್ದು ಯಾತರಿಂದಾದೀತು?"*

***ಆತ್ಮನನ್ನು ಹೇರಳವಾಗಿ ಕೊಟ್ಟು*** (ವ. 5): ಪವಿತ್ರಾತ್ಮನ ಪ್ರಸನ್ನತೆಯು ಅದ್ಭುತಗಳನ್ನು ಮಾಡುವುದಕ್ಕಾಗಿ ಕ್ರಿಸ್ತನಲ್ಲಿನ ವಿಶ್ವಾಸಿಗಳನ್ನು ಸಿದ್ಧಪಡಿಸಿತು ಮತ್ತು ಬಲಪಡಿಸಿತು. ಅವರ ಸೇವೆಯಲ್ಲಿ ದೇವರ ಪವಿತ್ರಾತ್ಮನು ಕಾರ್ಯಮಾಡುತ್ತಿದ್ದನು.

ಅಬ್ರಹಾಮನು ದೇವರನ್ನು ನಂಬಿದನು, ಆ ನಂಬಿಕೆಯು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತು (ವ. 6): ಆದಿಕಾಂಡ 15:6 ರ ಉಲ್ಲೇಖ.

***ನಿನ್ನ ಮೂಲಕ ಎಲ್ಲಾ ಜನಾಂಗಗಳವರಿಗೆ ಆಶೀರ್ವಾದವುಂಟಾಗುವುದು*** (ವ. 8): ಆದಿಕಾಂಡ 12:3 ರ ಉಲ್ಲೇಖ. ಅಬ್ರಹಾಮನ ಮೂಲಕ ಯೆಹೂದ್ಯರೂ ಅನ್ಯರೂ ಒಳಗೊಂಡ ಎಲ್ಲಾ ಜನಾಂಗಗಳೂ ಆಶೀರ್ವದಿಸಲ್ಪಡುವರೆಂದು ದೇವರು ವಾಗ್ದಾನ ಮಾಡಿದನು.

ವಚನ 9: ದೇವರ ಆಶೀರ್ವಾದವು ನಂಬಿಕೆಯ ಫಲಿತಾಂಶವಾಗಿದೆ. ಯೇಸುಕ್ರಿಸ್ತನನ್ನು ನಂಬುವವರೆಲ್ಲರೂ ಯೆಹೂದ್ಯರೂ ಮತ್ತು ಅನ್ಯರೂ ಸಹ ಅಬ್ರಹಾಮನ ಮಕ್ಕಳು/ ಸಂತತಿಯಾಗಿದ್ದಾರೆ ಮತ್ತು ಅಬ್ರಹಾಮನ ಸಂತತಿ, ಯೇಸುಕ್ರಿಸ್ತನ ಮೂಲಕ ದೇವರ ಆಶೀರ್ವಾದದ ವಾಗ್ದಾನಕ್ಕೆ ಬಾಧ್ಯರೂ ಆಗಿದ್ದಾರೆ (3:16, 29, 4:7).

***ಧರ್ಮಗ್ರಂಥದೊಳಗೆ ಬರೆದಿರುವವುಗಳನ್ನೆಲ್ಲಾ ನಿತ್ಯವೂ ಕೈಗೊಳ್ಳದಿರುವ ಪ್ರತಿಯೊಬ್ಬನೂ ಶಾಪಗ್ರಸ್ತನು*** (ವ. 16): ಧರ್ಮೋಪದೇಶಕಾಂಡ 27:26 ರ ಉಲ್ಲೇಖ.

***ಆದರ ನೇಮನಿಷ್ಠೆಗಳನ್ನು ಆಚರಿಸಿದವನೇ ಅವುಗಳ ಮೂಲಕ ಬದುಕುವನು*** (ವ. 12): ಯಾಜಕಕಾಂಡ 18:5 ರ ಉಲ್ಲೇಖ.

***ಮರಣಕ್ಕೆ ತೂಗುಹಾಕಲ್ಪಟ್ಟ ಪ್ರತಿಯೊಬ್ಬನು ಶಾಪಗ್ರಸ್ತನು*** (ವ. 14): ಧರ್ಮೋಪದೇಶಕಾಂಡ 21:23 ರ ಉಲ್ಲೇಖ.

***ವಾಗ್ದಾನ ಮಾಡಿದ ಆತ್ಮನು*** (ವ. 14): ಹಳೇ ಒಡಂಬಡಿಕೆಯ ವಾಗ್ದಾನಗಳು ದೇವರಾತ್ಮನನ್ನು ಮೆಸ್ಸೀಯನ ಯುಗ (ಕಾಲ) ದ ಆಗಮನದೊಂದಿಗೆ (ಹೊಸ ಒಡಂಬಡಿಕೆ) ಸಂಬಂಧ ಕಲ್ಪಿಸುತ್ತವೆ. ಉದಾಹರಣೆಗೆ ಯೆಶಾಯ 32:14-17, 44:1-6, ಯೆಹೆಜ್ಕೇಲ 39:29 ನ್ನು ನೋಡಿರಿ.

## ಪ್ರಶ್ನೆಗಳು

1. ಯಾಕೆ ಪೌಲನು ಗಲಾತ್ಯದವರನ್ನು "ಬುದ್ಧಿಯಿಲ್ಲದವರೇ" ಎಂದು ಕರೆಯುತ್ತಾನೆ?
2. ಗಲಾತ್ಯದವರು ಕ್ರಿಸ್ತನಲ್ಲಿ ವಿಶ್ವಾಸಿಗಳಾದದ್ದು ಹೇಗೆ?
3. ಪೌಲನ ಪ್ರಕಾರ "ಅಬ್ರಹಾಮನ ಪುತ್ರರು" ಯಾರು?
4. ವಚನ 9-10 ರಲ್ಲಿ ಪೌಲನು ಏನನ್ನು ತದ್ವಿರುದ್ಧವಾಗಿ ತೋರಿಸುತ್ತಾನೆ?
5. ಕ್ರಿಸ್ತನು ನಮ್ಮನ್ನು ಧರ್ಮಶಾಸ್ತ್ರದೊಳಗಿನ ಶಾಪದಿಂದ ಬಿಡಿಸಿದ್ದು ಹೇಗೆ?
6. ಅಬ್ರಹಾಮನ ಆಶೀರ್ವಾದವು ನೆರವೇರಿದ್ದು ಹೇಗೆ?

## ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಈ ವಾಕ್ಯಭಾಗದಲ್ಲಿನ ಪೌಲನ ಚರ್ಚೆಗೆ ಅಬ್ರಹಾಮನು ಪ್ರಾಮುಖ್ಯನಾಗಿದ್ದಾನೆ. ಹೇಗೆ ಎಂಬುದನ್ನು ವಿವರಿಸಿರಿ.
2. ಗಲಾತ್ಯ 3:1-14 ಸತ್ಯವೇದದಲ್ಲಿ ನೋಡದೇ ನಿಮ್ಮದೇ ಮಾತಿನಲ್ಲಿ ಸಾರಾಂಶಗೊಳಿಸಿರಿ.

# ಅಧ್ಯಯನ 9: ವಾಗ್ದಾನ ಮತ್ತು ಧರ್ಮಶಾಸ್ತ್ರ (3:15-25)

## ಪೀಠಿಕೆ ಮತ್ತು ಟಿಪ್ಪಣಿಗಳು

ಯೇಸುಕ್ರಿಸ್ತನು ಅಬ್ರಹಾಮನ ಮೂಲಕ ಯೆಹೂದ್ಯರಿಗೂ ಅನ್ಯರಿಗೂ ದೇವರ ಆಶೀರ್ವಾದ ವಾಗ್ದಾನದ ನೆರವೇರಿಕೆಯಾಗಿದ್ದಾನೆಂಬ ಪೌಲನ ಹೇಳಿಕೆಯೊಂದಿಗೆ ಹಿಂದಿನ ವಾಕ್ಯಭಾಗ ಮುಕ್ತಾಯಗೊಳ್ಳುತ್ತದೆ. ದೇವರಾತ್ಮನ ವಾಗ್ದಾನವು ಕ್ರಿಸ್ತ ಯೇಸುವಿನ ಮೇಲಣ ನಂಬಿಕೆಯಲ್ಲಿಯೇ ಸಿಕ್ಕುತ್ತದೆ (3:14). ಆತನಲ್ಲಿ ನಮಗೆ ಜೀವವಿದೆ, ಆ ಜೀವವು ಆತ್ಮನ ಜೀವವಾಗಿದೆ.

ಪೌಲನು ದೇವಜನರ ಇತಿಹಾಸದಲ್ಲಿ ಧರ್ಮಶಾಸ್ತ್ರದ ಕಾರ್ಯವನ್ನು ವಿವರಿಸುತ್ತಾ ಹೋಗುತ್ತಾನೆ. ಧರ್ಮಶಾಸ್ತ್ರವು ಉಪಯುಕ್ತವಾಗಿತ್ತು. ಇದು ಇಸ್ರಾಯೇಲ್ಯರನ್ನು ಪಾಪ ಮತ್ತು ಅಪರಾಧಗಳಿಂದ ಕಾಪಾಡಿತು. ಕ್ರಿಸ್ತನ ಬರೋಣದೊಂದಿಗೆ ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನವು ನೆರವೇರುವವರೆಗೆ ದೇವಜನರನ್ನು ಇದು ಮೇಲ್ವಿಚಾರಣೆ ಮಾಡಿತು. ಆದರೆ ತನ್ನ ಮೂಲಕ ಮನುಷ್ಯನು ನೀತಿವಂತನೆಂದು ನಿರ್ಣಯಿಸಲ್ಪಡುವ ಒಂದು ಸಂಸ್ಥೆ ಇದಲ್ಲ. ಕೇವಲ ವಾಗ್ದಾನದ ನೆರವೇರಿಕೆ ಮಾತ್ರ ನೀತಿನಿರ್ಣಯವನ್ನು ತರಬಲ್ಲದು. ಹಾಗಾಗಿ ಧರ್ಮಶಾಸ್ತ್ರಕ್ಕಿಂತ ವಾಗ್ದಾನವು ಶ್ರೇಷ್ಠ/ ಹೆಚ್ಚಿನದಾಗಿದೆ ಎಂಬುದರ ಬಗ್ಗೆ ಸಂದೇಹವೆ ಇಲ್ಲ. ಕ್ರಿಸ್ತ ಯೇಸುವಿನ ಮೇಲಣ ನಂಬಿಕೆಯ ಮೂಲಕ ನೀತಿವಂತರೆಂದು ನಿರ್ಣಯಿಸಲ್ಪಡುವ ದೇವರ ಕೃಪಾ ಕೊಡುಗೆಯ ಸುವಾರ್ತೆಯು ದೇವಜನರು ಧರ್ಮಶಾಸ್ತ್ರದ ಕೈಕೆಳಗೆ ಕಾಯಲ್ಪಡುವುದಕ್ಕೆ ಕೊನೆಯನ್ನು ಹಾಕುತ್ತದೆ. ಅನಂತರ ಪೌಲನು ಆತ್ಮನ ಮೂಲಕ ಜೀವಿಸುತ್ತಿರುವ ನಾವು ಆತ್ಮನಿಗನುಸಾರವಾಗಿ ನಡೆಯೋಣವೆಂದು ಹೇಳುತ್ತಾನೆ (5:25). ಹೀಗೆ ಮಾಡುವುದರಿಂದ ನಾವು ಕ್ರಿಸ್ತ ನಿಯಮವನ್ನು ನೆರವೇರಿಸುತ್ತೇವೆ (6:2).

***ಒಡಂಬಡಿಕೆ*** (ವ. 15, 17): ಗ್ರೀಕ್ ಪದವು "ಒಪ್ಪಂದ ಮತ್ತು ಒಡಂಬಡಿಕೆ" ಮತ್ತು "ಕೊನೆಯ ಸಂಕಲ್ಪ ಮತ್ತು ಶಾಸನ" ಎಂಬ ಎರಡೂ ಅರ್ಥ ಕೊಡುತ್ತದೆ.

***ಬೀಜ/ ಸಂತತಿ*** (ವ. 16): ಗ್ರೀಕ್ ಪದವು "ಸಂತತಿ" ಎಂಬ ಅರ್ಥ ಕೊಡುತ್ತದೆ. ಪ್ರಾಥಮಿಕವಾಗಿ ಇದು ಅನೇಕ ಜನರನ್ನು ಸೂಚಿಸುತ್ತದೆ (ಸಂತತಿಗಳಿಗೆ). ಆದರೆ ಇದರ ವ್ಯಾಕರಣ ರೂಪವು ಏಕವಚನವಾಗಿದೆ. ಯೇಸುಕ್ರಿಸ್ತನು ಅಬ್ರಹಾಮನ ಸಂತತಿಯಾಗಿದ್ದಾನೆಂಬುದರ ಬಗ್ಗೆ ಹೇಳಲು ಪೌಲನು ಇದರ ಏಕವಚನ ರೂಪವನ್ನು ಬಳಸುತ್ತಾನೆ.

***ನಾನೂರ ಮೂವತ್ತು ವರುಷಗಳು*** (ವ. 17): ಈ ಸಂಖ್ಯೆಯು ಬಹುಶಃ ಇಸ್ರಾಯೇಲ್ಯರು ಐಗುಪ್ತದೇಶದಲ್ಲಿ ಕಳೆದ ಸಮಯವನ್ನು ಸೂಚಿಸುತ್ತವೆ (ವಿಮೋಚನಕಾಂಡ 12:40). ಐಗುಪ್ತದಲ್ಲಿನ ಅವರ ಪ್ರವಾಸವು ಯಾಕೋಬನೊಂದಿಗೆ ಪ್ರಾರಂಭವಾಗಿ (ಅಬ್ರಹಾಮನಿಗೆ ದೇವರು ಮಾಡಿದ ವಾಗ್ದಾನವನ್ನು ಈತನ ಮೂಲಕ ನವೀಕರಿಸಿದನು, ಉದಾ: ಆದಿಕಾಂಡ 50:24 ನ್ನು ನೋಡಿ) ಮೋಶೆಯೊಂದಿಗೆ ಕೊನೆಗೊಂಡಿತು ("ಧರ್ಮಶಾಸ್ತ್ರದ ಮಧ್ಯಸ್ಥ" ವಚನ 19).

***ಬಾಧ್ಯತೆ*** (ವ. 18): ಇದು ಹಿಂದಿನ ವಚನಗಳಲ್ಲಿ ಸೂಚಿಸಿದ "ಕೊನೇ ಸಂಕಲ್ಪ ಮತ್ತು ಶಾಸನ" (ಅಥವಾ ಒಡಂಬಡಿಕೆ)ದ ನೆರವೇರಿಕೆಯಾಗಿದೆ.

***ವಾಗ್ದಾನದಲ್ಲಿ ಸೂಚಿತವಾದವನು*** (ವ. 19): ಕ್ರಿಸ್ತನು, ಹೋಲಿಸಿ ವಚನ 16.

***ದೇವದೂತರ ಮುಖಾಂತರ ಒಬ್ಬ ಮಧ್ಯಸ್ಥನ ಕೈಯಲ್ಲಿ*** (ವ. 19): ಈ ಮಧ್ಯಸ್ಥನು ಸಿನಾಯಿ ಬೆಟ್ಟದಲ್ಲಿ ದೇವರಿಂದ ಧರ್ಮಶಾಸ್ತ್ರವನ್ನು ಹೊಂದಿಕೊಂಡು ಅದನ್ನು ಇಸ್ರಾಯೇಲ್ಯರಿಗೆ ಕೊಟ್ಟ ಮೋಶೆಯಾಗಿದ್ದಾನೆ. ದೇವದೂತರು ಸಿನಾಯಿ ಬೆಟ್ಟದಲ್ಲಿ

ಉಪಸ್ಥಿತರಿದ್ದರು (ಧರ್ಮೋಪದೇಶಕಾಂಡ 33:2, ಅಪೊ.ಕೃತ್ಯ. 7:53, ಇಬ್ರಿಯರಿಗೆ 2:2). ಅವರು ಅನೇಕರಾಗಿದ್ದು ಧರ್ಮಶಾಸ್ತ್ರದ ಕೀಳರಿಮೆ ಮತ್ತು ಅಪೂರ್ಣತೆಯನ್ನು ಪೌಲನಿಗೆ ಪ್ರತಿನಿಧಿಸಿದ್ದವು.

***ದೇವರಾದರೋ ಒಬ್ಬನೇ*** (ವ. 20): ಅಬ್ರಹಾಮನು ವಾಗ್ದಾನವನ್ನು ಹೊಂದಿದಾಗ ಒಬ್ಬರೇ, ಕೇವಲ ದೇವರು ಮಾತ್ರ ಇದ್ದರು. ಈ ಸತ್ಯಾಂಶವು ಪೌಲನಿಗೆ ವಾಗ್ದಾನದ ಶ್ರೇಷ್ಠತೆ ಮತ್ತು ಪೂರ್ಣತೆಯ ಸಂಕೇತವಾಗಿತ್ತು.

***ಹಾಗಾದರೆ ಧರ್ಮಶಾಸ್ತ್ರವು ದೇವರ ವಾಗ್ದಾನಗಳಿಗೆ ವಿರುದ್ಧವೋ? ಹಾಗೆ ಎಂದಿಗೂ ತಿಳಿದುಕೊಳ್ಳಬಾರದು*** (ವ. 21): ಯೆಹೂದಿ ಮತದವರು ಧರ್ಮಶಾಸ್ತ್ರವನ್ನು ದೇವರ ವಾಗ್ದಾನವಾಗಿರುವ ಸುವಾರ್ತೆಗೆ ವಿರುದ್ಧವಾಗಿ ಮಾಡಿದ್ದಕ್ಕೆ ಪೌಲನು ಅವರನ್ನು ದೂಷಿಸುತ್ತಾನೆ. ಆದರೆ ಅವರು ಹೇಳುವುದು ತಪ್ಪು, ಧರ್ಮಶಾಸ್ತ್ರವು ದೇವರ ವಾಗ್ದಾನವನ್ನು ವಿರೋಧಿಸುವುದಿಲ್ಲ. ಹಳೇ ಒಡಂಬಡಿಕೆಯ ಯಾವ ಶಾಸ್ತ್ರವೂ ಸಹ ಮನುಷ್ಯನಿಗೆ ಜೀವ ಮತ್ತು ನೀತಿವಂತಿಕೆಯನ್ನು ಕೊಡಲಾರದು. ಕಾರಣವೇನೆಂದರೆ ಯಾವ ಮನುಷ್ಯನೂ ಸಹ ಧರ್ಮಶಾಸ್ತ್ರವನ್ನು ಅನುಸರಿಸಲು ಶಕ್ತನಲ್ಲ. ನಾವೆಲ್ಲರೂ ಪಾಪಿಗಳು, ಪಾಪಕ್ಕೆ ದಾಸರಾಗಿದ್ದೇವೆ ಮತ್ತು ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯಲು ಮತ್ತು ಅದರ ಮೂಲಕ ಜೀವವನ್ನು ಹೊಂದಲು ಅಶಕ್ತರೂ ಆಗಿದ್ದೇವೆ. ಹಾಗಾಗಿ ಧರ್ಮಶಾಸ್ತ್ರವು ಕ್ರಿಸ್ತ ಯೇಸುವಿನ ಮೇಲಣ ನಂಬಿಕೆಯ ಮೂಲಕ ನೀತಿವಂತಿಕೆ ಮತ್ತು ಜೀವದ ವಾಗ್ದಾನದ ಅವಶ್ಯಕತೆಯನ್ನು ಖಚಿತಪಡಿಸುತ್ತದೆ (ವ. 21-25).

***ನಮ್ಮನ್ನು ಕಾಯುವ ಆಳು*** (ವ. 24): ಗ್ರೀಕ್ ಪದವು ಮಕ್ಕಳ ಮೇಲ್ವಿಚಾರಣೆ ವಹಿಸಿರುವ ಮನೆಯ ದಾಸನನ್ನು ಸೂಚಿಸುತ್ತದೆ. ಆತನು ಅವರಿಗೆ ತಮ್ಮ ಹಿರಿಯರನ್ನ ಗೌರವಿಸುವುದಕ್ಕೆ ಆರೋಗ್ಯಕರ, ನೈರ್ಮಲ್ಯಕರ ಮತ್ತು ಸಾಮಾನ್ಯ ನಡವಳಿಕೆಯನ್ನು ಕಲಿಸಿದನು. ಅಲ್ಲದೇ ಆತನು ಅಧ್ಯಯನಗಳನ್ನು ಮೇಲ್ವಿಚಾರಣೆಮಾಡಿ ಅವರು ಶಾಲೆಗೆ ಹೋದದ್ದಾಗಿ ಭರವಸೆ ಕೊಡುತ್ತಿದ್ದನು.

## ಪ್ರಶ್ನೆಗಳು

1. ಪೌಲನ ಪ್ರಕಾರ ಈ ವಾಕ್ಯಭಾಗದಲ್ಲಿ ಅಬ್ರಹಾಮನಿಗೆ ಅನೇಕ ಜನಾಂಗಗಳ (ಸಂತತಿಗಳ) ವಾಗ್ದಾನದ ನೆರವೇರಿಕೆಯು ಯಾರಾಗಿದ್ದಾರೆ?
2. ಪೌಲನು ಮೋಶೆ ಮತ್ತು ಧರ್ಮಶಾಸ್ತ್ರವನ್ನು ಹೇಗೆ ವಿವರಿಸುತ್ತಾನೆ?
3. ಧರ್ಮಶಾಸ್ತ್ರದ ಸಿಂಧುತ್ವವು ಎಲ್ಲಿಯ ತನಕ ಇರುತ್ತದೆ?
4. ನಂಬಿಕೆಯು ಆಗಮಿಸಿದಾಗ (ಬಂದಾಗ) ಏನಾಯಿತು?

## ಆಲೋಚಿಸಿರಿ ಮತ್ತು ಚರ್ಚಿಸಿರಿ

1. ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನವು ಮೋಶೆಯ ಮೂಲಕ ಇಸ್ರಾಯೇಲ್ಯರಿಗೆ ಕೊಟ್ಟ ಧರ್ಮಶಾಸ್ತ್ರಕ್ಕಿಂತ ಉನ್ನತವಾಗಿದೆ ಎಂದು ಪೌಲನು ಈ ವಾಕ್ಯಭಾಗದಲ್ಲಿ ವಾದಿಸುತ್ತಾನೆ. ಪೌಲನ ವಾದಗಳೇನು?
2. ಧರ್ಮಶಾಸ್ತ್ರವು ದೇವರ ವಾಗ್ದಾನಗಳಿಗೆ ಹೇಗೆ ವಿರುದ್ಧವಲ್ಲವೆಂಬುದನ್ನು ವಿವರಿಸಿರಿ. ಸಾಧ್ಯವಾದಷ್ಟು ನಿಮ್ಮದೇ ಪದಗಳನ್ನು ಉಪಯೋಗಿಸಿರಿ ಮತ್ತು ಸತ್ಯವೇದದಲ್ಲಾಗಲಿ ನನ್ನ ಟಿಪ್ಪಣಿಯಾಗಲೀ ನೋಡಬೇಡಿರಿ.
3. ಈ ವಾಕ್ಯಭಾಗದಲ್ಲಿ ಪೌಲನ ಪ್ರಕಾರ ಧರ್ಮಶಾಸ್ತ್ರದ ಪಾತ್ರವೇನು?

# ಅಧ್ಯಯನ 10: ಪುತ್ರರು ಮತ್ತು ಬಾಧ್ಯರು (3:26-4:20)

## ಪೀಠಿಕೆ ಮತ್ತು ಟಿಪ್ಪಣಿಗಳು

ಪೌಲನು ಗಲಾತ್ಯದವರಿಗೆ ಬರೆದ ಯೇಸುಕ್ರಿಸ್ತನ ಸುವಾರ್ತೆಯು ಸಂಪೂರ್ಣವಾಗಿ ಅವರ ಜೀವಿತಗಳನ್ನೇ ಬದಲಿಸಿತು. ಅವರು ದೇವರ ಮಕ್ಕಳಾಗಿ ಆತನನ್ನು "ಅಪ್ಪಾ" ಎಂದು ಕರೆಯುವಂತಾಯಿತು. ಅವರು ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನಕ್ಕೆ ಬಾಧ್ಯಸ್ಥರಾದರು. ಕ್ರಿಸ್ತನು ಸಹ ಅವರ ಸಭಾ ಅನ್ಯೋನ್ಯತೆಯಲ್ಲಿನ ಜನಾಂಗೀಯತೆ, ಸ್ಥಾನ ಮತ್ತು ಲಿಂಗಗಳ ಹಳೆಯ ಬೇಧವನ್ನು ತೆಗೆದುಹಾಕಿದನು. ಆದರೆ ಗಲಾತ್ಯರು ಈಗ ತಮ್ಮ ಹಿಂದಿನ ಸಂತೋಷವನ್ನು ಕಳೆದುಕೊಂಡವರಂತೆ ತೋರುತ್ತಾರೆ. ಅವರು ಕ್ರಿಸ್ತನಲ್ಲಿನ ತಮ್ಮ ಸ್ವಾತಂತ್ರ್ಯವನ್ನು ಕರ್ಮಾಚಾರ ಮತ್ತು ಯೆಹೂದಿ ಮತದವರಿಗೆ ದಾಸತ್ವಕ್ಕಾಗಿ ವಿನಿಮಯ ಮಾಡಿಕೊಂಡಿದ್ದಾರೆ. ಬಹುಶಃ ಗಲಾತ್ಯರ ನಡುವಿನ ಪೌಲನ ಸೇವೆಯು ವ್ಯರ್ಥವಾಯಿತೋ? ಆದರೆ ಅವರು ಆತನ ಚಿಕ್ಕಮಕ್ಕಳು, ಕ್ರಿಸ್ತನು ಅವರಲ್ಲಿ ಅವತರಿಸಿದ್ದನ್ನು ಕಾಣಲು ಮತ್ತೊಮ್ಮೆ ಹೆರಿಗೆ ನೋವನ್ನು ಅನುಭವಿಸಲು ಆತನು ಸಿದ್ದನಿದ್ದನು.

***ನೀವೆಲ್ಲರೂ ಕ್ರಿಸ್ತನನ್ನು ಧರಿಸಿಕೊಂಡಿರಿ*** (3:27): ಈ ಚಿತ್ರಣವು ದೀಕ್ಷಾಸ್ನಾನ ತೆಗೆದುಕೊಂಡ ಒಬ್ಬ ವ್ಯಕ್ತಿಗೆ ಹೊಸ ವಸ್ತ್ರವನ್ನು ಹಾಕುವ ಪದ್ಧತಿಯಿಂದ ತೆಗೆದುಕೊಳ್ಳಲಾಗಿದೆ.

***ಬೀಜ/ ಸಂತತಿ*** (3:29): ಕ್ರಿಸ್ತನಲ್ಲಿನ ವಿಶ್ವಾಸಿಗಳನ್ನು ಸೂಚಿಸುತ್ತದೆ (ಹೋಲಿಸಿ ಗಲಾತ್ಯ 3:7). ಗಲಾತ್ಯ 3:16-29 ರಲ್ಲಿ ಕ್ರಿಸ್ತನನ್ನು ಸೂಚಿಸುವುದರೊಂದಿಗೆ ಪೌಲನು ಇದೇ ಹೇಳಿಕೆಯನ್ನು ಉಪಯೋಗಿಸುತ್ತಾನೆ (ಇದು ಆದಿ. 12:7 ರಲ್ಲಿ ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನಕ್ಕೆ ಹೋಗುತ್ತದೆ).

***ಬಾಲಕ*** (4:1): ಗ್ರೀಕ್ ಪದವು "ಕಾನೂನಾತ್ಮಕವಾಗಿ ಸಣ್ಣವನು" ಎಂಬ ಅರ್ಥಕೊಡುತ್ತದೆ.

***ಪಾಲಕರು ಮತ್ತು ಮನೆವಾರ್ತೆಯವರು*** (ವ. 2): ಒಬ್ಬ ಪಾಲಕನು ಒಬ್ಬ ಬಾಲಕನ ಕಾನೂನಾತ್ಮಕ ವಿಷಯಗಳ ಜವಾಬ್ದಾರಿ ಹೊತ್ತಿರುವವನು. ಒಬ್ಬ ಮನೆವಾರ್ತೆಯವನು ಆಸ್ತಿಯನ್ನು ನೊಡಿಕೊಳ್ಳುವ ಕರ್ತವ್ಯದಲ್ಲಿರುವವನು.

***ಲೋಕದವರ ಬಾಲಬೋಧೆ*** (ವ. 3): ಬಹುಶಃ ಪೌಲನು ಈ ಪಾಪಮಯ ಲೋಕದ ಮೇಲೆ ಪರಿಣಾಮ ಬೀರುವ ಲೋಕದ ಶಕ್ತಿಗಳನ್ನು ಸೂಚಿಸುತ್ತಿರಬಹುದು. ಹಾಗಾಗಿ ಕನ್ನಡ ಭಾಷಾಂತರವು ಓದುಗರನ್ನು ಗಲಿಬಿಲಿಗೊಳಿಸಬಹುದು.

***ಅಪ್ಪಾ*** (ವ. 6): ಅರಾಮೈಕ್ ಪದದ ಅರ್ಥ "ತಂದೆ" ಎಂದಾಗಿದೆ. ಇದು ಆಪ್ತತೆಯನ್ನು ತೋರಿಸುತ್ತದೆ.

***ದೇವರಲ್ಲದವುಗಳು*** (ವ. 8): ಬಹುಶಃ ಪೌಲನು ಅನ್ಯಹಿನ್ನಲೆಯ ವಿಶ್ವಾಸಿಗಳ ಹಿಂದಿನ ವಿಗ್ರಹಾರಾಧನೆಯನ್ನು ಸೂಚಿಸಿ ಹೇಳಿರಬಹುದು.

***ಆಯಾ ದಿನಗಳನ್ನೂ ಮಾಸಗಳನ್ನೂ ಉತ್ಸವಕಾಲಗಳನ್ನೂ ಸಂವತ್ಸರಗಳನ್ನೂ ನಿಷ್ಠೆಯಿಂದ ಆಚರಿಸುತ್ತೀರಿ*** (ವ. 10):ಬಹುಶಃ ಪೌಲನ ಯೆಹೂದ್ಯರ ಮತ್ತು ಅನ್ಯರಿಬ್ಬರ ಜ್ಯೋತಿಶಾಸ್ತ್ರವನ್ನು ಸೂಚಿಸುತ್ತಾನೆ.

***ಶಾರೀರಿಕ ಅಸೌಖ್ಯ*** (ವ. 13): ಅಸೌಖ್ಯದ ಕಾರಣ ತಿಳಿದಿಲ್ಲ. ಇದು ಅಪೊಸ್ತಲರ ಕೃತ್ಯದಲ್ಲಿ ಬರೆಯಲ್ಪಟ್ಟಿಲ್ಲ.

***ಮೊದಲನೆಯ ಸರ್ತಿ*** (ವ. 13): ಗ್ರೀಕ್ ಹೇಳಿಕೆಯು ಪೌಲನು ಗಲಾತ್ಯಕ್ಕೆ ಬಹುಶಃ ಅಪೊ.ಕೃತ್ಯ. 16:6 (ತನ್ನ ಮೂರನೇ ಪ್ರಯಾಣದ ವೇಳೆ) ರಲ್ಲಿ ತಿಳಿಸಲಾದ ಸಂದರ್ಭಗಳಲ್ಲಿ ಸುಮಾರು ಎರಡು ಬಾರಿ ಹೋಗಿರಬಹುದೆಂಬುದನ್ನು ಸೂಚಿಸುತ್ತದೆ.

## ಪ್ರಶ್ನೆಗಳು

1. ನಾವು ಹೇಗೆ ದೇವರ ಮಕ್ಕಳಾಗುತ್ತೇವೆ?
2. ಕ್ರಿಸ್ತನಲ್ಲಿನ ವಿಶ್ವಾಸಿಗಳ ಅನ್ಯೋನ್ಯತೆಯನ್ನು ಪೌಲನು ಹೇಗೆ ವಿವರಿಸುತ್ತಾನೆ?/ ವರ್ಣಿಸುತ್ತಾನೆ?
3. 3:29 ರಲ್ಲಿ ಕ್ರಿಸ್ತನಲ್ಲಿನ ವಿಶ್ವಾಸಿಗಳ ಅನ್ಯೋನ್ಯತೆಯನ್ನು ಪೌಲನು ಹೇಗೆ ವರ್ಣಿಸುತ್ತಾನೆ?
4. 4:4 ರಲ್ಲಿ ಪೌಲನು ಕ್ರಿಸ್ತನನ್ನು ಹೇಗೆ ವರ್ಣಿಸುತ್ತಾನೆ?
5. ದೇವರು ತನ್ನ ಮಗನನ್ನು ಕಳುಹಿಸಿದಾಗ ಮನುಷ್ಯನಿಗೆ ಏನಾಯಿತು? ಒಂದು ಪಟ್ಟಿಮಾಡಿರಿ.
6. 4:9 ರಲ್ಲಿ ಪೌಲನು ಯಾವುದರ ಕುರಿತು ಗಲಾತ್ಯರನ್ನು ದೂರುತ್ತಾನೆ?
7. ಮೊದಲ ಬಾರಿ ಸಂಧಿಸಿದಾಗ ಗಲಾತ್ಯದವರು ಪೌಲನನ್ನು ಹೇಗೆ ಸೇರಿಸಿಕೊಂಡರು?
8. ಗಲಾತ್ಯರಿಗಾಗಿ ಪೌಲನಲ್ಲಿದ್ದ ಭಾವನೆಗಳೇನು?

## ಆಲೋಚಿಸಿರಿ ಮತ್ತು ಚರ್ಚಿಸಿರಿ

1. 3:27 ರಲ್ಲಿ ಪೌಲನು ಉಪಯೋಗಿಸುವ/ ಬಳಸುವ ಚಿತ್ರಣಗಳಾವುವು?
2. 3:18 ರಲ್ಲಿ ಸಭೆಯ ಐಕ್ಯತೆಯ ಕುರಿತ ಪೌಲನ ವರ್ಣನೆಯು ಪ್ರತಿಯೊಂದು ಸ್ಥಳೀಯ ಸಭಾ ಅನ್ಯೋನ್ಯತೆಗೆ ಒಂದು ಸವಾಲಾಗಿದೆ. ಈ ವಚನಗಳ ಬೆಳಕಿನಲ್ಲಿ ನಿಮ್ಮ ಸ್ವಂತ ಸಭೆಯಲ್ಲಿ ಯಾವ ಬದಲಾವಣೆಗಳನ್ನು ಕಾಣಲು ನೀವು ಬಯಸುತ್ತೀರಿ?
3. ಧರ್ಮಶಾಸ್ತ್ರದ ಅಧೀನದಡಿಯಲ್ಲಿನ ಮನುಷ್ಯನ ಸ್ಥಿತಿಯನ್ನು ಪೌಲನು ಹೇಗೆ ವರ್ಣಿಸುತ್ತಾನೆ (ವ. 1-3)? ಸಾಧ್ಯವಾದಷ್ಟು ನಿಮ್ಮದೇ ಪದಗಳನ್ನುಪಯೋಗಿಸಿರಿ.
4. ಯೇಸುಕ್ರಿಸ್ತನ ಬರೋಣದ ನಂತರದ ಮನುಷ್ಯನ ಸ್ಥಿತಿಯನ್ನು ಪೌಲನು ಹೇಗೆ ವರ್ಣಿಸುತ್ತಾನೆ (ವ. 4-8)? ಸಾಧ್ಯವಾದಷ್ಟು ನಿಮ್ಮದೇ ಪದಗಳನ್ನುಪಯೋಗಿಸಿರಿ.
5. ಸಾಧ್ಯವಾದಷ್ಟು ಕಡಿಮೆ ಪದಗಳಲ್ಲಿ 4:8 ರಲ್ಲಿ ಕಂಡುಬರುವ ತದ್ವಿರುದ್ಧತೆಯನ್ನು ಸಾರಾಂಶಗೊಳಿಸಿರಿ.
6. ವಚನ 12 ರಲ್ಲಿನ ಪೌಲನ ವಾದವನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?
7. 4:12-20 ರಲ್ಲಿನ ಬಹು ಮುಖ್ಯ ತದ್ವಿರುದ್ಧತೆಗಳೇನಾಗಿರಬಹುದೆಂದು ನೀವು ಯೋಚಿಸುವಿರಿ?

# ಅಧ್ಯಯನ 11: ಎರಡು ಒಡಂಬಡಿಕೆಗಳು (4:21-31)

## ಪೀಠಿಕೆ ಮತ್ತು ಟಿಪ್ಪಣಿಗಳು

ಈ ವಾಕ್ಯಭಾಗದಲ್ಲಿ ಪೌಲನು ದೇವಜನರೊಂದಿಗೆ ಸೇರುವ ಸಲುವಾಗಿ ಯೆಹೂದಿ ಮತದವರ ಬೋಧನೆ (ಉಪದೇಶ) ಯನ್ನು ಅನುಸರಿಸಲು ಮತ್ತು ಯೆಹೂದಿ ಧರ್ಮಶಾಸ್ತ್ರಕ್ಕೆ ಅಧೀನರಾಗಲು ಬಯಸಿದ ಗಲಾತ್ಯದವರಿಗೆ ಸವಾಲೆಸೆಯುತ್ತಾನೆ. ಎರಡು ಒಡಂಬಡಿಕೆಗಳನ್ನು ವ್ಯತಿರಿಕ್ತವಾಗಿ/ ತದ್ವಿರುದ್ಧವಾಗಿ ತೋರಿಸುವುದರ ಮೂಲಕ ಆತನಿದನ್ನು ಮಾಡುತ್ತಾನೆ: ಧರ್ಮಶಾಸ್ತ್ರದ ಒಡಂಬಡಿಕೆಯು ಒಂದು ದಾಸತ್ವದ ಒಡಂಬಡಿಕೆಯಾಗಿದೆ, ಆದರೆ ವಾಗ್ದಾನದ ಒಡಂಬಡಿಕೆಯು ಸ್ವಾತಂತ್ರ್ಯದ ಒಡಂಬಡಿಕೆಯಾಗಿದೆ.

***ಧರ್ಮಶಾಸ್ತ್ರ ... ಧರ್ಮಶಾಸ್ತ್ರ*** (ವ. 21): ಇಲ್ಲಿ ಪೌಲನು "ಧರ್ಮಶಾಸ್ತ್ರ" ಎಂಬ ಪದವನ್ನು ಎರಡು ರೀತಿಯಲ್ಲಿ ಉಪಯೋಗಿಸುತ್ತಾನೆ. ಮೊದಲನೇಯದಾಗಿ "ಧರ್ಮಶಾಸ್ತ್ರ" ಎಂದರೆ "ಮೋಶೆಯ ಧರ್ಮಶಾಸ್ತ್ರ"ವಾಗಿದೆ (ಗಲಾತ್ಯದವರು ಯೆಹೂದಿ ಧರ್ಮಶಾಸ್ತ್ರವನ್ನು ಅನುಸರಿಸಲು ಬಯಸಿದರು) ಮತ್ತು ಎರಡನೇಯದಾಗಿ "ಧರ್ಮಶಾಸ್ತ್ರ" ಎಂದರೆ "ಶಾಸ್ತ್ರದ ಪುಸ್ತಕ/ ಧರ್ಮಶಾಸ್ತ್ರ" (ಅಬ್ರಹಾಮ ಮತ್ತು ಆತನ ಇಬ್ಬರು ಮಕ್ಕಳ ಕುರಿತ ವಿಷಯಗಳನ್ನೊಳಗೊಂಡ ಪಂಚಕಾಂಡ).

***ಆದರಲ್ಲಿ ಬರೆದಿರುವುದೇನೆಂದರೆ*** (ವ. 22): ಆದಿಕಾಂಡ 16ನೇ ಅಧ್ಯಾಯವು ಹಾಗರ್ ಮತ್ತು ಇಷ್ಮಾಯೇಲನ ಕುರಿತ ಕಥೆಯನ್ನು ಒಳಗೊಂಡಿದೆ. ಆದಿಕಾಂಡ 12ನೇ ಅಧ್ಯಾಯದಲ್ಲಿ ಇಸಾಕನ ಜನನ (ವ. 15) ಮತ್ತು ಹಾಗರ್ ಮತ್ತು ಇಷ್ಮಾಯೇಲನನ್ನು ಹೊರಹಾಕುವ (ವ. 8-19) ಕಥೆಗಳನ್ನು ನಾವು ಕಾಣುತ್ತೇವೆ.

***ಅಬ್ರಹಾಮನಿಗೆ ಇಬ್ಬರು ಮಕ್ಕಳಿದ್ದರು, ಒಬ್ಬನು ತೊತ್ತಿನಿಂದ ಹುಟ್ಟಿದವನು, ಒಬ್ಬನು ಧರ್ಮಪತ್ನಿಯಿಂದ ಹುಟ್ಟಿದವನು*** (ವ. 22): ಇಷ್ಮಾಯೇಲನು ಹಾಗರಳ ಮಗನು ಮತ್ತು ಇಸಾಕನು ಸಾರಳ ಮಗನು. ಹಾಗರಳು ಸಾರಳ ದಾಸಿ.

***ಅರಬಸ್ಥಾನದಲ್ಲಿರುವ ಸೀನಾಯಿ ಪರ್ವತ*** (ವ. 25): ಅರೇಬಿಯಾದ ರೋಮನ್ ಪ್ರಾಂತ್ಯವು ಸೀನಾಯಿ ಪರ್ವತವಿರುವ ಸೀನಾಯಿ ದ್ವೀಪವನ್ನು ಒಳಗೊಂಡಿತ್ತು.

ವಚನ 27: ವಾಕ್ಯಭಾಗದ ಪ್ರಾರಂಭವು ಚೀಯೋನಿನ (ಯೆರೂಸಲೇಮ್) ಮುಂದಿನ ಮಹಿಮೆಯ ಕುರಿತ ಯೆಶಾಯ 54:1 ರ ಒಂದು ಉಲ್ಲೇಖವಾಗಿದೆ.

ವಚನ 28: ಮೂಲ ಗ್ರೀಕ್ ಹಸ್ತಪ್ರತಿಯಲ್ಲಿ ವಿಭಿನ್ನವಾಗಿದೆ. ಕೆಲವು ಪ್ರತಿಗಳಲ್ಲಿ "ಆದರೆ ಸಹೋದರರೇ ನೀವು ಇಸಾಕನಂತೆ ವಾಗ್ದಾನದ ಮಕ್ಕಳಾಗಿದ್ದೀರಿ" ಎಂದರೆ (ಆಂಗ್ಲ NIV ಯೊಂದಿಗೆ ಹೋಲಿಸಿರಿ). ಉಳಿದ ಪ್ರತಿಗಳಲ್ಲಿ "ಆದರೆ ಸಹೋದರರಾದ ನಾವು ಇಸಾಕನಂತೆ ವಾಗ್ದಾನದ ಮಕ್ಕಳು ಎಂದಿದೆ (ಕನ್ನಡದ ಎರಡು ಭಾಷಾಂತರಗನ್ನು ಹೋಲಿಸಿರಿ). ಪೌಲನ ಸಂದೇಶವನ್ನು ಅರ್ಥಮಾಡಿಕೊಳ್ಳಲು ನಮಗೆ ಯಾವ ಆವೃತ್ತಿಯನ್ನು ಉಪಯೋಗಿಸುತ್ತೇವೆಂಬುದು ಪ್ರಾಮುಖ್ಯವಲ್ಲ.

***ವಾಗ್ದಾನದ ಮಕ್ಕಳು/ ವಾಗ್ದಾನದ ಫಲವಾಗಿ ಹುಟ್ಟಿದ ಮಕ್ಕಳು*** (ವ. 28): 3:29 ಮತ್ತು ರೋಮಾ. 9:8 ರೊಂದಿಗೆ ಹೋಲಿಸಿರಿ.

***ಹಿಂಸೆಪಡಿಸಿದಂತೆ*** (ವ. 29): ಆದಿಕಾಂಡ 21:9 ನ್ನು ನೋಡಿ ಇಲ್ಲಿ ಬಳಸಲಾದ ಇಬ್ರಿಯ ಪದವು "ಅಣಕಿಸು"/ "ಪರಿಹಾಸ್ಯಮಾಡು" ಎಂಬುದಾಗಿ ಸಹ ಅರ್ಥಕೊಡುತ್ತದೆ. ಇಸಾಕನು ಇಷ್ಮಾಯೇಲನಿಂದ ಹಿಂಸೆಗೊಳಗಾದನು ಅಥವಾ ನಿಂದಿಸಲ್ಪಟ್ಟನೆಂಬುದಾಗಿ ಕೆಲ ಯೆಹೂದಿ ಪಂಡಿತರು ಯೋಚಿಸುತ್ತಾರೆ.

ವಚನ 30: ಸಾರಳು ಅಬ್ರಹಾಮನಿಗೆ ಹಾಗರ್ ಮತ್ತು ಅವಳ ಮಗನಾದ ಇಷ್ಮಾಯೇಲನನ್ನು ಹೊರಹಾಕಬೇಕೆಂದು ಹೇಳುವ ಆದಿಕಾಂಡ 21:10 ರ ಒಂದು ಹೇಳಿಕೆ/ ಉಲ್ಲೇಖವಾಗಿದೆ.

## ಪ್ರಶ್ನೆಗಳು

1. ಹಾಗರ್ ಮತ್ತು ಇಷ್ಮಾಯೇಲರು ಯಾರು? ಹಾಗರಳು ಯಾವ ಒಡಂಬಡಿಕೆಯನ್ನು ಸೂಚಿಸುತ್ತಾಳೆ? (ಈ ಅಧ್ಯಾಯದ ಪೀಠಿಕೆ ನೋಡಿ).
2. ಸಾರಾ ಮತ್ತು ಇಸಾಕರು ಯಾರು? ಸಾರಳು ಯಾವ ಒಡಂಬಡಿಕೆಯನ್ನು ಸೂಚಿಸುತ್ತಾಳೆ? (ಈ ಅಧ್ಯಾಯದ ಪೀಠಿಕೆ ನೋಡಿರಿ).
3. ಪೌಲನು ಕ್ರಿಸ್ತನಲ್ಲಿನ ವಿಶ್ವಾಸಿಗಳು ಮತ್ತು ಇಸಾಕನ ನಡುವೆ ಒಂದು ಹೋಲಿಕೆಯನ್ನು ಮಾಡುತ್ತಾನೆ. ಆತನು ಹೇಳುವ ಅಂಶವೇನು?/ ಹೇಳುತ್ತಿರುವುದೇನು?
4. ಕ್ರಿಸ್ತನಲ್ಲಿನ ವಿಶ್ವಾಸಿಗಳ ಪುತ್ರತ್ವದ ಕುರಿತು ಪೌಲನು ಹೇಳುವುದೇನು?

## ಆಲೋಚಿಸಿರಿ ಮತ್ತು ಚರ್ಚಿಸಿರಿ

1. ವಚನ 21 ರಲ್ಲಿ ಗಲಾತ್ಯದವರಿಗೆ ಪೌಲನ ಪರಿಚಯಾತ್ಮಕ/ ಆರಂಭಿಕ ಹೇಳಿಕೆಯ ನಂತರ ಈ ವಾಕ್ಯಭಾಗವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಮೂರು ಭಾಗಗಳನ್ನು ಗುರುತಿಸಿರಿ.
2. ಈ ವಾಕ್ಯಭಾಗದಲ್ಲಿ ವರ್ಣಿಸಲ್ಪಟ್ಟಂತೆ ಎರಡು ಒಡಂಬಡಿಕೆಗಳನ್ನು ಸಾರಾಂಶಗೊಳಿಸಿರಿ.
3. ಈ ವಾಕ್ಯಭಾಗದಲ್ಲಿನ ಪೌಲನ ಮುಖ್ಯ ಅಂಶವೇನಾಗಿದೆ?

# ಅಧ್ಯಯನ 12: ಶಿಲುಬೆ ಅಥವಾ ಸುನ್ನತಿ (5:1-12)

## ಪೀಠಿಕೆ ಮತ್ತು ಟಿಪ್ಪಣಿಗಳು

ತಾನು ಅವರಿಗೆ ಸಾರಿದ ಸುವಾರ್ತೆಯ ಸತ್ಯದಲ್ಲಿ ದೃಢವಾಗಿ ನಿಲ್ಲಬೇಕೆಂದು ಪೌಲನು ಗಲಾತ್ಯದವರಿಗೆ ಬಲವಾಗಿ ಎಚ್ಚರಿಸುತ್ತಾನೆ. ಅದು ಕ್ರಿಸ್ತನ ಮತ್ತು ಆತನ ಶಿಲುಬೆಯ ಮೂಲಕ ಇರುವ ದೇವರ ಕೃಪೆಯ ಸುವಾರ್ತೆಯಾಗಿದ್ದು, ಅದು ದೇವರಿಗಾಗಿ ಮತ್ತು ನಮ್ಮ ನೆರೆಯವರಿಗಾಗಿ ಪ್ರೀತಿಯ ಮೂಲಕ ವ್ಯಕ್ತಪಡಿಸಿದ ಕ್ರಿಸ್ತನಲ್ಲಿನ ನಂಬಿಕೆಯಾಗಿದೆ. ನೀತಿವಂತಿಕೆಗಾಗಿ ನಾವು ಕಾಯುತ್ತಾ ಮತ್ತು ನಿರೀಕ್ಷಿಸುವ ಆತನಲ್ಲಿನ ಜೀವದ ಒಂದು ಸುವಾರ್ತೆಯಾಗಿದೆ. ಅನ್ಯಜನರ ನೀತಿನಿರ್ಣಯ ಮತ್ತು ರಕ್ಷಣೆಗೆ ಸುನ್ನತಿಯು ಒಂದು ಹೆಚ್ಚುವರಿ ಅಗತ್ಯವಾಗಿದೆ ಎಂದು ಹೇಳುವ ಯೆಹೂದಿ ಮತದವರ ಸುಳ್ಳು ಬೋಧನೆಯನ್ನು ತೋರಿಸುತ್ತಾ ಅದನ್ನು ಬಲವಾಗಿ ಖಂಡಿಸುತ್ತಾನೆ. ತಮ್ಮ ದುರ್ಬೋಧನೆಗಾಗಿ ಅವರು ನ್ಯಾಯತೀರ್ಪಿಗೊಳಗಾಗುವರು.

***ನೀತಿವಂತರಾಗುತ್ತೇವೆಂಬ ನಿರೀಕ್ಷೆ*** (ವ. 5): ನಮ್ಮ ಕ್ರೈಸ್ತೀಯ ನಂಬಿಕೆಯು ಯೇಸುಕ್ರಿಸ್ತನ ಬರೋಣಕ್ಕೆ ಆಸರೆಯಾಗಿದೆ. ಪೌಲನು ತೀತನಿಗೆ ಹೇಳುವ ಮಾತುಗಳೊಂದಿಗೆ ಹೋಲಿಸಿ, "ಎಲ್ಲಾ ಮನುಷ್ಯರಿಗೆ ರಕ್ಷಣೆಯನ್ನುಂಟುಮಾಡುವ ದೇವರ ಕೃಪೆಯು ಪ್ರತ್ಯಕ್ಷವಾಯಿತು; ನಾವು ಭಕ್ತಿಹೀನತೆಯನ್ನೂ ಲೋಕದ ಆಶೆಗಳನ್ನೂ ವಿಸರ್ಜಿಸಿ ಭಾಗ್ಯಕರವಾದ ನಿರೀಕ್ಷೆಯನ್ನು ಅಂದರೆ ಮಹಾದೇವರ ಮತ್ತು ನಮ್ಮ ರಕ್ಷಕನಾದ ಯೇಸುಕ್ರಿಸ್ತನ ಪ್ರಭಾವದ ಪ್ರತ್ಯಕ್ಷತೆಯನ್ನು ಎದುರುನೋಡುತ್ತಾ ಇಹಲೋಕದಲ್ಲಿ ಸ್ವಸ್ಥ ಚಿತ್ತರಾಗಿಯೂ ನೀತಿವಂತರಾಗಿಯೂ ಭಕ್ತಿಯುಳ್ಳವರಾಗಿಯೂ ಬದುಕಬೇಕೆಂದು ಅದು ನಮಗೆ ಬೋಧಿಸುತ್ತದೆ" (ತೀತ 2:11-13).

***ವಿಸರ್ಜಿಸು*** (ವ. 12): ಗ್ರೀಕ್ ಪದವು "ತೆಗೆದುಹಾಕು" ಮತ್ತು "ಕಸಿಮಾಡು"/ ವಿಸರ್ಜಿಸು ಎಂಬುದಾಗಿ ಸಹ ಅರ್ಥಕೊಡುತ್ತದೆ.

## ಪ್ರಶ್ನೆಗಳು

1. ವಚನ 1 ರಲ್ಲಿ ಪೌಲನು ಏನನ್ನು ತದ್ವಿರುದ್ಧಗೊಳಿಸುತ್ತಾನೆ?
2. ಧರ್ಮಶಾಸ್ತ್ರವನ್ನು ಕೈಕೊಳ್ಳುವುದರ ಮೂಲಕ ಒಬ್ಬ ವ್ಯಕ್ತಿಯು ನೀತಿವಂತನಾಗಲು ಪ್ರಯತ್ನಿಸುವಾಗ ಏನಾಗುತ್ತದೆ?
3. ನಾವು ನಿರೀಕ್ಷಿಸುವ ನೀತಿವಂತಿಕೆಯನ್ನು ನಾವು ಹೇಗೆ ಮುಟ್ಟುತ್ತೇವೆ?
4. ವಚನ 6 ರಲ್ಲಿ ಪೌಲನು ಸುನ್ನತಿಯ ಬಗ್ಗೆ ಏನೆಂದು ಹೇಳುತ್ತಾನೆ?
5. ಯಾಕೆ ಪೌಲನು ಇನ್ನೂ ಹಿಂಸೆಗೊಳಗಾದನು?

## ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಈ ವಾಕ್ಯಭಾಗದಲ್ಲಿ ಪೌಲನು ತನ್ನ ಕಾಳಜಿ ಮತ್ತು ಸಿಟ್ಟನ್ನು ಹೇಗೆ ತೋರಿಸುತ್ತಾನೆ?
2. ವಚನ 9 ರಲ್ಲಿ ತಾನು ಹೇಳಬೇಕಾದದ್ದನ್ನು ವಿವರಿಸಲು ಪೌಲನು ಒಂದು ಗಾದೆಯನ್ನು ಉಪಯೋಗಿಸುತ್ತಾನೆ. ಹೇಗೆ ಎಂದು ವಿವರಿಸಿರಿ.

3. ಈ ವಾಕ್ಯಭಾಗದಲ್ಲಿ ಪೌಲನು ಎರಡು ರೀತಿಯ ನಂಬಿಕೆಯನ್ನು ತದ್ವಿರುದ್ಧವಾಗಿ ತೋರಿಸುತ್ತಾನೆ (ಒಬ್ಬ ಸತ್ಯವೇದ ಪಂಡಿತರು ಇದನ್ನು "ಎರಡು ಧರ್ಮಗಳ ನಡುವಿನ ತದ್ವಿರುದ್ಧತೆ" ಎಂಬುದಾಗಿ ಕರೆದಿದ್ದಾರೆ). ಅವು ಯಾವುವು? ಅವು ಹೇಗೆ ವಿಭಿನ್ನವಾಗಿವೆ.

# ಅಧ್ಯಯನ 13: ಆತ್ಮನಲ್ಲಿ ಜೀವಿಸಿರಿ (5:13-26)

## ಪೀಠಿಕೆ ಮತ್ತು ಟಿಪ್ಪಣಿಗಳು

ಪೌಲನು ಈಗ ತನ್ನ ಓದುಗರಿಗೆ ಕ್ರಿಸ್ತನಲ್ಲಿನ ತಮ್ಮ ಸ್ವಾತಂತ್ರ್ಯವನ್ನು ಯೆಹೂದಿ ಧರ್ಮಶಾಸ್ತ್ರದಿಂದ ದುರುಪಯೋಗಪಡಿಸಿಕೊಳ್ಳಬಾರದೆಂದು ತನ್ನ ಓದುಗರಿಗೆ ಹೇಳುತ್ತಾನೆ. ಇಡೀ ಹಳೇ ಒಡಂಬಡಿಕೆಯ ಧರ್ಮಶಾಸ್ತ್ರವನ್ನು ಒಗ್ಗೂಡಿಸುವ/ ಸಾರಂಶಗೊಳಿಸುವ ಕ್ರಿಸ್ತನ ನಿಯಮಗಳಿಗನುಸಾರವಾಗಿ ಅವರು ನಡೆದುಕೊಂಡರೆ ಹೀಗೆ ಆಗುವುದಿಲ್ಲ: "ನಿಮ್ಮ ದೇವರನ್ನು ಮತ್ತು ನೆರೆಯವರನ್ನು ಪ್ರೀತಿಸಿರಿ" !

ಶಿಲುಬೆಗೆ ಹಾಕಲ್ಪಟ್ಟ ಕ್ರಿಸ್ತನನ್ನು ನಮ್ಮ ಕರ್ತನು ಮತ್ತು ರಕ್ಷಕನನ್ನಾಗಿ ನಾವು ಅಂಗೀಕರಿಸುವಾಗ ನಮ್ಮ ಶರೀರ (ನಮ್ಮ ಹಳೆಯ ಪಾಪಮಯ ಮಾನುಷಿಕ ಸ್ವಭಾವ) ವು ತನ್ನ ಮತ್ತು ಸ್ವೇಚ್ಛಾಭಿಲಾಶೆಯೊಂದಿಗೆ ಶಿಲುಬೆಗೆ ಹಾಕಲ್ಪಟ್ಟಿದೆ. ಪವಿತ್ರಾತ್ಮನ ಮೂಲಕ ನಾವು ಆತ್ಮೀಕ ಜೀವವನ್ನು ಹೊಂದಿಕೊಂಡಿದ್ದೇವೆ. ಈಗ ದೇವರಾತ್ಮನು ನಮ್ಮಲ್ಲಿ ವಾಸಿಸುತ್ತಾ ನಮ್ಮ ಜೀವಿತಗಳಲ್ಲಿ ದೇವರಾತ್ಮನ ಫಲಗಳನ್ನು ಉತ್ಪಾದಿಸುವುದರೊಂದಿಗೆ ನಮ್ಮ ಮೂಲಕ ಕ್ರಿಸ್ತನ ನಿಯಮವನ್ನು ನೆರವೇರಿಸುತ್ತಾನೆ. ಆದರೆ ನಮ್ಮನ್ನು ಕ್ರಿಸ್ತನ ಸ್ವಾರುಪ್ಯಕ್ಕೆ ರೂಪಾಂತರಿಸಲು, ನಮ್ಮನ್ನು ಉಪಯೋಗಿಸಲು ಮತ್ತು ನಮ್ಮನ್ನು ಮಾರ್ಗದರ್ಶಿಸಲು ನಾವು ಪವಿತ್ರಾತ್ಮನಿಗೆ ಅನುವು ಮಾಡಿಕೊಡಬೇಕು.

***ಶರೀರ*** (ವ. 13, 16): ಬಿದ್ದುಹೋದ/ ಪಾಪಮಾಡಿದ ಮನುಷ್ಯನ ಸ್ವಭಾವವು ಈ ಲೋಕದಲ್ಲಿನ ಮನುಷ್ಯನ ಪಾಪಮಯವಾದ ಸ್ವಭಾವವಾಗಿದೆ. ಅನೇಕ ಭಾಷಾಂತರಗಳು "ಶರೀರ" ಎಂಬ ಪದವನ್ನು ಬಿಟ್ಟು ಅದರ ಬದಲಾಗಿ "ನಮ್ಮ ಪಾಪಮಯ ಸ್ವಭಾವ" ಎಂಬ ಹೇಳಿಕೆಯನ್ನುಪಯೋಗಿಸಿವೆ.

ವಚನ 14 ರಲ್ಲಿನ ಉಲ್ಲೇಖವು ಯಾಜಕಕಾಂಡ 19:18 ರದ್ದಾಗಿದೆ. ಇದು ಯೇಸುವಿನಿಂದ (ಉದಾ: ಮತ್ತಾ. 5:43, 19:19, 22:39 ನ್ನು ನೋಡಿರಿ), ರೋಮಾ. 13:19 ರಲ್ಲಿ ಪೌಲನಿಂದ ಮತ್ತು 2:8 ರಲ್ಲಿ ಯಾಕೋಬನಿಂದ ಉಲ್ಲೇಖಿಸಲ್ಪಟ್ಟಿದೆ. ಅಲ್ಲದೇ ಮತ್ತಾಯ 7:12 ರಲ್ಲಿನ "ಅಂತು ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತೀರೋ ಅದನ್ನೇ ನೀವು ಅವರಿಗೆ ಮಾಡಿರಿ, ಇದೇ ಧರ್ಮಶಾಸ್ತ್ರದ ಮತ್ತು ಪ್ರವಾದಿಗಳ ತಾತ್ಪರ್ಯ" ಎಂಬ ಯೇಸುವಿನ ಮಾತುಗಳೊಂದಿಗೆ ಹೋಲಿಸಿರಿ.

***ಪವಿತ್ರಾತ್ಮನನ್ನು ಅನುಸರಿಸಿ ನಡೆದುಕೊಳ್ಳಿರಿ/ ಜೀವಿಸಿರಿ*** (ವ. 16): "ಜೀವಿಸು/ ನಡೆದುಕೋ" ಇದರ ಗ್ರೀಕ್ ಕ್ರಿಯಾಪದದ ವ್ಯಾಕರಣಾತ್ಮಕ ರೂಪವು ಒಂದು ಹವ್ಯಾಸ/ ಅಭ್ಯಾಸವನ್ನು ಸೂಚಿಸುತ್ತದೆ: "ಆತ್ಮನಲ್ಲಿ ಜೀವಿಸುವುದನ್ನು/ ನಡೆದುಕೊಳ್ಳುವುದನ್ನು ಮುಂದುವರಿಸಿರಿ", "ಆತ್ಮನಲ್ಲಿ ಜೀವಿಸುತ್ತಾ ಇರಿ". ವಚನ 18 ರಲ್ಲಿನ "ಆತ್ಮನಲ್ಲಿ ನಡೆದುಕೊಳ್ಳುವುದಾದರೆ" ಮಾತಿನೊಂದಿಗೆ ಹೋಲಿಸಿರಿ. ರೋಮಾ. 8:14 ರಲ್ಲಿ ಪೌಲನು "ಯಾರಾರು ದೇವರ ಆತ್ಮನಿಂದ ನಡೆಸಿಕೊಳ್ಳುತ್ತಾರೋ ಅವರು ದೇವರ ಮಕ್ಕಳು" ಎಂದು ಹೇಳುತ್ತಾನೆ. ಕೆಳಕಂಡ ವಚನ 25 ರ ಕುರಿತ ನನ್ನ ಟಿಪ್ಪಣಿಯನ್ನು ನೋಡಿರಿ.

***ಆತ್ಮನಿಂದ ನಡಿಸಿಕೊಳ್ಳುವವರು*** (ವ. 18): ವ. 18 ರ ಟಿಪ್ಪಣಿಯನ್ನು ನೋಡಿರಿ.

***ನೇಮನಿಷ್ಠೆಗಳಿಗೆ ಅಧೀನರಲ್ಲ*** (ವ. 18): ಯೆಹೂದಿ ಧರ್ಮಶಾಸ್ತ್ರವನ್ನು ಅನುಸರಿಸುವುದರ ಮೂಲಕ ನೀತಿವಂತರಾಗಲು ಪ್ರಯತ್ನಿಸುವ ದಾಸತ್ವದ ಅಡಿಯಲ್ಲಿ ಇರುವವರಲ್ಲ.

***ಶರೀರಭಾವವನ್ನು ಶಿಲುಬೆಗೆ ಹಾಕಿದವರು*** (ವ. 24): ರೋಮಾ. 6:6 ಮತ್ತು ಗಲಾತ್ಯ 6:14 ರೊಂದಿಗೆ ಹೋಲಿಸಿ.

***ಆತ್ಮನಿಂದ ಜೀವಿಸುತ್ತಿರಲಾಗಿ/ ಆತ್ಮನಿಂದ ನಡೆಸಿಕೊಳ್ಳುವುದು*** (ವ. 25): ಇಲ್ಲಿ ಪೌಲನು ವ. 16 ರಲ್ಲಿ ಇರುವುದಕ್ಕಿಂತ ಒಂದು ವಿಭಿನ್ನವಾದ ಗ್ರೀಕ್ ಪದವನ್ನು ಬಳಸುತ್ತಾನೆ. ನಮ್ಮ ಆತ್ಮೀಕ ಜೀವಿತವು ಯೇಸುಕ್ರಿಸ್ತನನ್ನು ನಮ್ಮ ಕರ್ತನು ಮತ್ತು ರಕ್ಷಕನನ್ನಾಗಿ ಅಂಗೀಕರಿಸಿಕೊಂಡ ಕ್ಷಣವಾದ ನಮ್ಮ ಆತ್ಮೀಕ ಜನನದೊಂದಿಗೆ ಪ್ರಾರಂಭವಾಗಿದೆ. ನಮ್ಮ ಮುಂದುವರೆದ ಕ್ರೈಸ್ತೀಯ ಜೀವಿತವು ನಮ್ಮಲ್ಲಿ ಪವಿತ್ರಾತ್ಮನು ನಮ್ಮಲ್ಲಿ ನಮ್ಮ ಮೂಲಕ ಕಾರ್ಯಮಾಡುವುದಾಗಿದೆ. ಆತ್ಮನಲ್ಲಿ ನಮಗೆ ಜೀವವಿದೆ. ಅದರ ಪರಿಣಾಮವಾಗಿ ನಾವು ಆತ್ಮನಲ್ಲಿ ನಡೆದುಕೊಳ್ಳುವವರಾಗಿದ್ದೇವೆ.

## ಪ್ರಶ್ನೆಗಳು

1. "ಸ್ವಾತಂತ್ರ್ಯವು" ವಚನ 13-15 ರಲ್ಲಿನ ಒಂದು ಮುಖ್ಯಪದವಾಗಿದೆ. ಈ ಸ್ವಾತಂತ್ರ್ಯದ ಮೂಲ ಯಾವುದು? (ವ. 1 ನ್ನು ನೋಡಿ) ಮತ್ತು ವ. 13 ರಲ್ಲಿನ ಈ ಸ್ವಾತಂತ್ರ್ಯದ ಬಗ್ಗೆ ಪೌಲನು ಏನೆಂದು ಹೇಳುತ್ತಾನೆ?
2. ಪೌಲನು ಶರೀರವನ್ನು ಗಲಾತ್ಯ 5:16-26 ರಲ್ಲಿ ಯಾವುದರೊಂದಿಗೆ ತದ್ವಿರುದ್ಧವಾಗಿ ತೋರಿಸುತ್ತಾನೆ?
3. ಗಲಾತ್ಯ 5:16-26 ರಲ್ಲಿ ಪೌಲನು ಒಳ್ಳೆಯ ಸಂಗತಿಗಳ ಒಂದು ಮತ್ತು ಕೆಟ್ಟ ಸಂಗತಿಗಳ ಇನ್ನೊಂದು ಹೀಗೆ ಎರಡು ಪಟ್ಟಿಗಳನ್ನು ಪ್ರಸ್ತುತಪಡಿಸುತ್ತಾನೆ. ಈ ಪಟ್ಟಿಗಳಿಗೆ ಇರುವ ತಲೆಬರಹವೇನು?
4. ಶರೀರಭಾವದ ಕರ್ಮಗಳನ್ನು ಅನುಸರಿಸುವವರಿಗೆ ಏನಾಗುತ್ತದೆ?
5. ವ. 23 ರಲ್ಲಿ ಪೌಲನು ದೇವರಾತ್ಮನ ಫಲ ಮತ್ತು ಧರ್ಮಶಾಸ್ತ್ರದ ಬಗ್ಗೆ ಏನೆಂದು ಹೇಳುತ್ತಾನೆ?

## ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಗಲಾತ್ಯ 5:13-15 ರಲ್ಲಿ ಕ್ರೈಸ್ತೀಯ ಸ್ವಾತಂತ್ರ್ಯದ ಬಗ್ಗೆ ನಾವು ಏನನ್ನು ಕಲಿಯುತ್ತೇವೆ?
2. ವ. 15 ರಿಂದ ಗಲಾತ್ಯದಲ್ಲಿನ ಸಭೆಗಳ ಬಗ್ಗೆ ನಾವು ಏನನ್ನು ತಿಳಿದುಕೊಳ್ಳಬಹುದು?
3. ಕ್ರಿಸ್ತನಲ್ಲಿನ ಒಬ್ಬ ವಿಶ್ವಾಸಿಯ ಜೀವಿತದಲ್ಲಿ ಪವಿತ್ರಾತ್ಮನ ಪಾತ್ರವನ್ನು ನೀವು ಹೇಗೆ ವಿವರಿಸುವಿರಿ? ನಿಮ್ಮ ಅಂಶಗಳನ್ನು ಗಲಾತ್ಯ 5:16-26 ಕ್ಕೆ ಮಿತಿಗೊಳಿಸಿರಿ.
4. ಪೌಲನ ಎರಡು ಪಟ್ಟಿಗಳಲ್ಲಿನ ಪ್ರತಿಯೊಂದು ಪದಗಳಿಗೆ ಹೋಗಿ ಅವುಗಳ ಅರ್ಥವೇನೆಂದು ವಿವರಿಸಿರಿ.
5. ವ. 26 ರಿಂದ ಗಲಾತ್ಯದಲ್ಲಿರುವ ಸಭೆಗಳ ಬಗ್ಗೆ ನಾವು ಏನನ್ನು ತಿಳಿದುಕೊಳ್ಳಬಹುದು?

# ಅಧ್ಯಯನ 14: ಬಿತ್ತುವುದು ಮತ್ತು ಕೊಯ್ಯುವುದು (6:1-10)

## ಪೀಠಿಕೆ ಮತ್ತು ಟಿಪ್ಪಣಿಗಳು

ಈ ವಾಕ್ಯಭಾಗದಲ್ಲಿ ಪೌಲನು ಗಲಾತ್ಯದಲ್ಲಿರುವ ಸಭೆಗಳಿಗೆ ಪವಿತ್ರಾತ್ಮನಿಂದ ನಡೆಸಲ್ಪಡುವ ಒಂದು ಜೀವಿತ, ನಿನ್ನಂತೆಯೇ ನಿನ್ನ ನೆರೆಯವರನ್ನು ಪ್ರೀತಿಸಬೇಕೆಂಬ ಕ್ರಿಸ್ತನ ನೇಮವನ್ನು ನೆರವೇರಿಸುವ ಒಂದು ಜೀವಿತವನ್ನು ನಡೆಸುವುದೆಂದರೇನು ಎಂಬುದನ್ನು ಕೆಲವು ಉದಾಹರಣೆಗಳನ್ನು ತೋರಿಸುತ್ತಾನೆ. ಎಲ್ಲರಿಗೂ ಒಳ್ಳೇದನ್ನು ಮಾಡುವುದರಲ್ಲಿ ದೇವರಾತ್ಮನ ಫಲವನ್ನು ಕೊಡುವುದರಲ್ಲಿ ನಾವು ಬೇಸರಗೊಳ್ಳಬಾರದು. ಆಗ ದೇವರ ಸುಗ್ಗಿಯ ದಿನದಲ್ಲಿ ನಾವು ಜಿತ್ಯಜೀವವನ್ನು ಕೊಯ್ಯುವೆವು.

***ಕ್ರಿಸ್ತನ ನಿಯಮ*** (ವ. 2): ದೇವರನ್ನು ಮತ್ತು ಒಬ್ಬರ ನೆರೆಯನನ್ನು ತನ್ನಂತೆಯೇ ಪ್ರೀತಿಸುವ ಕುರಿತ ದೊಡ್ಡ ಆಜ್ಞೆ.

***ಭಾರ*** (ವ. 2) ಮತ್ತು *ಹೊರೆ* (ವ. 5): ಪೌಲನು ಎರಡು ಸಮಾನಾರ್ಥಕ ಗ್ರೀಕ್ ಪದಗಳನ್ನು ಬಳಸುತ್ತಾನೆ. ಆದರೆ ಆತನು ಅವುಗಳನ್ನು ಬೇರೆ ಬೇರೆ ಹಿನ್ನಲೆ/ ಸಂದರ್ಭಗಳಲ್ಲಿ ಉಪಯೋಗಿಸುತ್ತಾನೆ. ಹಾಗಾಗಿ ಆತನು ತನ್ನನ್ನು ವಿರೋಧಿಸಿಕೊಳ್ಳುತ್ತಿಲ್ಲ.

## ಪ್ರಶ್ನೆಗಳು

1. ಯಾವುದೋ ಒಂದು ಪಾಪ/ ದೋಷದಲ್ಲಿ ಸಿಕ್ಕಿಬಿದ್ದ ಸಹೋದರನಿಗೆ ಏನು ಮಾಡಬೇಕೆಂದು ಪೌಲನು ಹೇಳುತ್ತಾನೆ?
2. ವ. 2 ರ ಪ್ರಕಾರ ಕ್ರಿಸ್ತನ ನಿಯಮವನ್ನು ನಾವು ಹೇಗೆ ನೆರವೇರಿಸುತ್ತೇವೆ?
3. "ಪ್ರತಿಯೊಬ್ಬನೂ ತನ್ನ ಸ್ವಂತ ಭಾರವನ್ನು ಹೊತ್ತುಕೊಳ್ಳಬೇಕು" ಎಂಬುದನ್ನು ಪೌಲನು ಯಾವ ಹಿನ್ನಲೆ/ ಸಂದರ್ಭದಲ್ಲಿ ಹೇಳುತ್ತಾನೆ?
4. ವ. 7 ರಲ್ಲಿ ಪೌಲನು ದೈನಂದಿನ ಜೀವನದ ಒಂದು ರೂಪಾಲಂಕಾರವನ್ನು ಬಳಸುತ್ತಾನೆ. ಆ ರೂಪಾಲಂಕಾರವನ್ನು ವಿವರಿಸಿರಿ.
5. ತನ್ನ ಓದುಗರಿಗೆ ಒಂದು ಉತ್ತೇಜನದೊಂದಿಗೆ ಈ ವಾಕ್ಯಭಾಗವನ್ನು ಪೌಲನು ಮುಕ್ತಾಯಗೊಳಿಸುತ್ತಾನೆ. ಆತನು ಅವರಿಗೆ ಹೇಳುವುದೇನು?

## ಆಲೋಚಿಸಿರಿ ಮತ್ತು ಚರ್ಚಿಸಿರಿ

1. ವ. 1 ರಿಂದ ನಾವು ಏನನ್ನು ಕಲಿಯಬಹುದು?
2. ವ. 2 ಮತ್ತು 1 ರ ಸಂಬಂಧವನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?
3. ವ. 6 ರಲ್ಲಿ "ತನಗಿರುವ ಎಲ್ಲಾ ಒಳ್ಳೆಯವುಗಳಲ್ಲಿ ಪಾಲುಕೊಡಲಿ" ಎಂದು ಪೌಲನು ಹೇಳುವುದರ ಅರ್ಥವೇನಾಗಿರಬಹುದು?
4. ವ. 7-10 ರಲ್ಲಿನ ಪೌಲನ ಸಂದೇಶವನ್ನು ವಿವರಿಸಿರಿ. ಸಾಧ್ಯವಾದಷ್ಟು ನಿಮ್ಮದೇ ಪದಗಳನ್ನು ಉಪಯೋಗಿಸಿರಿ.

# ಅಧ್ಯಯನ 15: ಪೌಲನ ಕಡೇ ಮಾತುಗಳು (6:11-18)

## ಪೀಠಿಕೆ ಮತ್ತು ಟಿಪ್ಪಣಿಗಳು

ಬಹುಶಃ ತಾನು ಅವರಿಗೆ ಹೇಳಬೇಕಾದದ್ದನ್ನು ತನ್ನ ಓದುಗರು ಗಮನಿಸಬೇಕೆಂಬುದನ್ನು ಖಚಿತಪಡಿಸಿಕೊಳ್ಳಲು ಪೌಲನು ತನ್ನ ಕೊನೇ ಮಾತುಗಳನ್ನು ತನ್ನ ಸ್ವಂತ ಕೈಯಿಂದ ಬರೆಯುತ್ತಾನೆ. ಅನ್ಯಜನರು ದೇವರ ರಾಜ್ಯದಲ್ಲಿನ ಹೊಸ/ ನೂತನ ಸೃಷ್ಟಿಯನ್ನು ಅನುಭವಿಸಲು ಸುನ್ನತಿಯೊಂದೇ ಮಾರ್ಗವಲ್ಲ, ಆದರೆ ದೇವರ ಕೃಪಾ ಸುವಾರ್ತೆ ಮತ್ತು ಶಿಲುಬೆಗೆ ಹಾಕಲ್ಪಟ್ಟ ಕ್ರಿಸ್ತನ ಮೇಲಣ ಅವರ ನಂಬಿಕೆಯು ಅವರನ್ನು ಅಲ್ಲಿಗೆ ನಡೆಸುವುದು. ಈ ನಿಯಮವನ್ನು ಪಾಲಿಸುವವರೆಲ್ಲರ ಮೇಲೆ ದೇವರ ಸಮಾಧಾನ ಮತ್ತು ಕರುಣೆಯಿರುತ್ತದೆ.

***ದೊಡ್ಡ ಅಕ್ಷರಗಳು*** (ವ. 11): ಬಹುಶಃ ತನ್ನ ಕೊನೇ ಮಾತುಗಳ ಪ್ರಾಮುಖ್ಯತೆಯನ್ನು ಒತ್ತಿ ಹೇಳುವುದಕ್ಕಾಗಿ ಪೌಲನು ದೊಡ್ಡ ಅಕ್ಷರಗಳನ್ನು ಬಳಸುತ್ತಾನೆ.

***ಸ್ವಂತ ಕೈಯಿಂದ*** (ವ. 11): ಪೌಲನು ತನ್ನ ಪತ್ರಿಕೆಗಳನ್ನು ತಾನಾಗಿಯೇ ಬರೆಯಲಿಲ್ಲ. ಬದಲಾಗಿ ಆತನು ಒಬ್ಬ ಕಾರ್ಯದರ್ಶಿಯನ್ನು ಬಳಸಿಕೊಂಡನು (ಉದಾ: ರೋಮಾ. 16:22 ನ್ನು ನೋಡಿರಿ). ಬಹುಶಃ ಪತ್ರಿಕೆಯು ತನ್ನದೇ ಎಂಬುದನ್ನು ತೋರಿಸಲು (2 ಥೆಸಲೋನಿಕ 3:17 ರೊಂದಿಗೆ ಹೋಲಿಸಿ) ಆತನು ಕೆಲವೊಮ್ಮೆ ತನ್ನ ಸ್ವಂತ ಕೈಯಿಂದ ಬರೆದ ವಂದನೆಯನ್ನು ಸೇರಿಸುತ್ತಾನೆ (ಉದಾ: 1 ಕೊರಿಂಥ 16:2 ನ್ನು ನೋಡಿರಿ).

***ಒಂದು ಹೊಸ ಸೃಷ್ಟಿ*** (ವ. 15): ದೇವರು ಯೇಸುಕ್ರಿಸ್ತನ ಮೂಲಕ ನಮ್ಮನ್ನು ದುಷ್ಟಯುಗದೊಳಗಿಂದ ಬಿಡಿಸಿದ್ದಾನೆ (1:4). ದೀಕ್ಷಾಸ್ನಾನದ ಮೂಲಕ ನಾವು ಮರಣಕ್ಕೆ ಕ್ರಿಸ್ತನೊಂದಿಗೆ ಹೂಣಲ್ಪಟ್ಟಿದ್ದೇವೆ. ಇದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಸಹ ಹೊಸಬರಾಗಿ ನಡಕೊಳ್ಳಬೇಕು (ರೋಮಾ. 6:4). ಹಳೆಯ ದುಷ್ಟಲೋಕವು (ಕೆಟ್ಟ) ನಮ್ಮ ಪಾಲಿಗೆ ಶಿಲುಬೆಗೆ ಹಾಕಲ್ಪಟ್ಟಿದೆ ಮತ್ತು ನಾವು ಲೋಕದ ಪಾಲಿಗೆ ಶಿಲುಬೆಗೆ ಹಾಕಲ್ಪಟ್ಟಿದ್ದೇವೆ (ಗಲಾತ್ಯ 6:14). ನಾವು ದೇವರ ಹೊಸ ಸೃಷ್ಟಿಯಾಗಿದ್ದೇವೆ. ಸುನ್ನತಿ ಆಗದೇ ಇರುವ ಅನ್ಯರು ಮತ್ತು ಸುನ್ನತಿಯಾಗಿರುವ ಯೆಹೂದ್ಯರು, ದೇವರ ಇಸ್ರಾಯೇಲ್ಯರನ್ನು ಒಳಗೊಂಡ ಕ್ರಿಸ್ತನಲ್ಲಿ ನೂತನವಾಗಿ ಸೃಷ್ಟಿಸಲ್ಪಟ್ಟ ಜನರಾಗಿದ್ದೇವೆ (ವ. 16) ಮತ್ತು ಕೆಳಕಂಡ ನನ್ನ ಟಿಪ್ಪಣಿ.

ವ. 16 "ಕೈ" ಎಂಬ ಗ್ರೀಕ್ ಪದವು ಈ ವಚನದಲ್ಲಿ ಮೂರುಬಾರಿ ಕಂಡುಬರುತ್ತದೆ. ಈ ಪದದ ಅರ್ಥ "ಮತ್ತು" ಅಲ್ಲದೇ "ಅದು, ಅಂದರೆ" ಎಂದಾಗಿದೆ. ಈ ಎರಡು ಅರ್ಥಗಳು ಭಾಷಾಂತರಕಾರರಿಗೆ ಸಮಸ್ಯೆಯನ್ನುಂಟುಮಾಡುತ್ತವೆ. ಪೌಲನು ಒಂದು ಅಥವಾ ಎರಡು ಗುಂಪಿನ ಜನರಿಗೆ ಶಾಂತಿ ಮತ್ತು ಕರುಣೆಯನ್ನು ಹರಸುತ್ತಾನೆಯೋ? ಬೇರೊಂದು ಮಾತಿನಲ್ಲಿ ಹೇಳುವುದಾದರೆ "ದೇವರ ಇಸ್ರಾಯೇಲ್ಯರು". "ಈ ಸೂತ್ರಕ್ಕೆ ಸರಿಯಾಗಿ ನಡೆಯುವ ಜನ" ರಂತೆಯು ಅಥವಾ ಅವರು ಬೇರೆಯವರು? ಕನ್ನಡದ ಎರಡು ಭಾಷಾಂತರಗಳನ್ನು ಹೋಲಿಸಿರಿ: **ಸತ್ಯವೇದವು** ಒಂದು ಗುಂಪಿನ ಜನರನ್ನು ಒಳಗೊಂಡಿದ್ದರೆ **ಪವಿತ್ರಗ್ರಂಥವು** ಎರಡನ್ನು ಒಳಗೊಂಡಿದೆ. ಅಲ್ಲದೇ ಕೆಳಕಂಡ ಟಿಪ್ಪಣಿಗಳನ್ನು ಸಹ ನೋಡಿ.

***ದೇವರ ಇಸ್ರಾಯೇಲ್*** (ವ. 16): ಗಲಾತ್ಯ ಪತ್ರಿಕೆಯ ಹಿನ್ನಲೆಯಲ್ಲಿ ಈ ಹೇಳಿಕೆಯು ಯೆಹೂದ್ಯರು ಮತ್ತು ಅನ್ಯಜರನ್ನು ಒಳಗೊಂಡ ಕ್ರಿಸ್ತನಲ್ಲಿನ ವಿಶ್ವಾಸಿಗಳ ಅನ್ಯೋನ್ಯತೆಯಾಗಿರುವ ಸಭೆಯನ್ನು ಸೂಚಿಸುತ್ತವೆ. ಈ ಹಿಂದೆ ಪೌಲನು ವಿಶ್ವಾಸಿಗಳನ್ನು "ಅಬ್ರಹಾಮನ ಮಕ್ಕಳು" (3:7), "ಅಬ್ರಹಾಮನ" ಸಂತತಿವರು ವಾಗ್ದಾನಕ್ಕನುಸಾರವಾಗಿ ಬಾಧ್ಯರು (3:29) ಮತ್ತು "ಕ್ರಿಸ್ತ ಯೇಸುವಿನಲ್ಲಿಟ್ಟಿರುವ

ನಂಬಿಕೆಯ ಮೂಲಕ ದೇವರ ಪುತ್ರರು" (3:26) ಎಂಬುದಾಗಿ ಕರೆದಿದ್ದಾನೆ. ಅಲ್ಲದೇ ಎಫೆಸ. 2:11-13, ರೋಮಾ. 4:12 ನ್ನು ನೋಡಿರಿ.

***ನನ್ನ ದೇಹದಲ್ಲಿ ಯೇಸುವಿನ ಮುದ್ರೆಗಳು ಹಾಕಿರುತ್ತವಲ್ಲಾ*** (ವ. 17): ಬಹುಶಃ ಪೌಲನು ಸುವಾರ್ತೆಯನ್ನು ಸಾರುವ ಸೇವೆಯ ಅವಧಿಯಲ್ಲಿ ಚಿತ್ರಹಿಂಸೆ ಮತ್ತು ಹೊಡೆತಗಳಿಂದ ಹೊಂದಿದ ಗುರುತಗಳಾಗಿರಬಹುದು.

## ಪ್ರಶ್ನೆಗಳು

1. ಎರಡು ಸ್ವಾರ್ಥಮಯ ಉದ್ದೇಶಗಳಿಗಾಗಿ ಅನ್ಯಜನರಿಗೆ ಸುನ್ನತಿಯಾಗಬೇಕೆಂದು ಸಾರಿದ ಯೆಹೂದಿ ಮತದವರನ್ನು ಪೌಲನು ದೂರುತ್ತಾನೆ. ಅವರ ಉದ್ದೇಶಗಳೇನಾಗಿದ್ದವು?
2. ಅಸಂಜಸ (ಅಸ್ಥಿರ) ವಾಗಿರುವುದಕ್ಕಾಗಿ ಸಹ ಪೌಲನು ಯೆಹೂದಿ ಮತದವರನ್ನು ದೂರುತ್ತಾನೆ. ಯಾವ ರೀತಿಯಲ್ಲಿ ಅವರು ಅಸಂಜಸರಾಗಿದ್ದರು?
3. ಸುನ್ನತಿ ಮಾಡಿಸಿಕೊಳ್ಳಲು ಅನ್ಯರನ್ನು ತಾವು ಹೇಗೆ ಮನವೊಲಿಸಿದೆವೆಂಬುದರ ಕುರಿತು ಯೆಹೂದಿ ಮತದವರು ಹೆಚ್ಚಳಪಡುತ್ತಿದ್ದರು. ಪೌಲನು ಯಾವುದರ ಬಗ್ಗೆ ಹೆಚ್ಚಳಪಡುತ್ತಾನೆ?
4. ವಚನ 15 ರಲ್ಲಿ ಪೌಲನು ಎರಡು ಸಂಗತಿಗಳನ್ನು ತದ್ವಿರುದ್ಧವಾಗಿ ತೋರಿಸುತ್ತಾನೆ. ಅವು ಯಾವುವು? ಅವುಗಳನ್ನು ಆತನು ಹೇಗೆ ಮೌಲ್ಯಮಾಪನ ಮಾಡುತ್ತಾನೆ?
5. ಪೌಲನು ತನ್ನ ಪತ್ರಿಕೆಯನ್ನು ಹೇಗೆ ಕೊನೆಗೊಳಿಸುತ್ತಾನೆ?

## ಆಲೋಚಿಸಿರಿ ಮತ್ತು ಚರ್ಚಿಸಿರಿ

1. ವಚನ 15 ರಲ್ಲಿ ಪೌಲನು ಸುನ್ನತಿಯ ಕುರಿತು ಪ್ರಾಸಂಗಿಕನಾಗಿದ್ದಾನೆ: ಒಬ್ಬ ಮನುಷ್ಯನು ಸುನ್ನತಿ ಮಾಡಿಸಿಕೊಳ್ಳುವುದು ಅಥವಾ ಮಾಡಿಸಿಕೊಳ್ಳದೇ ಇರುವುದು ಆತನಿಗೆ ಮುಖ್ಯವಲ್ಲ, ಆದರೆ ಈ ಕಾಳಜಿಯ ಅಭಾವವು ಆತನ ಹಿಂದಿನ ಈ ಹೇಳಿಕೆಗೆ ವಿರುದ್ಧವಾಗಿರುವಂತೆ ತೋರುತ್ತದೆ, "ನೋಡಿರಿ, ಪೌಲನೆಂಬ ನಾನು ನಿಮಗೆ ಒಂದನ್ನು ಹೇಳುತ್ತೇನೆ – ನೀವು ಸುನ್ನತಿ ಮಾಡಿಸಿಕೊಂಡರೆ ಕ್ರಿಸ್ತನಿಂದ ನಿಮಗೆ ಏನೂ ಪ್ರಯೋಜನವಿಲ್ಲ" (5:2). ಈ ಸ್ಪಷ್ಟವಾದ ತದ್ವಿರುದ್ಧತೆಯನ್ನು ನೀವು ಹೇಗೆ ಬಗೆಹರಿಸುವಿರಿ?
2. ತನ್ನ ಜೀವಿತದ ಮೇಲೆ "ನಮ್ಮ ಕರ್ತನಾದ ಯೇಸುಕ್ರಿಸ್ತನ ಶಿಲುಬೆಯ" ಪರಿಣಾಮದ ಕುರಿತ ಪೌಲನ ತಿಳುವಳಿಕೆಯನ್ನು ವಿವರಿಸಿರಿ (ವ. 14).
3. ಕೆಳಕಂಡ ಹೇಳಿಕೆಗಳನ್ನು ನಿಮ್ಮದೇ ಮಾತಿನಲ್ಲಿ ವಿವರಿಸಿರಿ:

   ಅ. "ಒಂದು ಹೊಸ ಸೃಷ್ಟಿ" (ವ. 15)

   ಆ. "ದೇವರ ಇಸ್ರಾಯೇಲ್" (ವ. 16)

4. ವಚನ 16 ರಲ್ಲಿ "ಈ ಸೂತ್ರಕ್ಕೆ ಸರಿಯಾಗಿ ನಡೆಯಿರಿ" ಎಂದು ಪೌಲನು ಬರೆಯುವಾಗ ಆತನು ಯಾವ ಸೂತ್ರ/ ನಿಯಮವನ್ನು ಸೂಚಿಸುತ್ತಿರುವನೆಂಬುದಾಗಿ ನೀವು ಯೋಚಿಸುವಿರಿ?

5. ಗಲಾತ್ಯ ಪತ್ರಿಕೆಯಲ್ಲಿನ ಸಮಗ್ರ ಸಂದೇಶಕ್ಕೆ ಪೌಲನ ಸಂಕ್ಷಿಪ್ತವಾದ ಕೊನೇ/ ಮುಕ್ತಾಯದ ಆಶೀರ್ವಾದವು ಹೇಗೆ ಹೊಂದಿಕೆಯಾಗುತ್ತದೆಂಬುದನ್ನು ವಿವರಿಸಿರಿ.

# ಅಧ್ಯಯನ 16: ಗಲಾತ್ಯ ಪತ್ರಿಕೆಯಿಂದ ನಮಗೆ  ಸಂದೇಶ

## ಪೌಲನು ಗಲಾತ್ಯದ ಸಭೆಗಳಿಗೆ ಬರೆದ ಪತ್ರಿಕೆಯು ಇಂದು ನಮಗೂ ಸಂಬಂಧಿಸುತ್ತದೆ !

**ಗಲಾತ್ಯ ಪತ್ರಿಕೆಯ ಪೀಠಿಕೆಯಲ್ಲಿ** (ಪುಸ್ತಕದ ಮೊದಲ ಅಧ್ಯಾಯ) ನೇರವಾಗಿ ನಮಗೆ ಬರೆಯಲ್ಪಡದೆ, ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಅಸ್ಯಸೀಮೆಯ ಗಲಾತ್ಯದಲ್ಲಿರುವ ಸಭೆಗಳಿಗೆ ಬರೆಯಲ್ಪಟ್ಟರೂ ಸಹ ಇಂದಿನ ಕ್ರಿಸ್ತನಲ್ಲಿರುವ ವಿಶ್ವಾಸಿಗಳಿಗೆ ಮತ್ತು ಸಭೆಗಳಿಗೆ ಸಂಬಂಧಿಸುತ್ತದೆಂಬುದಾಗಿ ನಾವು ನೋಡಿದ್ದೇವೆ.

ಗಲಾತ್ಯ ಸಭೆಗಳಲ್ಲಿನ ಪರಿಸ್ಥಿತಿಯೊಂದಿಗೆ ವ್ಯವಹರಿಸುವಾಗ ಪೌಲನು ಯಾವಾಗಲು ಮತ್ತು ಎಲ್ಲಡೆಯಿರುವ ಸಭೆಗೆ ಅನ್ವಯವಾಗುವಂತಹ ಕೆಲವು ಪ್ರಮುಖ ಬೋಧನೆಗಳನ್ನು ಸ್ಪಷ್ಟಪಡಿಸುವುದು ಗಲಾತ್ಯ ಪತ್ರಿಕೆಯ ಪ್ರಸ್ತುತತೆಯ ಮುಂದುವರಿಕೆಗೆ ಕಾರಣವಾಗಿದೆ ಎಂಬುದನ್ನು ಸಹ ನಾವು ನೋಡಿದೆವು. ಈ ಬೋಧನೆಗಳು ಸುವಾರ್ತೆಯ ಸಂದೇಶಕ್ಕೆ, ನಿಜವಾದ ಸುವಾರ್ತೆ (ನೀತಿನಿರ್ಣಯ, ನೀತಿವಂತಿಕೆ ಮತ್ತು ರಕ್ಷಣೆಯ ಕುರಿತ) ಮತ್ತು ಸುವಾರ್ತೆಯನ್ನು ಕೇಳಿದವರ ದೈನಂದಿನ ಜೀವಿತದಲ್ಲಿ, ಕ್ರಿಸ್ತನ ನಿಯಮವನ್ನು ನೆರವೇರಿಸಲು ನಮ್ಮನ್ನು ಶಕ್ತರನ್ನಾಗಿಸುವ ಪವಿತ್ರಾತ್ಮನ ಕಾರ್ಯಕ್ಕೆ ಸಂಬಂಧಿಸಿವೆ ("ದೇವರನ್ನು ಪ್ರೀತಿಸಿರಿ ಮತ್ತು ನಿಮ್ಮಂತೆಯೇ ನಿಮ್ಮ ನೆರೆಯವರನ್ನೂ ಪ್ರೀತಿಸಿರಿ").

ಅನಂತರ **ಅಧ್ಯಯನ 3 ರ ಪೀಠಿಕೆಯಲ್ಲಿ** ತನ್ನ ಮೂರು ಮುಖ್ಯ ವಿಷಯಗಳನ್ನು ಸೂಚಿಸುವ ಹೇಳಿಕೆಗಳನ್ನು ಪೌಲನು ತನ್ನ ಪ್ರಾರಂಭಿಕ ವಂದನೆಯಲ್ಲಿ (1:15) ಉಪಯೋಗಿಸುವುದನ್ನು ನಾವು ಗಮನಿಸಿದ್ದೇವೆ:

- ಒಬ್ಬ ಅಪೊಸ್ತಲನಾಗಿ ತನ್ನ ಅಧಿಕಾರದ ಕುರಿತ ಪೌಲನ ಹೇಳಿಕೆಗಳು
- ಪೌಲನ ಸುವಾರ್ತೆ/ ಪೌಲನು ಸಾರುವ ಸುವಾರ್ತೆ
- ಇಂದಿನ ಈ ದುಷ್ಟಯುಗದಲ್ಲಿ ಕ್ರಿಸ್ತನಲ್ಲಿನ ವಿಶ್ವಾಸಿಗಳಾಗಿ ಹೇಗೆ ಜೀವಿಸಬೇಕೆಂಬುದರ ಕುರಿತ ಪೌಲನ ಬೋಧನೆ.

ಹೀಗೆ ಈ ಮೂರು ವಿಷಯಗಳ ಕಡೆಗೆ ಹಿಂತಿರುಗುವುದರ ಮತ್ತು ಇಂದು ನಮಗಾಗಿ ಪೌಲನ ಸಂದೇಶವನ್ನು ಪರಾಮರ್ಶಿಸುವುದರ ಮೂಲಕ ಗಲಾತ್ಯದವರ ನಮ್ಮ ಅಧ್ಯಯನವನ್ನು ಮುಕ್ತಾಯಗೊಳಿಸುತ್ತೇವೆ. ಈ ತಲೆಬರಹ/ ಶೀರ್ಷಿಕೆಗಳನ್ನು ನಾವು ಆರಿಸಿಕೊಂಡಿದ್ದೇವೆ.

- ಸುವಾರ್ತೆಯ ಮೂಲ/ ಉಗಮ
- ನಿಜವಾದ ಸುವಾರ್ತೆ
- ಪವಿತ್ರಾತ್ಮನು ಕಾರ್ಯಮಾಡುತ್ತಿರುವುದು

## ಸುವಾರ್ತೆಯ ಮೂಲ

### ಪೌಲನ ಸುವಾರ್ತೆಯ ಮೂಲ ಮತ್ತು ಆತನ ಅಧಿಕಾರ

ಸ್ವತಃ ಕ್ರಿಸ್ತನೇ ತನ್ನನ್ನು "ಕ್ರಿಸ್ತನ ಸುವಾರ್ತೆ" ಸಾರುವ ಜವಾಬ್ಧಾರಿಯೊಂದಿಗೆ ಅಪೊಸ್ತಲನನ್ನಾಗಿ ನೇಮಿಸಿದ್ದಾನೆಂಬ ಹೇಳಿಕೆಯೊಂದಿಗೆ ಪೌಲನು ತನ್ನ ಪತ್ರಿಕೆಯನ್ನು ಪ್ರಾರಂಭಿಸುತ್ತಾನೆ. ಅನಂತರ ಪೌಲನು "ತಾನು ಸಾರುವ ಸುವಾರ್ತೆ/ ತನ್ನ ಸುವಾರ್ತೆಯನ್ನು" ಸಭೆಯ ಸ್ತಂಭಗಳಾಗಿರುವ ಮತ್ತು ರೋಮನ್ ಪ್ರಾಂತ್ಯವಾಗಿರುವ ಯೂದಾಯದಲ್ಲಿ ತನ್ನ ಸೇವಾ ಕಾಲಾವಧಿಯಲ್ಲಿ ಯೇಸುಕ್ರಿಸ್ತನೊಂದಿಗೆ ವೈಯಕ್ತಿಕವಾದ ಅನುಭವ ಹೊಂದಿರುವ ಯೆರೂಸಲೇಮಿನಲ್ಲಿರುವ ಅಪೊಸ್ತಲರಿಂದ ಹೊಂದಿಕೊಳ್ಳಲಿಲ್ಲ.

ಪೌಲನು ಸಾರಿದ ಸುವಾರ್ತೆಯನ್ನು ಗಲಾತ್ಯದವರು ಸ್ವಾಗತಿಸಿದರು ಮತ್ತು ವಿಗ್ರಹಾರಾಧನೆಯನ್ನು ಬಿಟ್ಟು ಕ್ರೈಸ್ತೀಯ ನಂಬಿಕೆಗೆ ತಿರುಗಿಕೊಂಡರು. ಆದರೆ ಕ್ರಮೇಣ ಅವರು ತಮ್ಮನ್ನು ಯೆರೂಸಲೇಮಿನಲ್ಲಿನ ನಿಜವಾದ ಅಪೊಸ್ತಲರೆಂದು ಹೇಳಿಕೊಂಡ ಮತ್ತು ತಾವು ಸಾರುವ ಸುವಾರ್ತೆಯನ್ನು "ನಿಜವಾದ ಸುವಾರ್ತೆ" ಎಂದು ಕರೆದ ಯೆಹೂದಿ ಮತದವರಿಂದ ಗೊಂದಲಕ್ಕೊಳಗಾದರು. ತಮ್ಮ "ಸುವಾರ್ತೆಯು" ಯೆರೂಸಲೇಮಿನಲ್ಲಿನ ಅಪೊಸ್ತಲರಿಂದ ಅನುಮೋದನೆ ಹೊಂದಿರುವ ಕಾರಣ ಪೌಲನಿಗಿಂತ ಹೆಚ್ಚಿನ ಅಧಿಕಾರ ತಮಗಿದೆಯೆಂಬುದಾಗಿ ಯೆಹೂದಿ ಮತದವರು ಹೇಳಿಕೊಂಡರು.

ಹೀಗಾಗಿ ಸುವಾರ್ತಾ ಸಂದೇಶದ ಮೂಲವು (ದೇವರಿಂದ ಅಥವಾ ಅಪೊಸ್ತಲರಿಂದ) ಸುವಾರ್ತೆ ಸಾರುವವನಿಗೆ ಅಧಿಕಾರವನ್ನು ಕೊಟ್ಟಿತು (ಅಪೊಸ್ತಲ ಪೌಲ ಅಥವಾ ಯೆರೂಸಲೇಮಿನಲ್ಲಿದ್ದ ಅಪೊಸ್ತಲರ ಕಡೆಯಿಂದ ಬಂದ ಯೆಹೂದಿ ಮತದವರು).

## "ನಮ್ಮ ಸುವಾರ್ತೆ" ಮತ್ತು ನಮ್ಮ "ಅಧಿಕಾರದ" ಮೂಲ

ನಮ್ಮ ಕುರಿತೇನು? ನಾವು ಯಾರ ಮತ್ತು ಯಾವ "ಸುವಾರ್ತೆ" ಯನ್ನು ನಂಬುತ್ತೇವೆ ಮತ್ತು ಸಾರುತ್ತೇವೆ? "ನಮ್ಮ ಸುವಾರ್ತೆಯು" ದೇವರಿಂದ ಬಂದದ್ದೋ ಅಥವಾ ಅಪೊಸ್ತಲರಿಂದ ಬಂದದ್ದೋ ಮತ್ತು ಹೇಗೆ? ನಿಜವಾದ ಸುವಾರ್ತೆಯನ್ನು ನಾವು ಎಲ್ಲಿ ಕಾಣಬಹುದು? ನಾವು ಕಾಣುವುದೇ ನಿಜವಾದ ಸುವಾರ್ತೆಯೆಂಬುದಾಗಿ ನಾವು ಹೇಗೆ ತಿಳಿಯಬಹುದು? ಸುವಾರ್ತೆ ಸಾರಲು ಬೇಕಾದ ನಮ್ಮ ಅಧಿಕಾರವು ಎಲ್ಲಿಂದ ಬರುತ್ತದೆ?

ಇಂದು ದೇವಜನರಾಗಿ ಮತ್ತು ದೇವರ ವಾಕ್ಯದ ಬೋಧಕರೂ ಮತ್ತು ಉಪದೇಶಕರೂ ಆಗಿರುವ ನಾವು ಈ ರೀತಿಯ ಪ್ರಶ್ನೆಗಳನ್ನು ಎದುರಿಸಬೇಕು. ಇಲ್ಲಿ ಈ ಪಠ್ಯಪುಸ್ತಕದ ಹಿನ್ನಲೆಯಲ್ಲಿ ನಮ್ಮನ್ನು ನಾವು ಮಿತಿಗೊಳಿಸಿಕೊಂಡು ವಿಷಯದ ಕೆಲವೇ ಅಂಶಗಳನ್ನು ಮಾತ್ರ ನೋಡಲಿದ್ದೇವೆ.

1. ಸ್ವತಃ ಯೇಸುಕ್ರಿಸ್ತನಿಂದಲೇ ಆದೇಶ ಹೊಂದಿದ ಮತ್ತು ದೈವೀಕ ಮೂಲವುಳ್ಳ ಸುವಾರ್ತೆಯನ್ನು ಹೊಂದಿರುವ ಪೌಲನೊಂದಿಗೆ ನಮ್ಮನ್ನು ಹೋಲಿಸಿಕೊಳ್ಳಲಾಗದು. ಯೇಸುಕ್ರಿಸ್ತನ ನಿಜವಾದ ಸುವಾರ್ತೆಯು ಹೊಸ ಒಡಂಬಡಿಕೆಯ ಪುಸ್ತಕಗಳಲ್ಲಿ ರೂಪಿಸಲ್ಪಟ್ಟು, ವಿವರಿಸಲ್ಪಟ್ಟು ಮತ್ತು ದಾಖಲಿಸಲ್ಪಟ್ಟ ಸಮಯದಲ್ಲಿ/ ಕಾಲದಲ್ಲಿ ಆತನು ಜೀವಿಸಿದನು. ಪೌಲ ಮತ್ತು ಈ ಪುಸ್ತಕದ ಉಳಿದ ಗ್ರಂಥಕರ್ತರನ್ನು ಪವಿತ್ರಾತ್ಮನು ಪ್ರೇರೇಪಿಸಿದನು. ಕ್ರಿಸ್ತನಲ್ಲಿನ ವಿಶ್ವಾಸಿಗಳ ಮುಂದಿನ ಪೀಳಿಗೆಗಳಿಗಾಗಿ ದೈವೀಕ ಅಧಿಕಾರವನ್ನು ಕೊಂಡೊಯ್ಯುವ/ ಹೊಂದಿರುವ ವಾಕ್ಯ/ ಗ್ರಂಥಗಳ ಒಂದು ದೇಹ, ಒಂದು ಕಟ್ಟಳೆಯನ್ನಾಗಿ ಈ ಪುಸ್ತಕಗಳನ್ನು ಸಂಗ್ರಹಿಸಿದ ಆದಿಸಭೆಯನ್ನು ಪವಿತ್ರಾತ್ಮನು ಮಾರ್ಗದರ್ಶಿಸಿದನು. ಹೊಸ ಒಡಂಬಡಿಕೆಯಲ್ಲಿ ಕಂಡುಬರುವಂತೆ ಕ್ರಿಸ್ತನು ತನ್ನ ಅಪೊಸ್ತಲರಿಗೆ ಪ್ರಕಟಪಡಿಸಿದ/ ತಿಳಿಸಿದ ಸುವಾರ್ತೆಯೊಂದೇ ದೈವೀಕವಾದದ್ದು, ಅಪೊಸ್ತಲರದು ಮತ್ತು ಸರಿಯಾದದ್ದಾಗಿದೆ.
2. ಪರಿಣಾಮವಾಗಿ, "ನಮ್ಮ ಸುವಾರ್ತೆಯ" ಮೂಲವು, ಹೊಸ ಒಡಂಬಡಿಕೆಯ ಪುಸ್ತಕಗಳಲ್ಲಿನ ದೇವರ ವಾಕ್ಯದಲ್ಲಿ ಕಂಡುಬರುತ್ತದೆ. ಅವು ಕ್ರಿಸ್ತನ ಕಾರ್ಯಗಳನ್ನು ದಾಖಲಿಸುತ್ತವೆ ಮತ್ತು ವಿವರಿಸುತ್ತವೆ (ಮತ್ತಾಯ, ಮಾರ್ಕ, ಲೂಕ ಮತ್ತು ಯೋಹಾನನ ಸುವಾರ್ತೆಗಳು). ಅವು ಯೇಸುವಿನ ಸುವಾರ್ತೆಯನ್ನು ವಿವರಿಸುತ್ತವೆ (ಸುವಾರ್ತೆಗಳು, ಪತ್ರಿಕೆಗಳು). ಅವು ಆದಿಸಭೆಯ

ಮೂಲಕ ಯೇಸುಕ್ರಿಸ್ತನ ಸುವಾರ್ತೆಯು ತೋರ್ಪಡಿಸಲ್ಪಟ್ಟಿದ್ದನ್ನು ಮತ್ತು ವ್ಯಕ್ತಪಡಿಸಿದ್ದನ್ನು ವಿವರಿಸುತ್ತವೆ (ಅಪೊಸ್ತಲರ ಕೃತ್ಯಗಳು ಮತ್ತು ಪತ್ರಿಕೆಗಳು).

3. ಹೀಗಾಗಿ ನಾವು ಯೇಸುಕ್ರಿಸ್ತನ ಸುವಾರ್ತೆಯನ್ನು ಮತ್ತು ಆತನ ರಾಜ್ಯವನ್ನು ಇನ್ನೂ ಚೆನ್ನಾಗಿ/ ಉತ್ತಮವಾಗಿ ತಿಳಿದುಕೊಳ್ಳಲು ನಮಗೆ ಸಹಾಯಕವಾಗುವಂತೆ ಗಲಾತ್ಯ ಪತ್ರಿಕೆಯನ್ನುಪಯೋಗಿಸಬಹುದು. ಸುವಾರ್ತೆಯನ್ನು ನಾವು ಉತ್ತಮವಾಗಿ ತಿಳಿದುಕೊಳ್ಳುವಾಗ "ಸತ್ಯವನ್ನು" ಸಾರಲು ಮತ್ತು ಬೋಧಿಸಲು ನಮ್ಮ ಸಭೆಗಳಿಗೆ ಭೇಟಿಕೊಡುವ/ ಬರುವ ಪ್ರಸಂಗಿಕರನ್ನು ("ಅಪೊಸ್ತಲರು" ಮತ್ತು "ದೇವರ ದೊಡ್ಡ ಸೇವಕರು" ಎಂದು ಕರೆಯಲ್ಪಡುವವರನ್ನು ಒಳಗೊಂಡು) ಮೌಲ್ಯಮಾಪನ ಮಾಡಲು ನಾವು ಉತ್ತಮವಾಗಿ ಸಿದ್ಧಗೊಳ್ಳುತ್ತೇವೆ.

4. ಹೆಚ್ಚುವರಿಯಾಗಿ ಯೇಸುಕ್ರಿಸ್ತನ ಮತ್ತು ಆತನ ರಾಜ್ಯದ ಕುರಿತ ಸುವಾರ್ತೆಯನ್ನು ಸಾರುವ ನಮ್ಮ "ಅಧಿಕಾರವು" ಸಹ ಪ್ರಾಥಮಿಕವಾಗಿ ಹೊಸ ಒಡಂಬಡಿಕೆಯಲ್ಲಿ ದಾಖಲಿಸಲ್ಪಟ್ಟಂತೆ ದೇವರ ವಾಕ್ಯದ ಮೇಲೆ ಆಧಾರಿತವಾಗಿದೆ. ಇದು ನಾವು ಹೋದ/ ಕಲಿತ ಸತ್ಯವೇದ ಕಾಲೇಜಿನಿಂದ ಅಥವಾ ಪ್ರಸಿದ್ಧ ಸತ್ಯವೇದ ಶಿಕ್ಷಕನಿಂದ ಅಥವಾ "ದೀಕ್ಷೆ"ಯಿಂದಾದಗಲೀ ಬಂದಿಲ್ಲ. ಮಹಾ ಆದೇಶವು (ಮತ್ತಾಯ 28:18-20) ಕೇವಲ ಯೇಸುವಿನ ಉಳಿದ ಹನ್ನೊಂದು ಶಿಷ್ಯರಿಗಷ್ಟೇ ಸೀಮಿತವಾಗಿರಲಿಲ್ಲ. ಅಪೊಸ್ತಲರ ಕೃತ್ಯ ಪುಸ್ತಕ ಮತ್ತು ಹೊಸ ಒಡಂಬಡಿಕೆಯ ಪತ್ರಿಕೆಗಳನ್ನು ನಾವು ಅಭ್ಯಾಸಿಸುವಾಗ ಇದು ಸ್ಪಷ್ಟವಾಗುತ್ತದೆ. ಸುವಾರ್ತೆಯನ್ನು ಭೂಮಿಯ ಕಟ್ಟಕಡೆಯವರೆಗೂ ಕೊಂಡೊಯ್ಯುವುದಕ್ಕಾಗಿ ಅಪೊಸ್ತಲರ ಕೃತ್ಯ 1:8 ರಲ್ಲಿನ ಯೇಸುವಿನ ಪವಿತ್ರಾತ್ಮನಿಂದ ಬಲಪಡಿಸುವೆನೆಂಬ ವಾಗ್ದಾನವು ಶಿಷ್ಯರಿಗೆ ಸ್ವರ್ಗಾರೋಹಣದ ದಿನ ಕೊಡಲ್ಪಟ್ಟಿದೆ. ಆದರೆ ಈ ವಾಗ್ದಾನವು ಸುವಾರ್ತೆಯಲ್ಲಿ ಶಿಷ್ಯರನ್ನು ಯಶಸ್ವಿಯಾಗಿಸುವ/ ಉತ್ತರಾಧಿಕಾಗಳಾಗಿಸುವ ಎಲ್ಲಾ ದೇವಜನರಿಗೂ ವಿಸ್ತರಿಸಲ್ಪಟ್ಟಿದೆ ಎಂಬುದನ್ನು ಅಪೊಸ್ತಲರ ಕೃತ್ಯ ಮತ್ತು ಹೊಸ ಒಡಂಬಡಿಕೆಯ ಪತ್ರಿಕೆಗಳು ತೋರಿಸುತ್ತವೆ.

## ಪರಾಮರ್ಶೆ ಮತ್ತು ಚರ್ಚೆಗಾಗಿ (ನನ್ನದೇ ಉತ್ತರಗಳನ್ನು ನಾನು ಕೊಟ್ಟಿಲ್ಲ)

1. ಮೇಲ್ಕಂಡ ನಾಲ್ಕು ಅಂಶಗಳನ್ನು ಪುನಃ ನೋಡಿರಿ. ನಿಮ್ಮದೇ ಪದಗಳಲ್ಲಿ ಅವುಗಳನ್ನು ವಿವರಿಸಿರಿ.

2. "ಹೊಸ ಒಡಂಬಡಿಕೆಯಲ್ಲಿ ಕಂಡುಬರುವಂತೆ ಕೇವಲ ಕ್ರಿಸ್ತನು ತನ್ನ ಅಪೊಸ್ತಲರಿಗೆ ತಿಳಿಸಿದ/ ಪ್ರಕಟಿಸಿದ ಸುವಾರ್ತೆ ಮಾತ್ರ ದೈವೀಕ (ದೇವರಿಂದ ಬಂದದ್ದು), ಅಪೊಸ್ತಲೀಯ ಮತ್ತು ಸರಿಯಾದದ್ದು" (ಅಂಶ 1) ಎಂಬ ನನ್ನ ಹೇಳಿಕೆಯನ್ನು ನೀವು ಒಪ್ಪುತ್ತೀರಾ? ಯಾಕೆ – ಯಾಕೆ ಇಲ್ಲ?

3. ಕ್ರಿಸ್ತನ ಸುವಾರ್ತೆಯನ್ನು ಉತ್ತಮವಾಗಿ ತಿಳಿದು/ ಅರ್ಥೈಸಿಕೊಳ್ಳಲು (ಅಂಶ 3 ನೋಡಿ) ಕೋರ್ಸಿನಲ್ಲಿನ ಗಲಾತ್ಯ ಪತ್ರಿಕೆಯ ಅಧ್ಯಯನವು ನಿಮಗೆ ಹೇಗೆ ಸಹಾಯಕವಾಯಿತು? ವಿವರಿಸಿರಿ.

4. ಸುವಾರ್ತೆಯನ್ನು ಸಾರುವುದಕ್ಕೆ ಎಲ್ಲಾ ದೇವಜನರಿಗೂ ಸಹ ಯೇಸುವು ಆದೇಶವನ್ನೂ ಅಧಿಕಾರವನ್ನೂ ಕೊಟ್ಟಿದ್ದಾನೆಂದು ಅಂಶ 4 ರಲ್ಲಿನ ನನ್ನ ಹೇಳಿಕೆಯನ್ನು ನೀವು ಒಪ್ಪುವಿರೋ? ಯಾಕೆ? ಯಾಕಿಲ್ಲ?

5. ನಮ್ಮ ಸಭೆಗಳಲ್ಲಿ ನಾವು ಸಾಮಾನ್ಯವಾಗಿ ಹೊರಗಿನಿಂದ ಬಂದ ಪ್ರಸಂಗಿಕರೊಂದಿಗೆ ವಿಶೇಷ ಕೂಟಗಳನ್ನು ಏರ್ಪಡಿಸುತ್ತೇವೆ. ಅವರ ಸಂದೇಶವು "ದೈವೀಕ/ ದೇವರದ್ದು ಮತ್ತು ಅಪೊಸ್ತಲರದ್ದು" ಎಂಬುದಾಗಿ ನಾವು ತಿಳಿಯುವುದು ಹೇಗೆ? ನಮ್ಮಲ್ಲಿ ಅನೇಕರು ಕ್ರೈಸ್ತ ದೂರದರ್ಶನ ಚಾನಲ್ ಗಳನ್ನು ನೋಡುತ್ತೇವೆ ಮತ್ತು ಎಲ್ಲಾ ರೀತಿಯ ಸ್ಥಳಗಳಿಂದ ಧ್ವನಿಮುದ್ರಿಸಲ್ಪಟ್ಟ

ಸತ್ಯವೇದ ಅಧ್ಯಯನಗಳನ್ನು ಕೇಳುತ್ತೇವೆ. ನಾವು ನೋಡುವ ಅಥವಾ ಕೇಳುತ್ತಿರುವ ಸಂದೇಶವು ಸರಿಯೋ ಅಥವಾ ತಪ್ಪೋ/ ಸುಳ್ಳೋ ಎಂಬುದನ್ನು ನಾವು ತಿಳಿಯುವುದು ಹೇಗೆ?

## ನಿಜವಾದ ಸುವಾರ್ತೆ

### ಗಲಾತ್ಯದಲ್ಲಿನ ಜಗಳ/ ಸಂಘರ್ಷ

ಗಲಾತ್ಯದವರಿಗೆ ಯೆಹೂದಿ ಮತದವರು ಸಾರಿದ/ ಬೋಧಿಸಿದ ಸಂದೇಶವು ಇಂದು ನಮಗೆ ಸಂಬಂಧಿಸುವುದಿಲ್ಲವೆಂಬುದಾಗಿ ಕೆಲ ಜನರು ಹೇಳುತ್ತಾರೆ. ಸುನ್ನತಿಯು ನಮಗೇನು ಸಮಸ್ಯೆಯಲ್ಲ ಎಂಬುದೇ ಅವರು ಹೇಳುವ ಕಾರಣವಾಗಿದೆ. ಅಲ್ಲದೇ ಅವರು ಹಳೇ ಒಡಂಬಡಿಕೆಯ ಎಲ್ಲಾ ಆಜ್ಞೆಗಳನ್ನು ತಮ್ಮ ಸದಸ್ಯರುಗಳು ಕೈಕೊಂಡು ನಡೆಯುವುದು ಯಾವ ಸಭೆಗೂ ಅವಶ್ಯಕವಿಲ್ಲವೆಂಬುದಾಗಿ ಸಹ ಅವರು ಹೇಳುತ್ತಾರೆ.

ಆದರೆ ಹಾಗೆ ಹೇಳುವವರು ಪೌಲ ಮತ್ತು ಯೆಹೂದಿ ಮತದವರ ನಡುವಿನ ಸಂಘರ್ಷವು/ ಜಗಳವು ಪ್ರಾಥಮಿಕವಾಗಿ ಸುನ್ನತಿ ಮತ್ತು ಹಳೇ ಒಡಂಬಡಿಕೆಯ ನೇಮಗಳನ್ನು ಕೈಕೊಂಡು ನಡೆಯುವುದಲ್ಲವೆಂಬುದನ್ನು ಅರ್ಥೈಸಿಕೊಂಡಿಲ್ಲ. ಗಲಾತ್ಯದಲ್ಲಿ ಪ್ರಭಲವಾಗಿರುವ ವಿಚಾರ/ ಸಮಸ್ಯೆಯು ಪ್ರಾಥಮಿಕವಾಗಿ ಆದಿಸಭೆಯಲ್ಲಿನ ನಂಬಿಕೆ ಮತ್ತು ಜೀವನದ ಎರಡು ಕ್ಷೇತ್ರಗಳ ಕುರಿತಾಗಿದೆ.

ಅ. ನೀತಿವಂತರೆಂಬ ನಿರ್ಣಯ ("ನಾವು ಹೇಗೆ ನೀತಿವಂತರೆಂದು ನಿರ್ಣಯಿಸಲ್ಪಡುವೆವು?"), ರಕ್ಷಣೆ ("ನಾವು ಹೇಗೆ ರಕ್ಷಿಸಲ್ಪಡಬಹುದು?", "ನಾವು ದೇವರಾತ್ಮನನ್ನು ಹೇಗೆ ಹೊಂದಿಕೊಳ್ಳುತ್ತೇವೆ?", "ದೇವರ ರಾಜ್ಯಕ್ಕೆ ನಾವು ಹೇಗೆ ಬಾಧ್ಯರಾಗುತ್ತೇವೆ?", "ನಾವು ಹೇಗೆ ದೇವರ ಮಕ್ಕಳು/ ಪುತ್ರರಾಗುತ್ತೇವೆ?", ನಾವು ಹೇಗೆ ಆತ್ಮೀಕವಾಗಿ ಬದುಕುವವರಾಗಿದ್ದೇವೆ?", "ನಿತ್ಯಜೀವವನ್ನು ನಾವು ಹೇಗೆ ಕೊಯ್ಯುತ್ತೇವೆ?") ಮತ್ತು ಪರಿಶುದ್ಧತೆ ("ಈ ದುಷ್ಟ/ ಕೆಟ್ಟ ಲೋಕದಲ್ಲಿ ದೇವರ ಪರಿಶುದ್ಧ ಜನರಾಗಿ ನಾವು ಬದುಕುವುದು ಹೇಗೆ?") ಎಂಬುದರ ಕುರಿತ ಪ್ರಶ್ನೆಗಳು.

ಆ. ದೇವಜನರ ಗುರುತಿನ ಕುರಿತ ಪ್ರಶ್ನೆಗಳು: "ಅನ್ಯಹಿನ್ನಲೆಯ ವಿಶ್ವಾಸಿಗಳು ದೇವಜನರ ಭಾಗವಾಗುವುದು ಹೇಗೆ?", "ಕ್ರಿಸ್ತನೆಡೆಗೆ ಬಂದ ಅನ್ಯವಿಶ್ವಾಸಿಗಳು ದೇವರು ಸಿನಾಯಿ ಬೆಟ್ಟದಲ್ಲಿ ತನ್ನ ಜನರೊಂದಿಗೆ ಮಾಡಿಕೊಂಡ ಒಡಂಬಡಿಕೆಗೆ ಸೇರಿದವರಾಗಿದ್ದಾರೆ ಎಂಬುದನ್ನು ನಾವು ತಿಳಿದುಕೊಳ್ಳುವುದು ಹೇಗೆ?".

## ಯೆಹೂದಿ ಮತದವರ ಸುಳ್ಳು ಸುವಾರ್ತೆ

ನಮ್ಮ ನೀತಿಕರಣ, ನಮ್ಮ ನೀತಿವಂತಿಕೆ ಮತ್ತು ನಮ್ಮ ಪರಿಶುದ್ಧತೆಗಾಗಿ ಯೆಹೂದಿ ಧರ್ಮಶಾಸ್ತ್ರ (ನೇಮ, ನಿಷ್ಠೆ) ವನ್ನು ಕೈಕೊಂಡು ನಡೆಯುವುದು (ಸುನ್ನತಿಯೊಂದಿಗೆ) ಅವಶ್ಯಕತೆಯಾಗಿದೆ ಎಂಬುದಾಗಿ ಯೆಹೂದಿ ಮತದವರು ಸಾರಿದರು. ಅವರು ಯೇಸುಕ್ರಿಸ್ತನಲ್ಲಿ ನಂಬಿಕೆಯಿಟ್ಟಿದ್ದರು. ಆದರೆ ನಾವು ನೀತಿವಂತರೆಂದು ನಿರ್ಣಯ ಹೊಂದಲು/ ರಕ್ಷಣೆ ಹೊಂದಲು ಯೇಸುಕ್ರಿಸ್ತನ ನಂಬಿಕೆ ಮಾತ್ರ ಸಾಲದೆಂಬುದಾಗಿ ಹೇಳುತ್ತಿದ್ದರು. ನಾವೂ ಸಹ ಸುನ್ನತಿಯನ್ನು ಮಾಡಿಸಿಕೊಂಡು ಹಳೆಯ ಒಡಂಬಂಡಿಕೆಯ ನೇಮ ನಿಷ್ಠೆಗಳನ್ನು ಪಾಲಿಸಬೇಕಾಗಿದೆ ಎಂಬುದಾಗಿ ಅವರು ಹೇಳಿದರು. ಹೀಗಾಗಿ ಯೆಹೂದಿ ಮತದವರ ಸುಳ್ಳು ಸುವಾರ್ತೆಯನ್ನು "ನಂಬಿಕೆ ಮತ್ತು ಧರ್ಮಶಾಸ್ತ್ರ" ಅಥವಾ "ಕೆಲಸ ಅಥವಾ ಕಾರ್ಯಗಳ ಒಂದು ಸುವಾರ್ತೆ" ಎಂಬುದಾಗಿ ವರ್ಣಿಸಬಹುದು. ಯಾಕೆಂದರೆ ನಮ್ಮ ನೀತಿನಿರ್ಣಯ/ ರಕ್ಷಣೆಗಾಗಿ ನಮ್ಮ ಸ್ವಂತ ಮಾನುಷಿಕ ಪ್ರಯತ್ನಗಳು ಅವಶ್ಯಕವಾಗಿವೆ.

ಹೆಚ್ಚುವರಿಯಾಗಿ ಈ ದುಷ್ಟಲೋಕದಲ್ಲಿ ಒಂದು ಭಯಭಕ್ತಿಯುಳ್ಳ ಜೀವಿತಕ್ಕಾಗಿ ಹಳೆಯ ಒಡಂಬಂಡಿಕೆಯ ನೇಮನಿಷ್ಠೆಗಳನ್ನು ಪಾಲಿಸುವುದರ ಅವಶ್ಯಕತೆಯನ್ನು ಯೆಹೂದಿ ಮತದವರು ಬೋಧಿಸಿದರು. ಧರ್ಮಶಾಸ್ತ್ರದೆಡೆಗಿನ ನಮ್ಮ ಉದಯತೆಯು ನಾವು ದೇವಜನರಿಗೆ ಸೇರಿದವರಾಗಿದ್ದೇವೆ ಮತ್ತು ಆತನು ಪರಿಶುದ್ಧನಾಗಿರುವಂತೆಯೇ ನಾವೂ ಸಹ ಪರಿಶುದ್ಧರಾಗಿದ್ದೇವೆಂಬುದಾಗಿ ಅವರು ಹೇಳಿದರು.

ಹೀಗೆ ಸುನ್ನತಿ ಮತ್ತು ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವುದು ದೇವಜನರ ಗುರುತುಗಳಾಗಿವೆ ಎಂಬುದಾಗಿ ಹೇಳಿದರು. ಮಾನಸಾಂತರಗೊಂಡ ಅನ್ಯರು ಸುನ್ನತಿ ಮಾಡಿಸಿಕೊಂಡು ಧರ್ಮಶಾಸ್ತ್ರವನ್ನು ಪಾಲಿಸಬೇಕೆಂದು ಅವರು ಹೇಳಿದರು. ಆಗ ಮಾತ್ರ ಅವರು ದೇವಜನರಿಗೆ ಸೇರಿದವರು ದೇವರ ಹಳೆಯ ಒಡಂಬಡಿಕೆಯ ವಾಗ್ದಾನಗಳಿಗೆ ಬಾಧ್ಯರು ಆಗುವರು.

## ಪೌಲನ ನಿಜವಾದ ಸುವಾರ್ತೆ

ಪೌಲನು ಈ ಸುಳ್ಳು ಸುವಾರ್ತೆಯನ್ನು ಮತ್ತು ಯೆಹೂದಿ ಮತದವರು ದೇವಜನರನ್ನು ಗುರುತಿಸಿದ ರೀತಿಯನ್ನು ಬಲವಾಗಿ ವಿರೋಧಿಸಿದನು. ಇದು ಆತನು ಯೆಹೂದಿ ಪದ್ಧತಿಯಾದ ಸುನ್ನತಿಗೆ ವಿರುದ್ಧವಾಗಿರುವ ನಿಮಿತ್ತದಿಂದಲ್ಲ ಅಥವಾ ಆತನು ಯೆಹೂದಿ ನೇಮ ನಿಷ್ಠೆಗಳನ್ನು ಮತ್ತು ಸಂಪ್ರದಾಯಗಳನ್ನು ಪಾಲಿಸುವುದು ತಪ್ಪೆಂಬುದಾಗಿ ಬೋಧಿಸಿದ್ದ ನಿಮಿತ್ತದಿಂದಲ್ಲ: ತಮ್ಮ ಎರಡನೇ ಸೇವಾಪ್ರಯಾಣದ ವೇಳೆ ಆ ಸ್ಥಳದಲ್ಲಿ ವಾಸಿಸುತ್ತಿದ್ದ ಯೆಹೂದ್ಯರ ನಿಮಿತ್ತವಾಗಿ ಪೌಲನೇ ತಿಮೊಥೆಯನಿಗೆ ಸುನ್ನತಿಮಾಡಿಸಿದನು (ಅಪೊ.ಕೃತ್ಯ. 16:1-3) ಮತ್ತು ತನ್ನ ಮೂರನೇ ಸೇವಾಪ್ರಯಾಣದ ನಂತರ ಯೆರೂಸಲೇಮಿನ ದೇವಾಲಯದ ಬಳಿ ಸ್ವತಃ ಪೌಲನೇ ಯೆಹೂದಿ ಶುದ್ಧೀಕರಣ ವ್ರತದಲ್ಲಿ ಪಾಲ್ಗೊಂಡನು (ಅಪೊ.ಕೃತ್ಯ. 21:17-26). ಇಲ್ಲಿ, ಪೌಲನು ಯೆಹೂದಿ ಮತದವರನ್ನು ಖಂಡಿಸಲು ಕಾರಣವೇನೆಂದರೆ ಪೌಲನು ಸಾರಿದ ನಿಜವಾದ ಸುವಾರ್ತೆ ಮತ್ತು ಪೌಲನು ದೇವಜನರನ್ನು ಗುರುತಿಸಿದ ರೀತಿಯೊಂದಿಗೆ ಅವರ ಸಂದೇಶವು ಸರಿಹೊಂದದೆ ಇರುವುದು (ಹೋಲಿಕೆಯಾಗದೇ ಇರುವುದು).

ಪೌಲನು ಹೇಳುವಂತೆ ನಿಜವಾದ ಸುವಾರ್ತೆಯು ಶಿಲುಬೆಗೆ ಹಾಕಲ್ಪಟ್ಟ ಯೇಸುಕ್ರಿಸ್ತನಲ್ಲಿನ ನಂಬಿಕೆಯ ಮೂಲಕ ಬರುವ ದೇವರ ಕೃಪೆಯ ಒಂದು ಸುವಾರ್ತೆಯಾಗಿದೆ. ನಾವು ನಂಬಿಕೆಯ ಮೂಲಕ ನೀತಿವಂತರೆಂದು ನಿರ್ಣಯ ಹೊಂದಿದ್ದೇವೆ ಹೊರತು ಧರ್ಮಶಾಸ್ತ್ರವನ್ನು ಅನುಸರಿಸುವುದರಿಂದ ಅಲ್ಲ. ನಮ್ಮ ನೀತಿವಂತಿಕೆಯು ನಮ್ಮ ಸ್ವಂತ ಪ್ರಯತ್ನಗಳ ಫಲವಲ್ಲ, ಬದಲಾಗಿ ದೇವರು ನಮಗೆ ಕೊಟ್ಟ ಉಚಿತವಾದ ವರವಾಗಿದೆ. ಇದು ದೇವರ ಕೃಪೆಯಾಗಿದೆ. ನಾವು ಕ್ರಿಸ್ತನಲ್ಲಿ ನಮ್ಮ ವಿಶ್ವಾಸವನ್ನು ಇಟ್ಟಿರುವಾಗ ದೇವರು ನಮ್ಮನ್ನು ನೀತಿವಂತರೆಂದು ಘೋಷಿಸುತ್ತಾನೆ. ನಾವು ಆತನಲ್ಲಿ ನಂಬಿಕೆ ಇಡುವಾಗ ಶಿಲುಬೆಯ ಮೇಲಿನ ಕ್ರಿಸ್ತನ ಮರಣವು ನಮ್ಮ ನೀತಿವಂತಿಕೆಯಾಗುತ್ತದೆ. ಆತನ ತ್ಯಾಗಮಯ ಮರಣದ ನಿಮಿತ್ತ ನಮ್ಮ ನೀತಿನಿರ್ಣಯವು ಸಾಧ್ಯವಾಗತ್ತದೆ. ಯೇಸುಕ್ರಿಸ್ತನಲ್ಲಿನ ನಂಬಿಕೆಯ ಮೂಲಕ ಸಿಗುವ ದೇವರ ಕೃಪೆಯ ಕುರಿತ ಪೌಲನ ಸುವಾರ್ತೆಯು ದೇವಜನರ ಗುರುತಿನ ಕುರಿತ ಆತನ ತಿಳುವಳಿಕೆಗೆ ಪರಿಣಾಮಗಳನ್ನು ಹೊಂದಿದೆ. "ಸುನ್ನತಿಯಾಗುವುದು ಅಥವಾ ಸುನ್ನತಿಯಾಗದೇ ಇರುವುದು" ಪ್ರಾಮುಖ್ಯವಲ್ಲ. ಕ್ರಿಸ್ತನಲ್ಲಿ ನಂಬಿಕೆಯಿಡುವವರೆಲ್ಲರೂ ಸುನ್ನತಿ ಮಾಡಿಸಿಕೊಂಡ ಯೆಹೂದ್ಯರು ಮತ್ತು ಸುನ್ನತಿ ಮಾಡಿಸಿಕೊಳ್ಳದಿರುವ ಅನ್ಯರು ಸಹ ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನಕ್ಕೆ ಸಹಬಾಧ್ಯರು, ಅಬ್ರಹಾಮನ ಮಕ್ಕಳು (ಸಂತತಿಯವರು), ದೇವರ ಮಕ್ಕಳು ಮತ್ತು ದೇವರ ರಾಜ್ಯಕ್ಕೆ ಬಾಧ್ಯರು ಆಗಿದ್ದಾರೆ.

ಕ್ರಿಯೆ/ ಕಾರ್ಯಗಳಿಂದ (ಹಳೇ ಒಡಂಬಡಿಕೆಯ ನೇಮಗಳನ್ನು ಪಾಲಿಸುವುದರಿಂದ ಒಳ್ಳೆಯ ವ್ಯಕ್ತಿಗಳಾಗುವುದರಿಂದ, ಬೇರೆಯವರಿಗೆ ಸಹಾಯ ಮಾಡುವುದರಿಂದ) ನಾವು ನೀತಿವಂತರೆಂಬ ನಿರ್ಣಯ ಹೊಂದುತ್ತೇವೆಯೋ/ ನಾವು ನೀತಿವಂತರಾಗುತ್ತೇವೆಯೋ/ ನಾವು ರಕ್ಷಣೆಯನ್ನು ಹೊಂದುತ್ತೇವೆಯೋ? ಅಥವಾ ನೀತಿವಂತರೆಂಬ ನಿರ್ಣಯ/ ನೀತಿವಂತಿಕೆ/ ರಕ್ಷಣೆಗೆ ಇರುವ ನಮ್ಮ ಮಾರ್ಗವು

ಯೇಸುಕ್ರಿಸ್ತನ ಮತ್ತು ಆತನ ಕ್ರೂಜೆಗೇರಿಸುವಿಕೆಯಲ್ಲಿನ ನಂಬಿಕೆಯ ಮೂಲಕ ದೇವರು ನಮಗೆ ಕೊಡುವ ಉಚಿತವಾದ ಮತ್ತು ಕೃಪೆಯ ವರವಾಗಿದೆಯೋ?

ಎರಡು ಸಾವಿರ ವರ್ಷಗಳ ಹಿಂದೆ ಗಲಾತ್ಯದವರಿಗೆ ಸಂಬಂಧಪಟ್ಟಂತೆ ಅದೇ ರೀತಿಯಲ್ಲಿ ಈ ಸಮಸ್ಯೆಯು ಇಂದು ನಮಗೂ ಸಹ ಸಂಬಂಧಪಡುತ್ತದೆ.

**ವಿಮರ್ಶೆ ಮತ್ತು ಚರ್ಚೆಗಾಗಿ (ನನ್ನದೇ ಉತ್ತರಗಳನ್ನು ನಾನು ಕೊಟ್ಟಿಲ್ಲ)**

1. ಮೇಲ್ಕಂಡ ನನ್ನ ಪತ್ಯವನ್ನು ನೋಡದೇ ಗಲಾತ್ಯದಲ್ಲಿನ ಸಂಘರ್ಷ/ ಜಗಳವನ್ನು ನಿಮ್ಮದೇ ಮಾತಿನಲ್ಲಿ ವಿವರಿಸಿರಿ.
2. ಮೇಲ್ಕಂಡ ನನ್ನ ಪತ್ಯ ನೋಡದೇ "ಪೌಲನ ಸುವಾರ್ತೆ" ಯನ್ನು ನಿಮ್ಮದೇ ಮಾತಿನಲ್ಲಿ ವಿವರಿಸಿರಿ.
3. ------------------------------------------------------------------------------------------------------------------------

   --------------------------------------------------------------------------------------------------------------------

4. "ಕ್ರಿಯೆ/ ಕಾರ್ಯಗಳ ಮೂಲಕ ರಕ್ಷಣೆ" ಯ ಸಿದ್ಧಾಂತವನ್ನು ಇಂದೂ ಸಹ ಅನೇಕ ಸಭೆಗಳ ಜೀವಿತಗಳಲ್ಲಿ ಕಾಣಬಹುದಾಗಿದೆ. ಯಾವ ಸಂದರ್ಭದಲ್ಲಿ "ಧರ್ಮಶಾಸ್ತ್ರವು" (ಉದಾಹರಣೆಗೆ ಸಭೆಯ ನಿಯಮಗಳನ್ನು ಪಾಲಿಸುವುದು ಅಥವಾ ನಮ್ಮ ರಕ್ಷಣೆಗಾಗಿ ನಿರ್ದಿಷ್ಟವಾದ ನಡತೆ/ ಗುಣವು ಅವಶ್ಯಕವೆಂದು ಹೇಳುವುದು) ಒಬ್ಬ ಸಭಾಪಾಲಕ ಅಥವಾ ಒಬ್ಬ ಅತಿಥಿ ಬೋಧಕರಿಂದ ನಿಮ್ಮ ಸಭೆಯಲ್ಲಿ ಪ್ರಸಂಗಿಸಲ್ಪಟ್ಟಿದೆ ಎಂಬುದಕ್ಕೆ ಉದಾಹರಣೆಗಳನ್ನು ಕೊಡಿರಿ.

## ಪವಿತ್ರಾತ್ಮನು ಕಾರ್ಯಮಾಡುತ್ತಿರುವುದು

ಗಲಾತ್ಯ ಅಧ್ಯಾಯ 3 ರ ಆರಂಭದಲ್ಲಿ ಸುಮಾರು ಹದಿನೇಳು ಬಾರಿ ಪೌಲನು ಆತ್ಮನ (ಪವಿತ್ರಾತ್ಮನ) ಬಗ್ಗೆ ತಿಳಿಸುತ್ತಾನೆ. ವಿಶ್ವಾಸಿಗಳಾಗಿ ಅವರ ಜೀವನದ ಅನೇಕ ಕ್ಷೇತ್ರಗಳಲ್ಲಿ ಪವಿತ್ರಾತ್ಮನ ಕಾರ್ಯದ ಬಗ್ಗೆ ಪೌಲನು ತನ್ನ ಓದುಗರಿಗೆ ಜ್ಞಾಪಕಪಡಿಸಿದ್ದನ್ನು ನಾವು ನಮ್ಮ ಅಧ್ಯಯನಗಳಲ್ಲಿ ನೋಡಿದ್ದೇವೆ:

1. ನೀತಿವಂತರೆಂಬ ನಿರ್ಣಯ/ ರಕ್ಷಣೆ: "ಪವಿತ್ರಾತ್ಮನನ್ನು ಹೊಂದಿದ್ದು" (3:2), "ವಾಗ್ದಾನ ಮಾಡಿದ ಆತ್ಮನನ್ನು ಹೊಂದುವುದು" (3:14) ಮತ್ತು "ದೇವರು ತನ್ನ ಮಗನ ಆತ್ಮವನ್ನು ನಮ್ಮ ಹೃದಯಗಳಲ್ಲಿ ಕಳುಹಿಸಿಕೊಟ್ಟನು" (4:6) ಎಂಬಂಥ ಹೇಳಿಕೆಗಳನ್ನು ಪೌಲನು ಬಳಸುತ್ತಾನೆ.
2. ಬಲಪಡಿಸುವಿಕೆ: ಅವರ ಮಧ್ಯೆ ದೇವರಾತ್ಮನು ಅದ್ಭುತಗಳನ್ನು ಮಾಡಿದ್ದನ್ನು ಗಲಾತ್ಯದವರಿಗೆ ಜ್ಞಾಪಕಮಾಡಿಸುವಾಗ ಪೌಲನು 3:5 ರಲ್ಲಿ ಪವಿತ್ರಾತ್ಮನ ಕಾರ್ಯದ ಈ ಅಂಶವನ್ನು ಮುಟ್ಟುತ್ತಾನೆ.
3. ಮಾರ್ಗದರ್ಶನ: ಪವಿತ್ರಾತ್ಮನ ಮಾರ್ಗದರ್ಶನವು ಅಧ್ಯಾಯ 5 ರಲ್ಲಿನ ಒಂದು ಮುಖ್ಯವಾದ ವಿಷಯವಾಗಿದೆ ("ಆತ್ಮನಿಂದ ಜೀವಿಸುವುದು", "ಆತ್ಮನನ್ನುಸರಿಸಿ ನಡೆಯುವುದು" (5:25).

   "ನಮ್ಮ ನೀತಿಯ ನಿರೀಕ್ಷೆಯು" (ಅಥವಾ ನಮ್ಮ ನೀತಿನಿರ್ಣಯ) ಯೇಸುಕ್ರಿಸ್ತನ ಎರಡನೇ ಬರೋಣದಲ್ಲಿ ಪೂರ್ಣವಾಗುವವರೆಗೆ/ ಸಫಲವಾಗುವವರೆಗೆ ಪವಿತ್ರಾತ್ಮನು ನಮ್ಮನ್ನು ನಡೆಸುತ್ತಾನೆ (5:5).

4. ಶುದ್ಧೀಕರಣ ಮತ್ತು "ಫಲ-ಕೊಡುವಿಕೆ": ಇದು ಅಧ್ಯಾಯ 5 ಮತ್ತು 6 ರ ಮುಖ್ಯ ವಿಷಯವಾಗಿದೆ. ಪೌಲನು "ಆತ್ಮನನ್ನನುಸರಿಸಿ ನಡೆಯುವುದು/ ಆತ್ಮನಿಂದ ನಡಿಸಿಕೊಳ್ಳುವುದು" (5:16, 18), "ದೇವರಾತ್ಮನಿಂದುಂಟಾಗುವ ಫಲ" (5:22-23) ಮತ್ತು "ಆತ್ಮನನ್ನು ಕುರಿತು ಬಿತ್ತುವವನು ಆತ್ಮನಿಂದ ಕೊಯ್ಯುವವನು" (6:8) ಎಂಬ ಹೇಳಿಕೆಗಳನ್ನು ಬಳಸುತ್ತಾನೆ. ದೇವರಾತ್ಮನು ನಮ್ಮೊಳಗೆ ವಾಸಿಸುತ್ತಾ ನಮ್ಮ ಜೀವಿತಗಳಲ್ಲಿ ತನ್ನ ಫಲವನ್ನು ಉತ್ಪಾದಿಸುತ್ತಾ, ಕ್ರಿಸ್ತನ ನಿಯಮವನ್ನು ನೆರವೇರಿಸಲು ನಮ್ಮನ್ನು ಶಕ್ತರನ್ನಾಗಿಸುತ್ತಾನೆ (6:2, ಹೋಲಿಸಿ 5:14).

ಈ ನಾಲ್ಕು ಅಂಶಗಳನ್ನು ಅಭ್ಯಾಸಿಸುವಾಗ ಕನಿಷ್ಠಪಕ್ಷ ಎರಡು ಮುಖ್ಯ ವಿಷಯಗಳನ್ನು ನಾವು ಗಮನಿಸಬೇಕು:

- ಕ್ರಿಸ್ತನಲ್ಲಿನ ವಿಶ್ವಾಸಿಗಳ ಜೀವನದುದ್ದಕ್ಕೂ ಪವಿತ್ರಾತ್ಮನು ಬಹು ಪ್ರಾಮುಖ್ಯವಾಗಿದ್ದಾನೆಂಬುದನ್ನು ಗಲಾತ್ಯ ಪತ್ರಿಕೆಯು ತೋರಿಸುತ್ತದೆ. ನಮ್ಮ ಆತ್ಮೀಕ ಜನನ, ನಮ್ಮ ದೈನಂದಿನ ಜೀವನದ ಸರಣಿ, ನಮ್ಮ ಆತ್ಮೀಕ ಬೆಳವಣಿಗೆ, ನಮ್ಮ ಸೇವೆಯ ಯಶಸ್ಸು, ನಮ್ಮ ಜೀವಿತದ ಫಲ ಮತ್ತು ಆತ್ಮೀಕ ಗುಣಮಟ್ಟ, ನಮ್ಮ ಜೀವಿತದ ಅಂತ್ಯದವರೆಗೂ/ ಅಥವಾ ಯೇಸುಕ್ರಿಸ್ತನ ಬರೋಣದೊಂದಿಗೆ ದೇವರ ರಾಜ್ಯವು ಪೂರ್ಣಮಟ್ಟಿಗೆ ಬರುವವರೆಗೂ ನಮ್ಮ ತಾಳ್ಮೆ.
- ಪರಿಣಾಮವಾಗಿ, ಗಲಾತ್ಯ ಪತ್ರಿಕೆಯು ಇಂದು ನಮಗೂ ಪ್ರಸಕ್ತತೆಯನ್ನು ಹೊಂದಿದೆ. ಹಾಗಾಗಿ ಇದನ್ನು ಪದೇ ಪದೇ ಓದುವದರಿಂದ ನಮಗೆ ಪ್ರಯೋಜನವಿದೆ. ಈ ಪಠ್ಯಗಳನ್ನು ಅಭ್ಯಾಸಿಸುವುದರಲ್ಲಿ ಸಮಯ ಕಳೆಯುತ್ತಾ, ಅವುಗಳಲ್ಲಿ ಕಂಡುಕೊಂಡ ಆತ್ಮೀಕ ಸತ್ಯಗಳನ್ನು ನಮ್ಮ ವೈಯಕ್ತಿಕ ಬದಕು ಮತ್ತು ಸಭಾಜೀವಿತಕ್ಕೆ ಅಳವಡಿಸಿಕೊಳ್ಳುವುದರಿಂದ ನಮಗೆ ಲಾಭವಿದೆ.

## ವಿಮರ್ಶೆ ಮತ್ತು ಚರ್ಚೆ (ನನ್ನದೇ ಉತ್ತರಗಳನ್ನು ನಾನು ಕೊಟ್ಟಿಲ್ಲ)

1. ಕೆಳಕಂಡವುಗಳ ಬೆಳಕಿನಲ್ಲಿ ಪವಿತ್ರಾತ್ಮನ ಕಾರ್ಯಗಳ ನಾಲ್ಕೂ ಕ್ಷೇತ್ರಗಳ ಕುರಿತು ವಿಮರ್ಶಿಸಿರಿ.
   - ನಮ್ಮ ಸ್ವಂತ ವೈಯಕ್ತಿಕ ಜೀವನ/ ಜೀವಿತ
   - ನಿಮ್ಮ ಸಭಾ ಜೀವಿತ
2. ಕರ್ತನಿಗೆ ನೀವು ಮಾಡುವ ಪ್ರಾರ್ಥನೆಯಲ್ಲಿ ಕಾಳಜಿಯನ್ನು ವಹಿಸುವುದರ ಮೂಲಕ ನಿಮ್ಮ ಗುಂಪಿನಲ್ಲಿ ಪರಸ್ಪರ ಒಬ್ಬರಿಗೊಬ್ಬರು ಸಹಾಯಮಾಡಿರಿ. "ಒಬ್ಬರು ಮತ್ತೊಬ್ಬರ ಭಾರವನ್ನು ಹೊತ್ತುಕೊಳ್ಳಲಿ; ಹೀಗೆ ಕ್ರಿಸ್ತನ ನಿಯಮವನ್ನು ನೆರವೇರಿಸಿರಿ" (6:2)

# ಉತ್ತರಗಳು

# ಉತ್ತರಗಳು 1: ಇಡೀ ಪತ್ರಿಕೆಯನ್ನು ಓದಿರಿ

**ಅಧ್ಯಾಯ 1**

1. ಪೌಲನು ಗಲಾತ್ಯದವರೊಂದಿಗೆ ತಾನು ಹಂಚಿಕೊಂಡ ಸುವಾರ್ತೆಯನ್ನು ಯೇಸುಕ್ರಿಸ್ತನ ಪ್ರಕಟಣೆಯೊಂದಿಗೆ ಪಡಕೊಂಡನೇ ಹೊರತು ಯಾವ ಮನುಷ್ಯರಿಂದಲ್ಲ (1:11).
2. ಪೌಲನನ್ನು ಅಪೊಸ್ತಲನನ್ನಾಗಿ ತಂದೆಯಾದ ದೇವರು ಮತ್ತು ಯೇಸು ಕ್ರಿಸ್ತರು ನೇಮಿಸಿದರು (1:11).
3. ಪೌಲನ ಬದಲಾದ ಜೀವಿತಕ್ಕಾಗಿ ಯೂದಾಯದಲ್ಲಿನ ಸಭೆಗಳು ದೇವರನ್ನು ಸ್ತುತಿಸಿದರು. ಒಬ್ಬ ಹಿಂಸಕನಾಗಿದ್ದವನು ಈಗ ಕ್ರೈಸ್ತ ನಂಬಿಕೆಯ ಒಬ್ಬ ಬೋಧಕ/ ಪ್ರಸಂಗಿಯಾದನು (1:23-24).

**ಅಧ್ಯಾಯ 2**

1. ಯಾಕೋಬ (ಯೇಸುವಿನ ತಮ್ಮ), ಪೇತ್ರ ಮತ್ತು ಯೋಹಾನರು ಯೆರೂಸಲೇಮಿನಲ್ಲಿನ ಸಭೆಯ ಮುಖ್ಯ ನಾಯಕರುಗಳೆಂದು ಪರಿಗಣಿಸಲ್ಪಟ್ಟಿದ್ದರು. ಅವರು ಸಭಾಸ್ತಂಭಗಳಾಗಿದ್ದರು (2:7-9).
2. ಯೆರೂಸಲೇಮಿನ ನಾಯಕರುಗಳೊಂದಿಗಿನ ಪೌಲ ಮತ್ತು ಬಾರ್ನಬರ ಭೇಟಿ/ ಸಭೆ ಈ ಪರಿಣಾಮವನ್ನುಂಟುಮಾಡಿತು: ಅನ್ಯಜನರಿಗೆ ಸುವಾರ್ತೆ ಸಾರುವ ಜವಾಬ್ದಾರಿಯನ್ನು ದೇವರು ಪೌಲನಿಗೆ ಕೊಟ್ಟಿದ್ದಾನೆಂಬುದನ್ನು ಯಾಕೋಬ, ಪೇತ್ರ ಮತ್ತು ಯೋಹಾನರು (ಯೆರೂಸಲೇಮಿನ ಸಭೆಯ ನಾಯಕರು) ಅರಿತು ಒಪ್ಪಿಕೊಂಡರು (2:7-9).
3. ತೀತನು ಒಬ್ಬ ಸುನ್ನತಿಯಾಗದ ಗ್ರೀಕ್ ಹಿನ್ನಲೆಯವನಾಗಿದ್ದರಿಂದ ತನ್ನ ಯೆರೂಸಲೇಮಿನ ಭೇಟಿಯಲ್ಲಿ ಯೆರೂಸಲೇಮಿನ ಸಭೆಯ ನಾಯಕರುಗಳಿಗೂ ಸಹ ತೀತನು ಸುನ್ನತಿ ಮಾಡಿಸಿಕೊಳ್ಳುವ ಅವಶ್ಯವಿಲ್ಲವೆಂಬುದನ್ನು ತನ್ನ ಓದುಗರಿಗೆ ತೋರಿಸುವುದಕ್ಕಾಗಿ ಪೌಲನು ಆತನ ಕುರಿತು ಹೇಳುತ್ತಾನೆ (2:1-3).
4. ಪೌಲನು ಸಾರುವ ಸುವಾರ್ತೆಯ ಪ್ರಕಾರ ಯೇಸುಕ್ರಿಸ್ತನ ಮೇಲಿನ ನಂಬಿಕೆಯ ಮೂಲಕ ನಾವು ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೇವೆ ಹೊರತು ಧರ್ಮಶಾಸ್ತ್ರ ಅಥವಾ ನೇಮನಿಷ್ಠೆಗಳಿಂದಲ್ಲ (2:16).

**ಅಧ್ಯಾಯ 3**

1. ವಿಶ್ವಾಸಿಗಳು ಮತ್ತು ಅಬ್ರಹಾಮನ ಸಂಬಂಧ: ವಿಶ್ವಾಸಿಗಳು ಅಬ್ರಹಾಮನ ಮಕ್ಕಳಾಗಿದ್ದಾರೆ, ಯಾಕೆಂದರೆ ಆತನಂತೆಯೇ ನಾವು ಸಹ ನಂಬಿಕೆಯಿಂದಲೇ ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೇವೆ (3:6-18). ಆದುದರಿಂದ ನಾವು ಅಬ್ರಹಾಮನ ಸಂತತಿಯು. ದೇವರು ಆತನಿಗೆ ಮಾಡಿದ ವಾಗ್ದಾನಕ್ಕೆ ಬಾಧ್ಯರೂ ಆಗಿದ್ದೇವೆ (3:29).
2. ಕ್ರಿಸ್ತ ನಂಬಿಕೆಯ ಕಾಲ ಬರುವುದಕ್ಕಿಂತ ಮೊದಲು ನಮ್ಮನ್ನು ಬಂಧನದಲ್ಲಿಡುವುದು ಧರ್ಮಶಾಸ್ತ್ರದ ಪಾತ್ರವಾಗಿತ್ತು (ಅಥವಾ ನಮ್ಮನ್ನು ನಿಯಂತ್ರಿಸುವುದು ಅಥವಾ ಸೆರೆಯಾಳುವಾಗಿ ಇಡುವುದು) (3:23).
3. ಗಲಾತ್ಯದವರೊಂದಿಗೆ ಸುವಾರ್ತೆಯನ್ನು ಹಂಚಿಕೊಂಡಾಗ ಪೌಲನು ಯೇಸುಕ್ರಿಸ್ತನನ್ನು ಶಿಲುಬೆಗೆ ಹಾಕಿಸಿಕೊಂಡವನೆಂಬುದಾಗಿ ವಿವರಿಸಿದನು (3:1).

4. ಪೌಲನು ಸಭೆಯ ಐಕ್ಯತೆಯನ್ನು (ಯೇಸುಕ್ರಿಸ್ತನಲ್ಲಿ ನಂಬಿಕೆ ಇಟ್ಟವರು, ಆತನಿಗೆ ದೀಕ್ಷಾಸ್ನಾನ ಮಾಡಿಸಿಕೊಂಡು ಕ್ರಿಸ್ತನನ್ನು ಧರಿಸಿಕೊಂಡವರು ಎಂದು ಹೇಳುವಂತೆ) ಜನಾಂಗೀಯತೆ (ಯೆಹೂದ್ಯ ಅಥವಾ ಗ್ರೀಕ್), ಸಾಮಾಜಿಕ ಸ್ಥಾನ (ದಾಸ ಅಥವಾ ಸ್ವತಂತ್ರನು), ಲಿಂಗದ (ಗಂಡು ಅಥವಾ ಹೆಣ್ಣು) ಬೇದಭಾವವಿಲ್ಲದ ಒಂದು ಅನ್ಯೋನ್ಯತೆ ಎಂಬುದಾಗಿ ವರ್ಣಿಸುತ್ತಾನೆ (3:26-29).

### ಅಧ್ಯಾಯ 4

1. ದೇವರನ್ನು ತಿಳಿದುಕೊಳ್ಳುವುದಕ್ಕಿಂತ ಮೊದಲಿನ ಗಲಾತ್ಯದವರ ಜೀವಿತವನ್ನು ಪೌಲನು ಹೀಗೆ ವರ್ಣಿಸುತ್ತಾನೆ: ಅದು ದೇವರಲ್ಲದವುಗಳಿಗೆ ಅಧೀನನಾಗಿದ್ದಂತ ಜೀವಿತವಾಗಿದೆ (4:8).

2. ವಾಗ್ದಾನದ ಫಲವಾಗಿ ಹುಟ್ಟಿದ ಮಕ್ಕಳು ಪರಲೋಕದ ಯೆರೂಸಲೇಮ್ ಎಂಬ ಸ್ವತಂತ್ರಳಾಗಿರುವ ಸ್ತ್ರೀ ಎಂಬ ಒಡಂಬಡಿಕೆಗೆ ಸೇರಿದವರಾಗಿದ್ದಾರೆ. ಅವಳ ಮಕ್ಕಳು ಸ್ವತಂತ್ರವಾಗಿ ಹುಟ್ಟಿದವರಾಗಿದ್ದಾರೆ (4:24-26).

3. ನಮ್ಮ ಪುತ್ರತ್ವವನ್ನು ವಿವರಿಸಲು ಪೌಲನು ಈ ಹೇಳಿಕೆಗಳನ್ನು ಉಪಯೋಗಿಸುತ್ತಾನೆ (4:6-7): ದೇವರು ತನ್ನ ಮಗನ ಆತ್ಮವನ್ನು ನಮ್ಮ ಹೃದಯಗಳಲ್ಲಿ ಕಳುಹಿಸಿಕೊಟ್ಟನು. ನಾವು ಇನ್ನು ಮಂದೆ ದಾಸರುಗಳಲ್ಲ. ಈಗ ನಾವು ಬಧ್ಯರಾಗಿದ್ದೇವೆ.

### ಅಧ್ಯಾಯ 5

1. ಪೌಲನು ದಾಸತ್ವದ ನೊಗ ಮತ್ತು ಸುನ್ನತಿಯ ನಡುವೆ ಈ ಸಂಬಂಧವನ್ನು ಕಲ್ಪಿಸುತ್ತಾನೆ: ಕ್ರಿಸ್ತನಿಂದ ಬಿಡುಗಡೆ ಹೊಂದಿದ ವಿಶ್ವಾಸಿ ಒಬ್ಬನು ಸುನ್ನತಿಯನ್ನು ಮಾಡಿಸಿಕೊಂಡರೆ ಪುನಃ ಆತನು ದಾಸಗುತ್ತಾನೆ (ದಾಸತ್ವದ ನೊಗದಲ್ಲಿ ಸಿಲುಕಿಕೊಳ್ಳುತ್ತಾನೆ) (5:1-2).

2. ಒಂದುವೇಳೆ ಧರ್ಮಶಾಸ್ತ್ರದ ಮೂಲಕ ಗಲಾತ್ಯದವರು ನೀತಿವಂತರೆಂಬ ನಿರ್ಣಯವನ್ನು ಹೊಂದಲು ಪ್ರಯತ್ನಿಸಿದರೆ ಅವರು ನಂಬಿಕೆಯನ್ನು ತೊರೆಯುವವರು ಮತ್ತು ಕ್ರಿಸ್ತನಿಂದ ಅಗಲಿ ಹೋಗುವವರಾಗಿದ್ದಾರೆ (5:4).

3. ಅಧ್ಯಾಯದ ಎರಡನೇ ಭಾಗದಲ್ಲಿ ಪೌಲನು ಜೀವನದ ಎರಡು ಮಾರ್ಗಗಳನ್ನು ತದ್ವಿರುದ್ಧವಾಗಿಸುತ್ತಾನೆ: ಪವಿತ್ರಾತ್ಮನಿಂದ ಬೆಳೆಸಲ್ಪಡುವ ಒಂದು ಜೀವನ ಮತ್ತು ಶರೀರಭಾವದ ಅಭಿಲಾಷೆಗಳನ್ನು ನೆರವೇರಿಸುವ ಒಂದು ಜೀವನ (ಪಾಪಧೀನ ಸ್ವಭಾವ) (5:16).

### ಅಧ್ಯಾಯ 6

1. ಅಧ್ಯಾಯದ ಮೊದಲ ಭಾಗದಲ್ಲಿ ಪೌಲನು ಗಲಾತ್ಯದವರಿಗೆ ಕ್ರೈಸ್ತೀಯ ಜೀವನ ಶೈಲಿಯ ಕುರಿತು ಅನೇಕ ಸಲಹೆಗಳನ್ನು ಕೊಡುತ್ತಾನೆ. ಮೊದಲ ಸಲಹೆಯು (ಪಾಪ ಮಾಡಿದ ಸಹ ವಿಶ್ವಾಸಿಯನ್ನು ಶಾಂತಭಾವದಿಂದ ತಿದ್ದಿ ಸರಿಮಾಡುವುದು, 6:1). ತೀರಾ ಸವಾಲಿನದೆಂಬುದಾಗಿ ನಾನು ವೈಯಕ್ತಿಕವಾಗಿ ಯೋಚಿಸುತ್ತೇನೆ. ನೀವು ಬೇರೆ ಯಾವುದೋ ಅಂಶವನ್ನು ಆರಿಸಿಕೊಂಡಿರಬಹುದು.

2. ಮನುಷ್ಯರಾಗಿ ನಾವು ಅನೇಕ ಸಂಗತಿಗಳ ಕುರಿತು ಹೆಚ್ಚಳಪಡುತ್ತೇವೆ. ಪೌಲನಾದರೋ ತನಗಾಗಿ ಶಿಲುಬೆಗೆ ಏರಿಸಲ್ಪಟ್ಟ ಯೇಸುಕ್ರಿಸ್ತನ ಶಿಲುಬೆಯ ವಿಷಯದಲ್ಲಿ ಹೆಚ್ಚಳಪಡುತ್ತಾನೆ ಮತ್ತು ಅದರ ಮೂಲಕವಾಗಿಯೇ ಪೌಲನು ಲೋಕದ ಪಾಲಿಗೆ ಶಿಲುಬೆಗೆ ಹಾಕಿಸಿಕೊಂಡಿದ್ದಾನೆ (6:14).

# ಉತ್ತರಗಳು 2: ಗಲಾತ್ಯ ಪತ್ರಿಕೆಯನ್ನು ರಚನೆ ಮಾಡುವುದು

## ದೊಡ್ಡ ಚಿತ್ರಣ

## ಪ್ರಶ್ನೆಗಳಿಗೆ ಉತ್ತರಗಳು

1. ಅಧ್ಯಾಯ 1-2 ಮುಖ್ಯವಾಗಿ ಸ್ವತಃ ಪೌಲನ ಕುರಿತಾಗಿವೆ: ಆತನ ಅಪೊಸ್ತಲತನ ಮತ್ತು ಆತನ ಅಧಿಕಾರ.

2. ಅಧ್ಯಾಯ 3-4 ಮುಖ್ಯವಾಗಿ ಪೌಲನ ಸುವಾರ್ತೆಯ ಕುರಿತಾಗಿವೆ: ನೀತಿವಂತರೆಂಬ ನಿರ್ಣಯ, ನೀತಿವಂತಿಕೆ ಮತ್ತು ರಕ್ಷಣೆಯನ್ನು ಯೇಸುಕ್ರಿಸ್ತನ ಮೇಲಣ ನಂಬಿಕೆಯ ಮೂಲಕ ಕೃಪೆಯಿಂದಲೇ ಹೊಂದುತ್ತೇವೆ. ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವುದರಿಂದ ನಾವು ನೀತಿ ನಿರ್ಣಯ ಹೊಂದಲಿಲ್ಲ ಮತ್ತು ನೀತಿವಂತರೆಂದು ಹೇಳಲ್ಪಟ್ಟಿಲ್ಲ. ಪೌಲನು "ರಕ್ಷಣೆ" ಮತ್ತು "ರಕ್ಷಿಸಲ್ಪಟ್ಟ" ಎಂಬ ಪದಗಳನ್ನು ಬಳಸಿಲ್ಲ. ಬದಲಾಗಿ "ದೇವರಾತ್ಮನನ್ನು ಹೊಂದುವುದು", "ಪುತ್ರರ ಪದವಿ", "ಜೀವನ", "ಬಾಧ್ಯತೆ" ಎಂಬ ಹೇಳಿಕೆಗಳನ್ನುಪಯೋಗಿಸುತ್ತಾನೆ. ಈ ಅಧ್ಯಾಯಗಳಲ್ಲಿ ಪೌಲನು "ಪಡೆಯುವಲ್ಲಿ"ಯ ಮೇಲೆ ಗಮನಹರಿಸಿದ್ದಾನೆಂದು ಸತ್ಯವೇದ ಪಂಡಿತರು ಸೂಚಿಸಿದ್ದಾರೆ: ಯೇಸುಕ್ರಿಸ್ತನಲ್ಲಿಯ ನಂಬಿಕೆಯ ಮೂಲಕ ಸಿಗುವ ಕೃಪೆಯೊಂದೇ ಮನುಷ್ಯನು (ಯೆಹೂದ್ಯ ಮತ್ತು ಅನ್ಯನು) ದೇವಜನರನ್ನು ಸೇರಲು, ದೇವಜನರ ಕುಟುಂಬದ ಒಬ್ಬ ಸದಸ್ಯನಾಗಲು ಇರುವ ಏಕೈಕ ಮಾರ್ಗವಾಗಿದೆ. ಈ ರೀತಿಯಲ್ಲಿ ನಾವು ದೇವರ ರಾಜ್ಯವನ್ನು ಸೇರುತ್ತೇವೆ (ಮತ್ತಾಯ 5:20 ರಲ್ಲಿನ ಯೇಸುವಿನ ಮಾತುಗಳೊಂದಿಗೆ ಹೋಲಿಸಿರಿ).

3. 5-6 ನೇ ಅಧ್ಯಾಯಗಳು ಮುಖ್ಯವಾಗಿ ನಿಜವಾದ ಆತ್ಮೀಕ ಜೀವನದ ಕುರಿತಾಗಿವೆ. ಕ್ರೈಸ್ತೀಯ ಜೀವಿತದ ಪರಿಶುದ್ಧತೆಯನ್ನು ವಿವರಿಸುವುದಕ್ಕಾಗಿ ಪೌಲನು "ಪವಿತ್ರಾತ್ಮನನ್ನು ಅನುಸರಿಸಿ ನಡೆದುಕೊಳ್ಳಿರಿ", "ಆತ್ಮನಿಂದ ನಡೆಸಿಕೊಳ್ಳುವವರು", ಆತ್ಮನಿಂದ ಜೀವಿಸುತ್ತಿರಲಾಗಿ", "ಆತ್ಮನ ಫಲಕೊಡುವುದು", "ಆತ್ಮನನ್ನು ಕುರಿತು ಬಿತ್ತುವುದು" ಎಂಬ ಹೇಳಿಕೆಗಳನ್ನು ಉಪಯೋಗಿಸುತ್ತಾನೆ. ಈ ಅಧ್ಯಾಯಗಳಲ್ಲಿ ಪೌಲನು "ಒಳಗೆ ಇರುವುದರ" ಮೇಲೆ ಗಮನಹರಿಸುತ್ತಾನೆಂಬುದಾಗಿ ಸತ್ಯವೇದ ಪಂಡಿತರು ಸಲಹೆ ಕೊಡುತ್ತಾರೆ. ತನ್ನ ಪವಿತ್ರಾತ್ಮನ ಕಾರ್ಯದ ಮೂಲಕ ನಮ್ಮ ಜೀವಿತಗಳಲ್ಲಿ ದೇವರ ಕರುಣೆಯ ಪ್ರಸನ್ನತೆಯು ದೇವಜನರ ನಡುವೆ ಉಳಿಯಲು, ದೇವರ ಕುಟುಂಬದಲ್ಲಿ ಉಳಿದುಕೊಳ್ಳಲು, ದೇವರ ನಿತ್ಯರಾಜ್ಯದಲ್ಲಿನ ನಮ್ಮ ಮುಂದಿನ ಬಾಧ್ಯತೆಯನ್ನು ಹೊಂದಿಕೊಳ್ಳುವುದಕ್ಕಾಗಿ ಸಿದ್ಧಗೊಳ್ಳುವುದಕ್ಕೆ ನಮ್ಮನ್ನು ಶಕ್ತರನ್ನಾಗಿಸುತ್ತದೆ (ಮತ್ತಾಯ 25:34 ರಲ್ಲಿನ ಯೇಸುವಿನ ಮಾತುಗಳೊಂದಿಗೆ ಹೋಲಿಸಿ).

## ಒಂದು ವಿವರವಾದ ರಚನೆ

## ಪ್ರಶ್ನೆಗೆ ಉತ್ತರ

1. ಪವಿತ್ರಗ್ರಂಥದಲ್ಲಿನ ವಿಭಾಗಗಳ ಪಟ್ಟಿ

| **ವಚನಗಳು** | **ಶೀರ್ಷಿಕೆ** |
|---|---|

| | |
|---|---|
| 1:1-5 | ಶೀರ್ಷಿಕೆಯಿಲ್ಲ |
| 1:6-10 | |
| 1:11-24 | |
| 2:1-10 | |
| 2:11-21 | |
| 3:1-14 | |
| 3:15-18 | |
| 3:19-25 | |
| 3:26-4:7 | |
| 4:8-20 | |
| 4:21-31 | |
| 5:1-12 | |
| 5:13-26 | |
| 6:1-10 | |
| 6:11-18 | (ಕೊನೇ ಮಾತುಗಳು) |

ಹೀಗೆ **ಪವಿತ್ರಗ್ರಂಥದ** ಭಾಷಾಂತಕಾರರು/ ಸಂಪಾದಕರು/ ಪ್ರಕಾಶಕರು ಗಲಾತ್ಯ ಪತ್ರಿಕೆಯನ್ನು 15 ವಿಭಾಗಗಳಾಗಿ ರಚನೆ ಮಾಡಿದ್ದಾರೆ.

2. **ಸತ್ಯವೇದ**ದಲ್ಲಿನ ವಿಭಾಗಗಳ ಪಟ್ಟಿ

| **ವಚನಗಳು** | **ಶೀರ್ಷಿಕೆ** |
|---|---|
| 1:1-5 | (ವಂದನೆಗಳು ಮತ್ತು ದೇವರಿಗೆ ಸ್ತೋತ್ರ) |
| 1:6-10 | |
| 1:11-2:10 | |
| 2:11-21 | |
| 3:1-18 | |
| 3:19-4:7 | |
| 4:8-5:12 | |
| 5:13-24 | |

5:25-6:10

6:11-18 (ಪೌಲನ ಸ್ವತಕ್ಕೈಯಿಂದ ಬರೆಯಲಾದ ಕಡೇ ಮಾತುಗಳು)

--------------------------------------------------------------------------------------------------------------------------------

----------------------------------------------------------------------------

# ಉತ್ತರಗಳು 3: ವಂದನೆಗಳು (1:1-5)

## ಪ್ರಶ್ನೆಗಳಿಗೆ ಉತ್ತರಗಳು

1. ಪತ್ರದ ನಾಲ್ಕು ಮುಖ್ಯ ಭಾಗಗಳು:
    - ಕಳುಹಿಸುವವನು: (ಪೌಲನು ಮತ್ತು ಆತನ ಜೊತೆಕೆಲಸದವರು) (ವ. 1-2)
    - ಸ್ವೀಕೃತರು: ಗಲಾತ್ಯದಲ್ಲಿರುವ ಸಭೆಗಳು (ವ. 2)
    - ಆಶೀರ್ವಾದ: ಕೃಪೆಯೂ … ಶಾಂತಿಯೂ … (ವ. 3-4)
    - ಅಂತ್ಯಾಶೀರ್ವಾದ/ ಸ್ತೋತ್ರ: ನಮ್ಮ ತಂದೆಯಾದ ದೇವರಿಗೆ ಸ್ತೋತ್ರ (ವ. 4-5)
2. ತನ್ನ ಬಗ್ಗೆ ಪೌಲನು ಎರಡು ಪ್ರಮುಖ ಮಾಹಿತಿಗಳನ್ನು ಹೊಂದಿದ್ದಾನೆ:
    - ಆತನು ತನ್ನನ್ನು ಅಪೊಸ್ತಲನೆಂದು ಕರೆದುಕೊಳ್ಳುತ್ತಾನೆ.
    - ಆತನ/ ತನ್ನ ಅಪೊಸ್ತಲತನವು ಯೇಸುಕ್ರಿಸ್ತನೂ ಮತ್ತು ತಂದೆಯಾದ ದೇವರಿಂದಲೇ ಬಂದಿದೆ ಹೊರತು ಯಾವುದೇ ಮನುಷ್ಯನಿಂದಲ್ಲ.
3. ಈ ಪತ್ರದಲ್ಲಿ ಪೌಲನು ತಂದೆಯಾದ ದೇವರ ಈ ಅಂಶಗಳನ್ನು ಸೇರಿಸುತ್ತಾನೆ:
    - ತಂದೆಯಾದ ದೇವರು ಯೇಸುಕ್ರಿಸ್ತನನ್ನು ಮರಣದೊಳಗಿಂದ ಎಬ್ಬಿಸಿದನು.
    - ಆತನು ನಮಗೆ ಶಾಂತಿ/ ಸಮಾಧಾನವನ್ನು ಅನುಗ್ರಹಿಸುವ ತಂದೆಯಾಗಿದ್ದಾನೆ.
    - ಯೇಸುಕ್ರಿಸ್ತನ ರಕ್ಷಣಾಕಾರ್ಯವು ತಂದೆಯ ಚಿತ್ತಕ್ಕೆ ಅನುಸಾರವಾಗಿತ್ತು.
    - ನಿತ್ಯಮಹಿಮೆಯು ತಂದೆಯಾದ ದೇವರಿಗೆ ಸೇರಿದೆ/ ಮೀಸಲಾಗಿದೆ.
4. ಈ ಪತ್ರದಲ್ಲಿ ಪೌಲನು ಯೇಸುಕ್ರಿಸ್ತನ ಈ ಅಂಶಗಳನ್ನು ಸೇರಿಸುತ್ತಾನೆ:
    - ಮರಣದಿಂದ ಆತನ ಪುನರುತ್ಥಾನ
    - ನಮ್ಮ ಪಾಪ ಮತ್ತು ಬಿಡುಗಡೆಗಾಗಿ ಆತನ ಬಲಿ (ರಕ್ಷಣೆ)

## ಆಲೋಚಿಸಿರಿ ಮತ್ತು ಚರ್ಚಿಸಿರಿ ಮೇಲಣ ಟಿಪ್ಪಣಿಗಳು

1. ತನ್ನ ಬಗ್ಗೆ ಹೆಚ್ಚುವರಿ ಮಾಹಿತಿಗಳನ್ನು ಸೇರಿಸಲು ಕಾರಣ ತನ್ನ ಪತ್ರಿಕೆಯ ಸಂದರ್ಭ/ ಹಿನ್ನಲೆಯಾಗಿದೆ: ಪೌಲನು ತನ್ನ ಸೇವಾ ಪ್ರಯಾಣಗಳ ಅವಧಿಯಲ್ಲಿ ಗಲಾತ್ಯದಲ್ಲಿ ಸಭೆಗಳನ್ನು ಸ್ಥಾಪಿಸಿದ್ದನು. ತದನಂತರದಲ್ಲಿ ಯೆಹೂದಿ ಮತದವರು ಸುಳ್ಳುಬೋಧನೆಯೊಂದಿಗೆ ಬಂದು ಇನ್ನೂ ಪರಿಪಕ್ವತೆಗೆ ಬಾರದ ವಿಶ್ವಾಸಿಗಳ ಮನಸ್ಸುಗಳನ್ನು ಗಲಿಬಿಲಿಗೊಳಿಸಿದರು. ಈ ಯೆಹೂದಿ ಮತದವರು ತಮ್ಮನ್ನು ಯೆರೂಸಲೇಮಿನಲ್ಲಿರುವ ಅಪೊಸ್ತಲರನ್ನು ಪ್ರತಿನಿಧಿಸುವವರೆಂಬುದಾಗಿ ಹೇಳಿಕೊಂಡು

ಪೌಲನ ಅಧಿಕಾರವನ್ನು ಪ್ರಶ್ನಿಸಿದರು ಮತ್ತು ಪೌಲನು ಕಾನೂನುಬದ್ಧವಾದ (ನ್ಯಾಯಸಮ್ಮತವಾದ) ಅಪೊಸ್ತಲನಲ್ಲವೆಂಬುದಾಗಿ ಸಭೆಗಳಿಗೆ ಹೇಳಿದರು. ಅನಂತರ ಗಲಾತ್ಯ ಪತ್ರಿಕೆಯಲ್ಲಿ ಪೌಲನು ತಾನು ಹೇಗೆ ನ್ಯಾಯಸಮ್ಮತವಾದ ಅಪೊಸ್ತಲನಾದನೆಂಬುದನ್ನು ಮತ್ತು ತನ್ನ ಅಧಿಕಾರದ ಮೂಲವನ್ನು ಕುರಿತು ವಿವರವಾಗಿ ವರ್ಣಿಸುತ್ತಾನೆ.

2. ಪೀಠಿಕೆಯ/ ಪರಿಚಯಾತ್ಮಕ ವಚನಗಳಿಂದ "ರಕ್ಷಣೆಯ ಕುರಿತ ಪೌಲನ ದೈವಶಾಸ್ತ್ರ" ದ ಕುರಿತು ನಾವು ಈ ಮುಕ್ತಾಯ (ಸಾರಂಶ/ ತೀರ್ಮಾನ) ಗಳನ್ನು ಹೊರತರಬಹುದು/ ಬರಬಹುದು:
   - ಈ ಪುಸ್ತಕ ದುಷ್ಟಯುಗದೊಳಗಿಂತ/ ಕೆಟ್ಟ ಲೋಕದೊಳಗಿಂದ ಮನುಷ್ಯನನ್ನು ರಕ್ಷಣೆ ಮಾಡುವುದು ದೇವರ ಚಿತ್ತ ಮತ್ತು ಯೋಜನೆಯಾಗಿದೆ.
   - ಯೇಸುಕ್ರಿಸ್ತನು, ಆತನ ಯಜ್ಞರೂಪದ ಮರಣ ಮತ್ತು ಆತನ ಪುನರುತ್ಥಾನದ ಮೂಲಕ ರಕ್ಷಣೆಯನ್ನು ಹೊಂದಬಹುದಾಗಿದೆ.
3. ಪೀಠಿಕೆಯ ವಚನಗಳಿಂದ ಕ್ರೈಸ್ತೀಯ ಜೀವನ ಶೈಲಿಯ ಬಗ್ಗೆ ನಾವು ಈ ಮುಕ್ತಾಯಕ್ಕೆ ಬರಬಹುದು: ಈ ಪ್ರಸಕ್ತ ಯುಗವು ಕೆಟ್ಟದ್ದಾಗಿದೆ. ಹಾಗಾಗಿ ನಾವು ಇದರೊಳಗಿಂದ ಕೇವಲ ಬಿಡಿಸಿಕೊಳ್ಳುವುದು ಅಥವಾ ರಕ್ಷಿಸಲ್ಪಡುವುದು ಮಾತ್ರವಲ್ಲದೇ, ದೇವರ ಚಿತ್ತಾನುಸಾರವಾಗಿ ನಾವು ಇದರಲ್ಲಿ ಜೀವಿಸಬೇಕಾಗಿದೆ. ತದನಂತರ ಗಲಾತ್ಯದಲ್ಲಿ ಪೌಲನು ಈ ಲೋಕದಲ್ಲಿ ಒಂದು ಪರಿಶುದ್ಧವಾದ ಕ್ರೈಸ್ತೀಯ ಜೀವಿತವನ್ನು ನಡೆಸಲು ಹೇಗೆ ಸಾಧ್ಯ ಎಂಬುದನ್ನು ವಿವರಿಸುತ್ತಾನೆ.

# ಉತ್ತರಗಳು 4: ಕೇವಲ ಒಂದೇ ಸುವಾರ್ತೆ (1:6-10)

## ಪ್ರಶ್ನೆಗಳಿಗೆ ಉತ್ತರಗಳು

1. ಪೌಲ ಮತ್ತು ಗಲಾತ್ಯ ವಿಶ್ವಾಸಿಗಳ ನಡುವಿನ ಪ್ರಾರಂಭಿಕ ಸಂಬಂಧದ ಕುರಿತು ನಾವು ಈ ಸಂಗತಿಗಳನ್ನು ತಿಳಿದುಕೊಳ್ಳಬಹುದು:

   - ಗಲಾತ್ಯದವರಿಗೆ ತಾನು ಪತ್ರಿಕೆಯನ್ನು ಬರೆಯುವದಕ್ಕಿಂತ ಮೊದಲು ಹೆಚ್ಚುಕಡಿಮೆ ಒಂದುಬಾರಿ ಆತನು ಅವರನ್ನು ಸಂಧಿಸಿದ್ದನು: ಆತನು ಅವರ ಪಟ್ಟಣಗಳನ್ನು ಸಂಧಿಸಿ, ಅವರಿಗೆ ಸುವಾರ್ತೆಯನ್ನು ಸಾರಿ, ಅವರ ಮಧ್ಯೆ ಸಭೆಗಳನ್ನು ಸ್ಥಾಪಿಸಿದ್ದನು. ಅನಂತರ ಆತನು "ಬೇರೊಂದು ಸುವಾರ್ತೆ" ಯನ್ನು ಸಾರುವುದರ ಮೂಲಕ ಬೆಂಬಲಿಗರನ್ನು ಆಕರ್ಷಿಸಿದ ಸಂಚಾರೀ ಬೋಧಕರುಗಳಿಗೆ ಕಿವಿಗೊಡದೆ ದೃಢವಾಗಿರಬೇಕೆಂದು ಅವರನ್ನು ಉತ್ತೇಜಿಸುವುದಕ್ಕಾಗಿ ಬಹುಶಃ ಎರಡನೇ ಬಾರಿಗೆ ಅವರನ್ನು ಸಂಧಿಸಿರಬಹುದು. ಅಂತಹ ಬೋಧಕರುಗಳು ದೇವರ ತೀರ್ಪಿನೊಳಗಾಗಿ ದಂಡಿಸಲ್ಪಡುವರು (ವ. 9).

   - ಗಲಾತ್ಯದವರ ನಡುವಿನ ತನ್ನ ಸೇವೆಯಲ್ಲಿ ಪೌಲನು ಯಥಾರ್ಥನಾಗಿದ್ದನು. ಕ್ರಿಸ್ತನ ಮೂಲಕ ಇರುವ ದೇವರ ಕೃಪೆಯ ಕುರಿತಾದ ಸುವಾರ್ತಾ ಸಂದೇಶಕ್ಕೆ ಆತನು ನಂಬಿಗಸ್ತನಾಗಿದ್ದನು (ವ. 6). ತನ್ನ ಕೇಳುಗರು ಬಯಸಿದ ಸುವಾರ್ತೆಯನ್ನು ಕೊಟ್ಟು ಜನರನ್ನು ಮೆಚ್ಚಿಸಲು ಆತನು ಪ್ರಯತ್ನಿಸಲಿಲ್ಲ. ನಿಜವಾದ ಸುವಾರ್ತೆಯನ್ನು ಬಿಟ್ಟು ವಿರೂಪದ/ ಬೇರೆ ವಿಧದ ಸುವಾರ್ತೆಗೆ ಅವರು ಪ್ರಾಮುಖ್ಯತೆಯನ್ನು ಕೊಟ್ಟರು (ವ. 7).

2. ಅವರ ಮಧ್ಯೆ ಸೇವೆ ಮಾಡಿದಂದಿನಿಂದ ಗಲಾತ್ಯದವರ ನಂಬಿಕೆಯ ಕುರಿತ ಪೌಲನ ವರ್ಣನೆ/ ವಿವರಣೆ: ಅದು ಸ್ಥಿರವಾಗಿರಲಿಲ್ಲ. ಪೌಲನು ಅವರನ್ನು ಬಿಟ್ಟುಹೋದ ಕೂಡಲೇ ಅವರು ರಕ್ಷಣೆಗಾಗಿ ಕೃಪೆಯಿಂದ ತಮ್ಮನ್ನು ಕರೆದ ಕ್ರಿಸ್ತನನ್ನು ಬಿಟ್ಟುಬಿಟ್ಟರು. ಬಹಳ ಉತ್ತೇಜಕವಾದದ್ದು ಮತ್ತು ಸವಾಲಿನದ್ದು ಎಂಬುದಾಗಿ ಅವರು ಕಂಡುಕೊಂಡ "ಬೇರೆ/ ವಿಭಿನ್ನ ಸುವಾರ್ತೆ" ಯ ಶೋಧನೆಗಳನ್ನು ತಡೆದುಕೊಳ್ಳಲು ಅವರ ನಂಬಿಕೆಯು ಸಾಕಷ್ಟು ಬಲಿಷ್ಠವಾಗಿರಲಿಲ್ಲ (ವ. 6).

3. "ಬೇರೆ ಸುವಾರ್ತೆ" ಮತ್ತು ಅದನ್ನು ಸಾರಿದವರ ಕುರಿತು ಪೌಲನ ವಿವರಣೆ/ ವರ್ಣನೆ:

   - ಅದೊಂದು ದುರುಪಯೋಗಪಡಿಸಿಕೊಂಡ ಸುವಾರ್ತೆಯಾಗಿತ್ತು. ಖಂಡಿತವಾಗಿಯೂ ಅದು ಸುವಾರ್ತೆಯೇ ಆಗಿರಲಿಲ್ಲ. ಕೇವಲ ಪೌಲನು ಅವರಿಗೆ ಸಾರಿದ ಸುವಾರ್ತೆ ಮಾತ್ರವೇ ನಿಜವಾದ ಸುವಾರ್ತೆಯಾಗಿದೆ. "ಸುವಾರ್ತೆ" ಎಂದು ಕರೆಯಲ್ಪಡುವ ಬೇರೆ ಯಾವುದನ್ನೂ ಒಪ್ಪುವುದು, ಕ್ರಿಸ್ತನನ್ನು ಬಿಟ್ಟುಹೋಗುವುದು ಮತ್ತು ಆತನ ಕೃಪೆಯನ್ನು ತಿರಸ್ಕರಿಸುವುದಾಗಿದೆ.

   - ಸುಳ್ಳು ಬೋಧಕರುಗಳು ಶಾಪಗ್ರಸ್ತರಾಗಿದ್ದಾರೆ. ಇರುವುದು ಒಂದೇ ಸುವಾರ್ತೆ ಮಾತ್ರ ಎಂಬುದನ್ನು ಗಲಾತ್ಯದವರಿಗೆ ಸ್ಪಷ್ಟಪಡಿಸಲು ಪೌಲನು ಈ ಬಲವಾದ ಹೇಳಿಕೆಯನ್ನುಪಯೋಗಿಸುತ್ತಾನೆ. "ಸುವಾರ್ತೆ" ಎಂದು ಕರೆದರೂ ಸಹ ಅದನ್ನು ಸಾರುವವರು ಮತ್ತು ನಂಬುವವರು ಯೇಸುಕ್ರಿಸ್ತನ ಮೂಲಕ ಸಿಗುವ ದೇವರ ರಕ್ಷಣಾ ಕೃಪೆಯನ್ನು ಒಪ್ಪಿಕೊಳ್ಳದಿರುವುದರಿಂದ ಅವರು ಖಂಡನೆಗೊಳಗಾದವರಾಗಿದ್ದಾರೆ/ ಶಾಪಗ್ರಸ್ತರಾಗಿದ್ದಾರೆ.

4. ಈ ವಾಕ್ಯಭಾಗದ ಕೊನೆಯಲ್ಲಿ ಪೌಲನು ತನ್ನ ಸೇವೆಯಲ್ಲಿ ಮನುಷ್ಯರನ್ನು ಮೆಚ್ಚಿಸುವ ಮತ್ತು ಯೇಸುಕ್ರಿಸ್ತನ ಒಬ್ಬ ಸೇವಕನಾಗಿರುವುದರ ನಡುವೆ ತಾನೊಂದು ಹೋರಾಟವನ್ನು ಎದುರಿಸುತ್ತೇನೆಂದು ತಿಳಿಸುತ್ತಾನೆ. ಕ್ರಿಸ್ತನ ಒಬ್ಬ ನಿಜವಾದ ಮತ್ತು ಪ್ರಾಮಾಣಿಕ ಸೇವಕನು ಸುವಾರ್ತೆಗೆ ನಂಬಿಗಸ್ತನಾಗಿರಬೇಕು. ಜನರನ್ನು ಸಂತೋಷಗೊಳಿಸುವ ಸಲುವಾಗಿ ಸುವಾರ್ತೆ ಸತ್ಯವನ್ನು ಎಂದಿಗೂ ಸಹ ಆತನು ಹೊಂದಾಣಿಕೆ ಮಾಡಿಕೊಳ್ಳಲೇಬಾರದು. ಹಿಂಬಾಲಕರನ್ನು ಆಕರ್ಷಿಸಲು ಬಯಸುವ ಒಬ್ಬ ಬೋಧಕ

(ಪ್ರಸಂಗಿ) ನು ತನ್ನ ಸಂದೇಶವನ್ನು ಹೊಂದಿಸುವ ಶೋಧನೆ/ ಮೋಹಕ್ಕೆ ಒಳಗಾಗುವನು. ಆದರೆ ಪೌಲನು ಮನುಷ್ಯರನ್ನು ಸೇವಿಸದೆ ಕ್ರಿಸ್ತನ ಸೇವೆ ಮಾಡಲು ಬಯಸುತ್ತಾನೆ.

## ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಪೌಲನ ಶಾಪ: ಸುಳ್ಳು ಬೋಧಕರನ್ನು ಅಥವಾ ಯಾರನ್ನೇ ಆಗಲಿ ಶಪಿಸುವ ಅಧಿಕಾರವನ್ನು ಒಬ್ಬ ದೇವರ ಸೇವಕನು ಹೊಂದಿದ್ದಾನೆಂಬುದನ್ನು ನಾನೆಣಿಸುವುದಿಲ್ಲ. ಹಾಗಾಗಿ ನಾವು ಗಲಾತ್ಯ 1:8-9 ರಲ್ಲಿನ ಪೌಲನ ಮಾತುಗಳನ್ನು ಈ ರೀತಿಯಾಗಿ ಅರ್ಥೈಸಿಕೊಳ್ಳಬಾರದು, "ಈ ಮೂಲಕ ನಾನು ಎಲ್ಲಾ ಸುಳ್ಳುಬೋಧಕರ ಮೇಲೆ ಒಂದು ಶಾಪವನ್ನಿಡುತ್ತೇವೆ!". ಗಲಾತ್ಯ ಸಭೆಗಳಲ್ಲಿ ನಡೆದ ಸಂಗತಿಗಳ ಬಗ್ಗೆ ಪೌಲನು ನಿಜವಾಗಲೂ ಅಸಮಧಾನಗೊಂಡಿದ್ದಾನೆ. ಹಾಗಾಗಿ ತಳಮಳದ ಮಾತು ಏರಿತ್ತು ಭಾವನೆಗಳೊಂದಿಗೆ ಆತನು ಒಂದು ಆತ್ಮೀಕ ವಾಸ್ತವಾಂಶ/ ಸತ್ಯವನ್ನು ಹೇಳುತ್ತಾನೆ: ಸುಳ್ಳು ಸುವಾರ್ತೆಯನ್ನು ಸಾರುವವರು ಮತ್ತು ನಂಬುವವರು ಯೇಸುಕ್ರಿಸ್ತನ ಮೇಲಣ ನಂಬಿಕೆಯ ಮೂಲಕ ಸಿಗುವ ದೇವರ ಕೃಪಾರಕ್ಷಣೆಯ ನಿಜವಾದ ಸುವಾರ್ತೆಯನ್ನು ಒಪ್ಪದವರು/ ಅಂಗೀಕರಿಸದವರಾಗಿದ್ದಾರೆ. ಪರಿಣಾಮವಾಗಿ ಅವರು ದೇವಜನರಿಗೆ ಸೇರದವರಾಗಿದ್ದಾರೆ. ಮತ್ತು ಪರಿಣಾಮವಾಗಿ ದೇವರ ನ್ಯಾಯತೀರ್ಪನ್ನು ಎದುರಿಸುವಾಗ ಅವರು ಖಂಡಿಸಲ್ಪಡುವರು. ಪೌಲನ ಮಾತುಗಳನ್ನು ಈ ರೀತಿಯಲ್ಲೂ ಹೇಳಬಹುದು: "ಸುಳ್ಳು ಬೋಧಕನೇ ನಿನ್ನ ಮೇಲೆ ಶಾಪವಿದೆ".
2. ದಕ್ಷಿಣ ಭಾರತದಲ್ಲಿರುವ ಹೆಚ್ಚಿನ ಸುವಾರ್ತಾ ಸೇವಕರು ಪೌಲನು ತನ್ನ ಸೇವೆಯಲ್ಲಿ ಎದುರಿಸಿದಂತೆಯೇ ಹೋರಾಟ/ ಸಂಘರ್ಷವನ್ನು ಎದುರಿಸಿದ್ದಾರೆಂಬುದಾಗಿ ನಾನು ಯೋಚಿಸುತ್ತೇವೆ (ವ. 10). ಖಂಡಿತವಾಗಿ ನಿಜವಾಗಲೂ ದೇವರ ವಾಕ್ಯವನ್ನು ತಿಳಿದುಕೊಳ್ಳುವಂತೆ ಕೇಳುವವರಿಗೆ ನಮ್ಮ ಸಂದೇಶವನ್ನು ಹೊಂದಿಕೊಳ್ಳುವಂತೆ ಮಾಡುವ ಅವಶ್ಯಕತೆಯಿದೆ. ಆದರೆ ಕೇಳುಗರನ್ನೇ ಅತಿಯಾಗಿ ಮೆಚ್ಚಿಸುವಂತಾಗುವಂತೆ ಸುವಾರ್ತಾ ಸಂದೇಶವನ್ನು ಹೊಂದಿಸುವ/ ಮಾರ್ಪಡಿಸುವ ಅಥವಾ ಬದಲಾಯಿಸುವ ಶೋಧನೆಗೆ ಒಳಗಾಗಬಾರದು. ನಾವು ಹಿಂಬಾಲಕರನ್ನು ಮತ್ತು ಬೆಂಬಲಿಗರನ್ನು ಹೊಂದಿದ್ದೇವೆ. ಆದರೆ ಈ ಹಿಂಬಾಲಕರು ಮತ್ತು ಬೆಂಬಲಿಗರು ನಮ್ಮ ಕರ್ತನೂ ರಕ್ಷಕನೂ ಆಗಿರುವ ತನ್ನ ಮಗನಾದ ಯೇಸುಕ್ರಿಸ್ತನ ಬಾಧೆ, ಶಿಲುಬೆಗೆ ಹಾಕಲ್ಪಡುವಿಕೆ, ಮರಣ ಮತ್ತು ಪುನರುತ್ಥಾನದ ಮೂಲಕ ತಂದೆಯಾದ ದೇವರ ಕೃಪೆ ಮತ್ತು ಕರುಣೆಯಿಂದಾಗುವ ರಕ್ಷಣೆಯ ನಿಜವಾದ ಸುವಾರ್ತೆಯನ್ನು ಸಾರುವ ನಮ್ಮ ಫಲವಾಗಿರಬೇಕು.

# ಉತ್ತರಗಳು 5: ಪೌಲನ ಸುವಾರ್ತೆ (1:11-2)

## ಪ್ರಶ್ನೆಗಳಿಗೆ ಉತ್ತರಗಳು

1. ಪೌಲನು ತಾನು ಸಾರಿದ ಸುವಾರ್ತೆಯ ಕುರಿತು ತನ್ನ ಓದುಗರಿಗೆ ಈ ಸಂಗತಿಗಳನ್ನು ಹೇಳುತ್ತಾನೆ (ವ. 11-12):
    - ಇದು ಮನುಷ್ಯರಿಂದ ಬಂದಿದ್ದಲ್ಲ
    - ಆತನಿದನ್ನು ಯಾವ ಮನುಷ್ಯರಿಂದ ಹೊಂದಿಕೊಳ್ಳಲಿಲ್ಲ
    - ಆತನದನ್ನು ಒಂದು ದೈವೀಕ/ ದೇವರ ಪ್ರಕಟಣೆಯಿಂದಲೇ ಹೊಂದಿದನು (ತಂದೆಯಾದ ದೇವರಿಂದ ಅಥವಾ ದೇವರಾದ ಮಗನ ಮೂಲಕ).
2. ತನ್ನ ಮುಂಚಿನ ಮತ್ತು ಯೇಸು ತನಗೆ ಪ್ರಕಟಿಸಿಕೊಂಡ ನಂತರದ ತನ್ನ ಜೀವಿತದ ಬಗ್ಗೆ ಪೌಲನು ಈ ಸಂಗತಿಗಳನ್ನು ಹೇಳುತ್ತಾನೆ (ವ. 13-17):
    - ಆತನೊಬ್ಬ ಯೆಹೂದ್ಯನಾಗಿದ್ದು ಮೋಶೆಯ ಧರ್ಮಶಾಸ್ತ್ರ ಮತ್ತು ಯೆಹೂದಿ ಗುರುಗಳ ಆಚಾರ/ ಸಂಪ್ರದಾಯಗಳನ್ನು ಆಸಕ್ತಿಯಿಂದ ಅನುಸರಿಸುತ್ತಿದ್ದನು (ಒಬ್ಬ ಪ್ರಸಿದ್ಧ ಯೆಹೂದಿ ಗುರುವೂ ಪಂಡಿತನೂ ಒಬ್ಬ ಫರಿಸಾಯನೂ ಮತ್ತು ಯೆಹೂದಿ ಸಭೆಯ ಒಬ್ಬ ಸದಸ್ಯನೂ ಆಗಿರುವ ಗಮಲಿಯೇಲನು ಆತನ ಶಿಕ್ಷಕನಾಗಿದ್ದನು, ಅಪೊ.ಕೃತ್ಯ. 5:34, 22:3.
    - ತನ್ನ ಯೆಹೂದಿ ನಂಬಿಕೆಯನ್ನು ಕಾಪಾಡಿಕೊಳ್ಳುವಲ್ಲಿ ಉಳಿದೆಲ್ಲಾ ಯೌವನಸ್ಥರಿಗಿಂತ ಈತನು ಹೆಚ್ಚು ಉತ್ಸಾಹಭರಿತನಾಗಿದ್ದನು.
    - ಆತನು ಕ್ರೈಸ್ತ ಸಭೆಯನ್ನು ತೀವ್ರವಾಗಿ ಹಿಂಸೆಪಡಿಸಿದನು.
    - ಕ್ರಿಸ್ತನು ಆತನಿಗೆ ಪ್ರಕಟಿಸಿಕೊಂಡಾಗ ಆತನೊಬ್ಬ ವಿಶ್ವಾಸಿಯಾದನು.
    - ತನ್ನ ಪಾಶ್ಚಾತ್ತಾಪದ ನಂತರ ಒಂದು ಉದ್ದೇಶಕ್ಕಾಗಿ ಕ್ರಿಸ್ತನು ತನಗೆ ಪ್ರಕಟಿಸಿಕೊಂಡನು ಮತ್ತು ಈಗಾಗಲೇ ತನ್ನ ಜೀವಿತಕ್ಕಾಗಿ ದೇವರು ಒಂದು ಯೋಜನೆಯನ್ನು ಇಟ್ಟುಕೊಂಡಿದ್ದಾನೆಂಬುದನ್ನು ಅರಿತುಕೊಂಡನು: ಅದು ಅನ್ಯ ಜನರ ಮಧ್ಯೆ ಯೇಸುಕ್ರಿಸ್ತನ ಸುವಾರ್ತೆಯನ್ನು ಸಾರುವುದು.
3. ಪೌಲನ ಪಾಶ್ಚಾತ್ತಾಪ ಮತ್ತು ಪ್ರಾರಂಭಿಕ ಸೇವೆಯ ಕುರಿತು ಕೇಳಿದಾಗ ಯೂದಾಯದಲ್ಲಿ ಯೇಸುವನ್ನು ನಂಬಿದ ಯೆಹೂದ್ಯರು ಬಹಳ ಸಂತೋಷದಿಂದ ಪ್ರತಿಕ್ರಿಯಿಸಿದರು. ಪೌಲನ ಜೀವಿತದಲ್ಲಿನ ಅದ್ಭುತವಾದ ಬದಲಾವಣೆಗಾಗಿ ಅವರು ದೇವರನ್ನು ಮಹಿಮೆಪಡಿಸಿದರು – ಈ ಹಿಂದೆ ವಿಶ್ವಾಸಿಗಳನ್ನು ಹಿಂಸಿಸುತ್ತಿದ್ದವನು ಈಗ ಕ್ರೈಸ್ತ ನಂಬಿಕೆಯನ್ನು ಸಾರುವವನಾಗಿದ್ದನು!

## ಆಲೋಚಿರಿ ಮತ್ತು ಚರ್ಚಿಸಿರಿ ಮೇಲಿನ ಟಿಪ್ಪಣಿಗಳು

1. ಪೌಲನು ಒಂದು ದೈವೀಕ ಪ್ರಕಟಣೆಯ ಮೂಲಕ ಸುವಾರ್ತೆಯನ್ನು ಹೊಂದಿಕೊಂಡನು. ನಾವು ಪೌಲನೊಂದಿಗೆ ನಮ್ಮನ್ನು ಹೋಲಿಸಿಕೊಳ್ಳಲಾಗದು. ನಾವು ಸುವಾರ್ತೆಯನ್ನು ಸಾರುವುದಕ್ಕಿಂತ ಮೊದಲು/ ಮುಂಚೆ ಒಂದು ದೈವೀಕ ಪ್ರಕಟಣೆಯನ್ನು

ಹೊಂದಲು ಬಯಸಬೇಕೆಂಬುದಾಗಿ ನಾನು ಯೋಚಿಸುವುದಿಲ್ಲ. ನಾವು ಸಾರುವ ಸುವಾರ್ತೆಯು ಈಗಾಗಲೇ ಪ್ರಕಟಿಸಲ್ಪಟ್ಟದ್ದಾಗಿದೆ. ನಾವದನ್ನು ಹೊಸ ಒಡಂಬಡಿಕೆಯ ಪತ್ರಗಳಲ್ಲಿ ಕಾಣುತ್ತೇವೆ. ಈ ಪತ್ರಗಳು ದೇವರಾದುಕೊಂಡ ಜನರಿಂದ ಬರೆಯಲ್ಪಟ್ಟು, ಅವು ಪವಿತ್ರಾತ್ಮನಿಂದ ಪ್ರೇರೇಪಿಸಲ್ಪಟ್ಟಿವೆ. ಅಂತಹ ವ್ಯಕ್ತಿಗಳಲ್ಲಿ ಪೌಲನೂ ಒಬ್ಬನಾಗಿದ್ದನು. ಅವರು ಬರೆದದ್ದು ಸಾಕಷ್ಟು ಮತ್ತು ಸಂಪೂರ್ಣವೂ ಆಗಿದೆ. ಯಾವುದೂ ಒಂದು ದೈವೀಕ (ದೇವರ) ಪ್ರಕಟಣೆ ಸಹ ಹೊಸ ಒಡಂಬಡಿಕೆಯಲ್ಲಿ ದಾಖಲಾದ ಸುವಾರ್ತೆಗೆ ಏನನ್ನೂ ಸೇರಿಸಲಾಗದು.

2. ಯೆರೂಸಲೇಮು ಮತ್ತು ಯೂದಾಯದೊಂದಿಗಿನ ತನ್ನ ಪ್ರಾಥಮಿಕ ಸಂಪರ್ಕವನ್ನು ವಿವರಿಸುವಾಗ ಪೌಲನು ಹೇಳುವ ಅಂಶವೇನು (ವ. 17-23): ಖಂಡಿತವಾಗಿ ಆತನು ತನ್ನ ಸುವಾರ್ತೆಯನ್ನು ಯೆರೂಸಲೇಮಿನಲ್ಲಿನ ಅಪೊಸ್ತಲರಿಂದ ಅಥವಾ ಯೂದಾಯದಲ್ಲಿನ ಯಾವುದೇ ವ್ಯಕ್ತಿಯಿಂದ ಪಡೆದುಕೊಳ್ಳಲಿಲ್ಲ. ಆತನ ಸುವಾರ್ತೆಯು ದೇವರಿಂದಲೇ ಬಂದದ್ದಾಗಿದೆ.

3. ಪೌಲನು ಕ್ರಿಸ್ತನಲ್ಲಿ ಒಬ್ಬ ವಿಶ್ವಾಸಿಯಾದ ನಂತರದ ಆತನ ಜೀವನದ ಕುರಿತು ಹೊಸ ಒಡಂಬಡಿಕೆಯ ವಿವಿಧ ವಾಕ್ಯಭಾಗಗಳು ಹೇಗೆ ಪರಸ್ಪರ ಹೊಂದಿಕೊಳ್ಳುತ್ತವೆಂಬುದನ್ನು ತಿಳಿದುಕೊಳ್ಳಲು ಸತ್ಯವೇದ ಪಂಡಿತರು ಕಷ್ಟಪಡುತ್ತಾರೆ (ಅಪೊಸ್ತಲರ ಕೃತ್ಯಗಳು 9:18-30, 22:1-21, ಗಲಾತ್ಯ 1:13-24). ನನ್ನಲ್ಲಿ ಎರಡು ಮುಖ್ಯ ಟಿಪ್ಪಣಿಗಳಿವೆ:

   - ಮೂರು ವಾಕ್ಯಭಾಗಗಳ ನಡುವಿನ ವಿವರಗಳು ವ್ಯತ್ಯಾಸಕರವಾಗಿವೆ. ಏನಾಯಿತೆಂಬುದರ ಕುರಿತು ಅಪೊಸ್ತಲರ ಕೃತ್ಯವಾಗಲೀ, ಗಲಾತ್ಯ ಪತ್ರಿಕೆಯಾಗಲೀ ಒಂದು ಸಂಪೂರ್ಣ ಚಿತ್ರಣವನ್ನು ಕೊಡುವುದಿಲ್ಲ. ಲೂಕನು ಪ್ರತಿಯೊಂದು ಘಟನೆಯನ್ನು ದಾಖಲಿಸದೆ ಕೇವಲ ಅಪೊಸ್ತಲರ ಕೃತ್ಯದಲ್ಲಿನ ತನ್ನ ನಿರೂಪಣೆಗೆ ಸರಿಹೊಂದುವ/ ಹೊಂದಿಕೆಯಾಗುವ ಘಟನೆಗಳನ್ನು ಮಾತ್ರ ದಾಖಲಿಸುತ್ತಾನೆ. ಪೌಲನು ಪ್ರತಿಯೊಂದು ಘಟನೆಯನ್ನು ದಾಖಲಿಸದೆ ತನ್ನ ಸುವಾರ್ತೆಯ ಮೂಲದ ಕುರಿತ ತನ್ನ ವಾದಕ್ಕೆ ಹೊಂದಿಕೆಯಾಗುವ ಘಟನೆಗಳನ್ನು ಮಾತ್ರ ದಾಖಲಿಸುತ್ತಾನೆ.

   - ಹಾಗಾಗಿ ವ್ಯತ್ಯಾಸಗಳು ಪ್ರತಿಯೊಂದು ವಾಕ್ಯಭಾಗದ ಸಂದರ್ಭ/ ಹಿನ್ನಲೆ ಮತ್ತು ದೃಷ್ಟಿಕೋನದೊಂದಿಗಿರುವುದಾಗಿದೆ. ಗಲಾತ್ಯ ಪತ್ರಿಕೆಯಲ್ಲಿನ ಪೌಲನ ದೃಷ್ಟಿಕೋನವು ತಾನು ಸಾರುವ ಸುವಾರ್ತೆಯು ಯಾವುದೇ ಮನುಷ್ಯರಿಂದ ಬಂದದ್ದಲ್ಲ ಮತ್ತು ಖಂಡಿತವಾಗಿಯೂ ಆತನದನ್ನು ಯೆರೂಸಲೇಮಿನಲ್ಲಿನ ಅಪೊಸ್ತಲರಿಂದಾಗಲೀ ಅಥವಾ ಯಾವುದೇ ಯೆಹೂದಿ ವಿಶ್ವಾಸಿಯಿಂದಾಗಲೀ ಪಡೆದುಕೊಳ್ಳಲಿಲ್ಲ ಎಂಬುದನ್ನು ಸಾಬೀತುಪಡಿಸುವುದಾಗಿದೆ. ಅಪೊಸ್ತಲರ ಕೃತ್ಯಗಳು 9 ನೇ ಅಧ್ಯಾಯದಲ್ಲಿರುವ ಲೂಕನ ದೃಷ್ಟಿಕೋನವು ಪೌಲನ ನಾಟಕೀಯ ಅನುಭವ ಮತ್ತು ಒಬ್ಬ ಮತಾಂಧ ಹಿಂಸಕನು ಒಬ್ಬ ದಾಹವುಳ್ಳ ಸುವಾರ್ತಿಕ ಮತ್ತು ಸುವಾರ್ತಾ ಪ್ರಚಾರಕನಾಗಿ ಮಾರ್ಪಟ್ಟ ಬದಲಾವಣೆಯಾಗಿದೆ (ಉದಾಹರಣೆಗೆ ವ. 13-16, 20-21, 22, 27-29 ನ್ನು ನೋಡಿರಿ). ಈ ದೃಷ್ಟಿಕೋನವು ಅಪೊಸ್ತಲರ ಕೃತ್ಯಗಳು 22 ರಲ್ಲಿನ್ನ ಪೌಲನ ಸಾಕ್ಷಿಯಲ್ಲಿ ಬಲಪಟ್ಟಿದೆ (ಉದಾಹರಣೆಗೆ ವ. 4, 14-15, 18-21 ನ್ನು ನೋಡಿರಿ).

# ಉತ್ತರಗಳು 6: ಪೌಲ ಮತ್ತು ಅಪೊಸ್ತಲರು (2:1-10)

## ಪ್ರಶ್ನೆಗಳಿಗೆ ಉತ್ತರಗಳು

1. ಪೌಲನು ಹದಿನಾಲ್ಕು ವರ್ಷಗಳ ನಂತರ ಪುನಃ ಯೆರೂಸಲೇಮಿಗೆ ಭೇಟಿಕೊಡುತ್ತಾನೆ. ಯಾಕೆಂದರೆ ಒಮ್ಮೆಲೇ ತಾನು ಸಾರುವ ಸುವಾರ್ತೆಯ ಸಿಂಧುತ್ವದ ಕುರಿತ ಸಮಸ್ಯೆಯನ್ನು ಪರಿಹರಿಸುವುದಕ್ಕೆ ದೇವರು ಆತನಿಗೆ ಹೇಳಿರಬೇಕು. ನಾವಿದನ್ನು ತಿಳಿದುಕೊಳ್ಳುತ್ತೇವೆ: 1. ಆತನು ಸೂಚಿಸುವ ಪ್ರಕಟಣೆಯು (ವ. 1) ಹೆಚ್ಚಾಗಿ ದೇವರಿಂದಲೇ ಬಂದಿರಬೇಕು ಮತ್ತು, 2. ಭೇಟಿಯ ವಿಷಯವು "ಅನ್ಯಜನರ ಮಧ್ಯದಲ್ಲಿ ಆತನು ಸಾರಿದ ಸುವಾರ್ತೆಯಾಗಿತ್ತು" (ವ. 2).
2. ಯೆರೂಸಲೇಮಿನಲ್ಲಿ ಪೌಲನು "ಸಭಾ ಸ್ತಂಭಗಳನ್ನು" ಸಂಧಿಸುತ್ತಾನೆ (ಮುಖ್ಯ ಸಭಾ ನಾಯಕರುಗಳಾದ ಯಾಕೋಬ, ಪೇತ್ರ ಮತ್ತು ಯೋಹಾನನನ್ನು ಸೂಚಿಸಿ). ಅನ್ಯಜನರ ನಡುವೆ ತನ್ನ ಸೇವೆಯ ಕುರಿತಾಗಿ ಆತನು ಅವರಿಗೆ ಹೇಳಿದನು.
3. ತಾನು "ಸುಳ್ಳು ಸಹೋದರರನ್ನು" ನಿಭಾಹಿಸಿದ ರೀತಿಯಲ್ಲಿ ಪೌಲನು ಸ್ಥಿರತೆಯುಳ್ಳವನಾಗಿದ್ದಾನೆ: ಆತನು ಅವರ ಯಾವುದೇ ವಾದಗಳಿಗೆ ಬಿಟ್ಟುಕೊಡಲಿಲ್ಲ. ತಾನು ಅನ್ಯಜನರ ನಡುವೆ ಸಾರುತ್ತಿರುವ ಸುವಾರ್ತೆಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಆತನು ನಿರಾಕರಿಸಿದ್ದೇ ಆತನ ಈ ಸ್ವಭಾವಕ್ಕೆ ಕಾರಣವಾಗಿದೆ (ವ. 5).
4. ಅಪೊಸ್ತಲರೊಂದಿಗಿನ ಪೌಲನ ಭೇಟಿಯ ತೀರ್ಮಾನ/ ಮುಖ್ಯಾಂಶಗಳು: ಪೌಲನು ಅನ್ಯಜನರ ಮಧ್ಯೆ ಸಾರಿದ ಸುವಾರ್ತೆಯೇ ನಿಜವಾದ ಸುವಾರ್ತೆಯಾಗಿದೆ ಎಂಬುದನ್ನು ಅಪೊಸ್ತಲರು ಅರಿತುಕೊಂಡರು. ಯೆಹೂದ್ಯರ ಮಧ್ಯೆ ಸೇವೆ ಮಾಡುವುದಕ್ಕಾಗಿ ಆತನು ಪೇತ್ರನನ್ನು ಅಭಿಷೇಕಿಸಿದಂತೆಯೇ ಅನ್ಯಜನರಿಗೆ ಸೇವೆ ಮಾಡಲು ಪೌಲನನ್ನು ಅಭಿಷೇಕಿಸಿದನೆಂಬುದನ್ನು ಸಹ ಅವರು ಅರಿತುಕೊಂಡರು (ವ. 7-8). ಅನಂತರ ತಾವೊಂದು ಒಪ್ಪಂದಕ್ಕೆ ಬಂದು, ತಾವೆಲ್ಲರೂ ಒಟ್ಟಾಗಿ ಸೇರಿ ದೇವರ ಸೇವೆ ಮಾಡುತ್ತಿದ್ದೇವೆಂಬುದನ್ನು ತೋರಿಸಲು ಅವರೆಲ್ಲರೂ ಕೈಕುಲುಕಿದರು (ವ. 9).
5. ಯೆರೂಸಲೇಮಿನ ನಾಯಕರಲ್ಲಿ ಒಂದು ಮನವಿಯಿತ್ತು: ಆರ್ಥಿಕ (ಹಣಕಾಸಿನ) ಸಹಾಯ (ನೆರವು) ವನ್ನು ಕಳುಹಿಸುವುದರ ಮೂಲಕ ಪೌಲ ಮತ್ತು ಆತನ ಜೊತೆಕೆಲಸದವರು ಯೆರೂಸಲೇಮ್ ಮತ್ತು ಯೂದಾಯದಲ್ಲಿರುವ ಬಡವಿಶ್ವಾಸಿಗಳನ್ನು ನೆನಪುಮಾಡಿಕೊಳ್ಳಬೇಕೆಂದು ಅವರು ಬಯಸಿದರು (ವ. 10).

## ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಪೌಲನ ವಿಷಯ (ಲೆಕ್ಕಾಚಾರ) ದಲ್ಲಿ ತೀತನ ಪಾತ್ರ: ಆತನು "ಪರೀಕ್ಷಾ, ನಿದರ್ಶನ" ವಾಗಿದ್ದಾನೆ. ಒಂದು ವೇಳೆ ಯೆರೂಸಲೇಮಿನಲ್ಲಿನ ಅಪೊಸ್ತಲರು ತೀತನಿಗೆ ಸುನ್ನತಿಯಾಗಬೇಕೆಂದು ಅಗ್ರಹಿಸದಿದ್ದರೆ (ಆತನೊಬ್ಬ ಗ್ರೀಕನಾಗಿದ್ದು ಈ ಹಿಂದೆ ಸುನ್ನತಿ ಮಾಡಿಸಿಕೊಂಡಿರಲಿಲ್ಲ), "ತನ್ನ ಸುವಾರ್ತೆ" ಕುರಿತು ಪೌಲನು ಹೇಳುವುದು ಸರಿಯಾಗಿದೆ.
2. ಪೌಲನು ನಿಜವಾದ ಒಂದು ಸುವಾರ್ತೆಯನ್ನು ಸಾರಿದ ಒಬ್ಬ ನಿಜವಾದ ಅಪೊಸ್ತಲನಾಗಿದ್ದನೆಂಬುದನ್ನು ಪೌಲನ ಪತ್ರಿಕೆಯ ಸ್ವೀಕೃತರಿಗೆ ಈ ಪತ್ರಿಕೆಯು ಮನವರಿಕೆ ಮಾಡಬಲ್ಲದು: ಪೇತ್ರನ ಹಾಗೆಯೇ ಘನತೆಯುಳ್ಳದ್ದಾಗಿರುವ ಈತನ ಅಪೊಸ್ತಲತನವನ್ನು ಯೆರೂಸಲೇಮಿನಲ್ಲಿನ ಅಪೊಸ್ತಲರು (ಆದಿಸಭೆಯಲ್ಲಿ ಅಂತಿಮ ಅಧಿಕಾರವುಳ್ಳವೆಂದು ಪರಿಗಣಿಸಲಾದವರು) ಒಪ್ಪಿದ್ದರು/ ಅನುಮೋದಿಸಿದ್ದರು. ಯೆಹೂದ್ಯರ ಮಧ್ಯದಲ್ಲಿ ಅಪೊಸ್ತಲನಾಗಿರಲು ಪೇತ್ರನು ದೇವರಿಂದ

ನೇಮಿಸಲ್ಪಟ್ಟಂತೆಯೇ ಅನ್ಯಜನರ ಮಧ್ಯದಲ್ಲಿ ಅಪೊಸ್ತಲನಾಗಿರುವುದಕ್ಕಾಗಿ ಪೌಲನು ದೇವರಿಂದ ನೇಮಿಸಲ್ಪಟ್ಟಿದ್ದನು. ಖಂಡಿತವಾಗಿಯೂ ಪೇತ್ರ ಮತ್ತು ಪೌಲರಿಬ್ಬರೂ ಸಹ ಯೆಹೂದ್ಯರು ಮಾತ್ರವಲ್ಲದೆ ಅನ್ಯಜನರ ಮಧ್ಯೆಯೂ ಸೇವೆ ಮಾಡಿದರು. ಆದರೆ ಅವರ ಮುಖ್ಯ ಗಮನವು ಈ ಗುಂಪುಗಳಲ್ಲಿ ಒಂದರ ಮೇಲಿತ್ತು.

- ಯೆರೂಸಲೇಮಿನಲ್ಲಿನ ಅಪೊಸ್ತಲರು ತೀತನನ್ನು ಸಂಧಿಸಿ ಅನ್ಯರ ನಡುವಿನ ತಮ್ಮ ಸೇವೆಯ ಕುರಿತಾಗಿ ಪೌಲ ಮತ್ತು ಬಾರ್ನಬರು ಕೊಟ್ಟ ವರದಿಯನ್ನು ಕೇಳಿದರು. ಮಾನಸಾಂತರ ಹೊಂದಿರುವವರನ್ನು ಸುನ್ನತಿ ಮಾಡದೆ ಇರುವ ಪೌಲನ ಸೇವಾ ತಂತ್ರವನ್ನು ಅವರು ಅನುಮೋದಿಸಿದರು (ಪೌಲನ ಆಚರಣೆಗೆ ಅವರು ಏನನ್ನೂ ಸೇರಿಸಲಿಲ್ಲ) (ವ. 6). ಹೀಗಾಗಿ ಗಲಾತ್ಯಕ್ಕೆ ಬಂದು ಪೌಲನ ಅಧಿಕಾರವನ್ನು ಪ್ರಶ್ನಿಸುತ್ತಾ ಬೇರೊಂದು ಸುವಾರ್ತೆಯನ್ನು ಸಾರಿದ ಸುಳ್ಳುಬೋಧಕರೇ ತಪ್ಪಾಗಿದ್ದಾರೆ ಮತ್ತು ಯೆರೂಸಲೇಮಿನಲ್ಲಿ ಅಪೊಸ್ತಲರ ಅನುಮೋದನೆಯನ್ನು ಹೊಂದದವರಾಗಿದ್ದಾರೆ.

3. ಗಲಾತ್ಯ 2:10 ಮತ್ತು ಅಪೊಸ್ತಲರ ಕೃತ್ಯಗಳು 15:1-29 ಹೇಗೆ ಪರಸ್ಪರ ಒಂದಕ್ಕೊಂದು ಸಂಬಂಧಿಸುತ್ತವೆಂಬುದನ್ನು ಸತ್ಯವೇದ ಪಂಡಿತರು ಒಪ್ಪುವುದಿಲ್ಲ. ಈ ಪುಸ್ತಕದ ಕೊನೆಯಲ್ಲಿ ನಾನು **ಅನುಬಂಧ: ಯಾರು ಮತ್ತು ಯಾವಾಗ?** ಇದರಲ್ಲಿ ನನ್ನದೇ ತೀರ್ಮಾನಗಳನ್ನು ನಾನು ತಿಳಿಸಿದ್ದೇನೆ. ಗಲಾತ್ಯದವರ ಪತ್ರಿಕೆಯನ್ನು ಪೌಲನು ಯಾವಾಗ ಬರೆದಿರಬಹುದೆಂಬುದರ ಬಗ್ಗೆ ಮಾಹಿತಿಯನ್ನು ಸಹ ನೀವು ಇದರಲ್ಲಿ ಕಾಣುವಿರಿ.

# ಉತ್ತರಗಳು 7: ನಂಬಿಕೆಯಿಂದಲೇ ನೀತಿವಂತರೆಂದು ನಿರ್ಣಯಿಸಲ್ಪಟ್ಟೆವು (2:11-21)

## ಪ್ರಶ್ನೆಗಳಿಗೆ ಉತ್ತರಗಳು

1. ಪೌಲನು ಬಹಿರಂಗವಾಗಿ ಪೇತ್ರನನ್ನು ವಿರೋಧಿಸುತ್ತಾನೆ. ಆದಿಸಭೆಯಲ್ಲಿನ ಪೌಲನ ಸ್ಥಾನವನ್ನು ಪರಿಗಣಿಸಿದರೆ ಹಾಗೆ ಮಾಡುವುದು ಒಂದು ಅಪಾಯಕಾರಿ ಸಂಗತಿಯಾಗಿತ್ತು. ಆದರೆ ಪೌಲನಿಗೆ ಬೇರೆ ಆಯ್ಕೆಯಿರಲಿಲ್ಲ. ಪೇತ್ರನ ಕಪಟತನದ ಪರಿಣಾಮದಿಂದ ಸುವಾರ್ತೆಯ ಸತ್ಯ ಮತ್ತು ಸಭೆಯ ಅನ್ಯೋನ್ಯತೆಗಳು ಅಪಾಯದಲ್ಲಿದ್ದವು. ಅವರ ಯೆಹೂದಿ ಮತ್ತು ಅನ್ಯಹಿನ್ನಲೆಯನ್ನು ಪರಿಗಣಿಸದೆ ಅಂತಿಯೋಕ್ಯದಲ್ಲಿನ ಸಭೆಯ ಎಲ್ಲಾ ಸದಸ್ಯರೊಂದಿಗೆ ಪೇತ್ರನು ಊಟ ಮಾಡಿದನು. ಯೆರೂಸಲೇಮಿನಿಂದ ಅಂತಿಯೋಕ್ಯಕ್ಕೆ ಯೆಹೂದಿ ಮತದವರು ಬಂದ ಕೂಡಲೇ ಅನ್ಯಹಿನ್ನಲೆಯ ವಿಶ್ವಾಸಿಗಳೊಂದಿಗೆ ಊಟ ಮಾಡುವುದನ್ನು ಆತನು ನಿಲ್ಲಿಸಿದನು.
2. ಪೇತ್ರನ ವರ್ತನೆಯು ಬಾರ್ನಬ ಮತ್ತು ಅಂತಿಯೋಕ್ಯದಲ್ಲಿನ ಸಭೆಯ ಯೆಹೂದಿ ಹಿನ್ನಲೆಯ ವಿಶ್ವಾಸಿಗಳ ಮೇಲೆ ಪರಿಣಾಮ ಬೀರಿತು: ಅವರು ಎಂದಿಗೂ ಅನ್ಯ ಹಿನ್ನಲೆಯ ವಿಶ್ವಾಸಿಗಳೊಂದಿಗೆ ಊಟ ಮಾಡಲಿಲ್ಲ.
3. ವಚನ 16 ರಲ್ಲಿ ನೀತಿವಂತರೆಂಬ ನಿರ್ಣಯದ ಕುರಿತು ಪೌಲನು:
   - ನೇಮನಿಷ್ಠೆಗಳಿಂದ ನಾವು ನೀತಿವಂತರೆಂದು ನಿರ್ಣಯಿಸಲ್ಪಡುವುದಿಲ್ಲ!
   - ಯೇಸುಕ್ರಿಸ್ತನ ಮೇಲಣ ನಂಬಿಕೆಯಿಂದ ಮಾತ್ರ ನಾವು ನೀತಿವಂತರೆಂದು ನಿರ್ಣಯಿಸಲ್ಪಡುವೆವು!
4. ವಚನ 19-20 ರಲ್ಲಿ ತನ್ನ ಜೀವಿತದ ಕುರಿತ ಪೌಲನ ವರ್ಣನೆ:
   - ಪೌಲನ ಹಳೇ ಜೀವಿತವು ಸತ್ತು ಹೋಗಿದೆ: ಯೇಸುಕ್ರಿಸ್ತನ ಮೇಲಣ ನಂಬಿಕೆಯ ಮೂಲಕ ಆತನು ನೀತಿವಂತನೆಂದು ನಿರ್ಣಯಿಸಲ್ಪಟ್ಟಾಗ ಧರ್ಮಶಾಸ್ತ್ರವನ್ನು ಅನುಸರಿಸುವ ಆತನ ಹಳೆಯ ಜೀವಿತವು ಸತ್ತುಹೋಯಿತು, ಅದು ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಲ್ಪಟ್ಟಿತು.
   - ಪೌಲನ ನೂತನ/ ಹೊಸ ಜೀವಿತವು ಕ್ರಿಸ್ತನು ಆತನಲ್ಲಿ ಜೀವಿಸುವುದಾಗಿದೆ: ಆತನ ಹೊಸ ಜೀವಿತವು ದೇವರಿಗಾಗಿನ ಒಂದು ಜೀವಿತವಾಗಿದೆ. ಈ ಲೋಕದಲ್ಲಿನ ಪೌಲನ ಜೀವಿತವು ದೇವಕುಮಾರನ ಮೇಲಣ ನಂಬಿಕೆಯಿಂದ ಜೀವಿಸುವುದಾಗಿದೆ.
5. ನೇಮನಿಷ್ಠೆಗಳಿಂದ ನೀತಿನಿರ್ಣಯವುಂಟಾಗುವುದಾದರೆ ಯೇಸುಕ್ರಿಸ್ತನು ಮರಣ ಹೊಂದುವ ಅಗತ್ಯವೇ ಇರಲಿಲ್ಲವೆಂಬುದಾಗಿ ಪೌಲನು ಹೇಳುತ್ತಾನೆ (ಅದು ದೇವರ ಕೃಪಾಕಾರ್ಯ). ಹೀಗಾಗಿ ಕರ್ಮಮಾರ್ಗದಿಂದ ನೀತಿನಿರ್ಣಯವೆಂದು ಬೋಧಿಸುವುದು "ದೇವರ ಕೃಪೆಯನ್ನು ನಿರರ್ಥಕಮಾಡುವುದಾಗಿದೆ" ಅಥವಾ "ದೇವರ ಕೃಪೆಯನ್ನು ತಿರಸ್ಕರಿಸುವುದಾಗಿದೆ" (ವ. 21).

## ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಪೇತ್ರನ ಕಪಟತನವನ್ನು ವಿಶ್ವಾಸಿಗಳ ಅನ್ಯೋನ್ಯತೆಗೆ ಒಂದು ಸ್ಪಷ್ಟವಾದ ಮತ್ತು ಗೋಚರವಾದ ಬೆದರಿಕೆಯನ್ನಾಗಿಸಿದ ಸಭಾಜೀವಿತದಲ್ಲಿನ ಸಂದರ್ಭವೇನೆಂದರೆ – ಭಾನುವಾರದಲ್ಲಿ ವಾರದ ಆರಾಧನಾ ಕೂಟಕ್ಕಾಗಿ ಸಭೆ ಸೇರುವಾಗ ಆಚರಿಸುವ ಕರ್ತನ ಭೋಜನದ ಸಂಬಂಧ ಕಲ್ಪಿಸುವ ಅನ್ಯೋನ್ಯತೆಯ ಭೋಜನವಾಗಿದೆ (1 ಕೊರಿಂಥ 11:18-19 ರೊಂದಿಗೆ ಹೋಲಿಸಿ).

ಯೆಹೂದಿ ಮತದವರು ಬರುವುದಕ್ಕಿಂತ ಮುಂಚೆ ವಿಶ್ವಾಸಿಗಳು ಮಿಶ್ರಿತ ಗುಂಪುಗಳಲ್ಲಿ ಕೂತಿದ್ದರು. ಯೆಹೂದಿ ಮತದವರು ತಮ್ಮ ದುಬೋರ್ಧನೆಯೊಂದಿಗೆ ಬಂದಾಗ ಮೊದಲು ಪೇತ್ರನು ಅನಂತರ ಬಾರ್ನಬ ಮತ್ತು ಉಳಿದ ಎಲ್ಲಾ ಯೆಹೂದಿ ಹಿನ್ನಲೆಯ ವಿಶ್ವಾಸಿಗಳು ಅನ್ಯಹಿನ್ನಲೆಯ ವಿಶ್ವಾಸಿಗಳಿಂದ ದೂರ ಸರಿದರು.

2. ವಚನ 15-16 ರಲ್ಲಿನ ಪೌಲನ ವಾದ: ಪೇತ್ರ, ಬಾರ್ನಬ ಮತ್ತು ನಾನಂತೂ ದೇವರಲ್ಲಿ ಭಯಭಕ್ತಿಯಿಡುವವರು ಮತ್ತು ಹುಟ್ಟಿನಿಂದ ಧರ್ಮಶಾಸ್ತ್ರ/ ನೇಮನಿಷ್ಠದಲ್ಲಿ ನೆಲೆಗೊಂಡಿರುವವರಾಗಿದ್ದೇವೆ. ಖಂಡಿತವಾಗಿ ನಮ್ಮನ್ನು ಪಾಪಿಗಳೆನಿಸಿಕೊಂಡ ಅನ್ಯಜನರೆಂದು ಕರೆಯಲಾಗದು. ಆದರೂ ಯೇಸುಕ್ರಿಸ್ತನ ಮೇಲಣ ನಂಬಿಕೆಯ ಮೂಲಕ ("ನೀತಿನಿರ್ಣಯ ಹೊಂದಿದ್ದೇವೆ", "ನೀತಿವಂತರೆಂದು ದೇವರಿಂದ ಘೋಷಿಸಲ್ಪಟ್ಟಿದ್ದೇವೆ") ನಾವು ರಕ್ಷಣೆಯನ್ನು ಅನುಭವಿಸಿದ್ದೇವೆ (ಹೊಂದಿದ್ದೇವೆ). ಖಂಡಿತವಾಗಿಯೂ ನಾವು ನೇಮನಿಷ್ಠೆಗಳನ್ನು (ಧರ್ಮಶಾಸ್ತ್ರ) ಅನುಸರಿಸುವುದರ ಮೂಲಕ ಮತ್ತು ಧರ್ಮಶಾಸ್ತ್ರದ ಅಗತ್ಯತೆಗಳನ್ನು ನೆರವೇರಿಸುವುದರ ಮೂಲಕ ರಕ್ಷಿಸಲ್ಪಟ್ಟಿಲ್ಲ ("ನೀತಿನಿರ್ಣಯ ಹೊಂದಲಿಲ್ಲ", "ನೀತಿವಂತರೆಂದು ದೇವರಿಂದ ಘೋಷಿಸಲ್ಪಟ್ಟಿಲ್ಲ").

3. "ಎಂದಿಗೂ ಹೇಳಬಾರದು!" (ವ. 17) ಇದರ ಸಂದರ್ಭವು ವಚನ 17 ರ ಕುರಿತ ನನ್ನ ಟಿಪ್ಪಣಿಯಲ್ಲಿ ವಿವರಿಸಲ್ಪಟ್ಟಿದೆ.

# ಉತ್ತರಗಳು 8: ಧರ್ಮಶಾಸ್ತ್ರದ ಕಾರ್ಯ ಅಥವಾ ನಂಬಿಕೆ (3:1-14)

## ಪ್ರಶ್ನೆಗಳಿಗೆ ಉತ್ತರಗಳು

1. ಪೌಲನು ಗಲಾತ್ಯದವರನ್ನು "ಬುದ್ಧಿಯಿಲ್ಲದವರೇ" ಎಂದು ಕರೆಯುತ್ತಾನೆ. ಯಾಕೆಂದರೆ ಬಹುಸುಲಭವಾಗಿ ಅವರು ಯೆಹೂದಿ ಮತಸ್ಥರ ದುರ್ಬೋಧನೆಯ ಮೋಡಿಗೆ ಒಳಗಾಗಿದ್ದರು, ಆದುದರಿಂದ ಅವರ ಕಣ್ಣೆದುರಿಗೆ ಪೌಲನು ವರ್ಣಿಸಿದ ಶಿಲುಬೆಗೆ ಹಾಕಲ್ಪಟ್ಟ ಕ್ರಿಸ್ತನ ಸುವಾರ್ತೆಗೆ ಅವರು ಅಪನಂಬಿಗಸ್ತರಾದರು (ವ. 1). ಅವರಿಗೆ ಸುವಾರ್ತಾ ಸತ್ಯದ ಅನುಭವವಿತ್ತು ("ದೇವರಾತ್ಮನನ್ನು ಹೊಂದಿದ್ದು", ವ. 2, "ದೇವರಾತ್ಮನುಸಾರವಾಗಿ ಪ್ರಾರಂಭಿಸಿ"). ಅಲ್ಲದೇ ಅವರು ತಮ್ಮ ಸೇವೆಯ ಮೂಲಕ ಪವಿತ್ರಾತ್ಮನು ಮಹತ್ಕಾರ್ಯಗಳನ್ನು ಮಾಡಿದ್ದನ್ನು ಸಹ ಅವರು ನೋಡಿದ್ದರು (ವ. 5). ಆದರೆ ಅನಂತರ ರಕ್ಷಣೆಗಾಗಿ ಸುನ್ನತಿ ಮತ್ತು ಯೆಹೂದಿ ನೇಮನಿಷ್ಠೆಗಳನ್ನು (ಧರ್ಮಶಾಸ್ತ್ರ) ಅನುಸರಿಸುವಂತಹ ಹೆಚ್ಚುವರಿ ಅಗತ್ಯತೆ/ ಅರ್ಹತೆಗಳನ್ನು ಅವರು ಒಪ್ಪಿಕೊಂಡರು (ಪೌಲನ "ಶರೀರದಲ್ಲಿನ ಜೀವಿತ" ಎಂದು ಕರೆಯುತ್ತಾನೆ, ವ. 3).
2. ಗಲಾತ್ಯದವರು ಕ್ರಿಸ್ತನಲ್ಲಿ ವಿಶ್ವಾಸಿಗಳಾದದ್ದು ("ದೇವರಾತ್ಮನನ್ನು ಹೊಂದಿದ್ದು", "ದೇವರಾತ್ಮನಿಂದ ಬದುಕುವವರಾದದ್ದು", ವಚನ 21 ರೊಂದಗೆ ಹೋಲಿಸಿ) ಶಿಲುಬೆಯ ಮೇಲಿನ ಕ್ರಿಸ್ತನ ವಿಮೋಚನಾಕಾರ್ಯದ ಮೇಲಿನ ನಂಬಿಕೆಯ ಮೂಲಕವೇ ಹೊರತು ನೇಮನಿಷ್ಠೆಗಳಿಂದಲ್ಲ (ವ. 2-3). ಆತ್ಮವು ನಮ್ಮನ್ನು ಬದುಕಿಸುತ್ತದೆ, ಆದರೆ "ಶರೀರವು" (ನೇಮನಿಷ್ಠೆಗಳಿಂದ ನೀತಿವಂತರಾಗಲು ಪ್ರಯತ್ನಿಸುವುದನ್ನು ಸಹ ಒಳಗೊಂಡು) ಮರಣಕ್ಕೆ ನಡೆಸುತ್ತದೆ (6:8 ರೊಂದಿಗೆ ಹೋಲಿಸಿ).
3. ಪೌಲನ ಪ್ರಕಾರ ಯೆಹೂದ್ಯರಾಗಲೀ, ಅನ್ಯರಾಗಲೀ ನಂಬುವವರೆಲ್ಲರೂ "ಅಬ್ರಹಾಮನ ಮಕ್ಕಳಾ" ಗಿದ್ದಾರೆ (ವ. 7). ನಂಬುವವರೆಲ್ಲರೂ ಒಂದೇ ಜನಾಂಗವೂ ಅಬ್ರಹಾಮನ ಮಕ್ಕಳೂ ಮತ್ತು ದೇವರ ವಾಗ್ದಾನಕ್ಕೆ ಬಾಧ್ಯರೂ ಆಗಿದ್ದಾರೆ.
4. ವಚನ 9-10 ರಲ್ಲಿ ಪೌಲನು "ಆಶೀರ್ವಾದಗಳು" ಮತ್ತು "ಶಾಪಗಳ" ನ್ನು ತದ್ವಿರುದ್ಧವಾಗಿಸುತ್ತಾನೆ: ನಂಬುವವರು ಅಬ್ರಹಾಮನಂತೆ ಸೌಭಾಗ್ಯವನ್ನು (ಆಶೀರ್ವಾದವನ್ನು) ಹೊಂದುವರು. ಆದರೆ ನೇಮನಿಷ್ಠೆಗಳನ್ನು ಆಧಾರಮಾಡಿಕೊಳ್ಳುವವರು ಶಾಪಾಧೀನರಾಗಿದ್ದಾರೆ (ಶಾಪಗ್ರಸ್ತರು).
5. ತಾನು ಶಿಲುಬೆಯ ಮೇಲೆ ಸಾಯುವಾಗ ನಮಗಾಗಿ ಶಾಪವಾಗುವುದರ ಮೂಲಕ ಕ್ರಿಸ್ತನು ನಮ್ಮನ್ನು ಧರ್ಮಶಾಸ್ತ್ರದಲ್ಲಿನ ಶಾಪದೊಳಗಿಂದ ನಮ್ಮನ್ನು ಬಿಡಿಸಿದನು (ವ. 13).
6. ಅಬ್ರಹಾಮನಿಗೆ ಮಾಡಿದ ದೇವರ ವಾಗ್ದಾನವು ಹೀಗೆ ನೆರವೇರಿದೆ: ಯೇಸುಕ್ರಿಸ್ತನಲ್ಲಿಯ ನಂಬಿಕೆಯ ಮೂಲಕ ಅನ್ಯಜನರು ಆಶೀರ್ವಾದವನ್ನು ಹೊಂದಿದ್ದಾರೆ. ಯೆಹೂದ್ಯರು ಕ್ರಿಸ್ತನ ಮೇಲಿನ ನಂಬಿಕೆಯ ಮೂಲಕ ವಾಗ್ದಾನ ಮಾಡಿದ ಆತ್ಮನನ್ನು ಹೊಂದಿದ್ದಾರೆ (ವ. 14). ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನವು ಕ್ರಿಸ್ತನಲ್ಲಿ ಯೆಹೂದ್ಯರಿಗೂ, ಅನ್ಯರಿಗೂ ನೆರವೇರಿಸಲ್ಪಟ್ಟಿವೆ. ಕ್ರಿಸ್ತನಲ್ಲಿ ನಾವೆಲ್ಲರೂ ಒಂದೇ ದೇವಜನರಾಗಿದ್ದೇವೆ (3:28).

## ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಈ ವಾಕ್ಯಭಾಗದಲ್ಲಿನ ಪೌಲನ ವಾದ/ ಚರ್ಚೆಗೆ ಅಬ್ರಹಾಮನು ಪ್ರಾಮುಖ್ಯವಾಗಿದ್ದಾನೆ:

- ನಂಬಿಕೆಯು ನೀತಿವಂತಿಕೆಗಾಗಿ ಇರುವ ನಮ್ಮ ಮಾರ್ಗವಾಗಿದೆ ಎಂದು ಅಬ್ರಹಾಮನ **ನಂಬಿಕೆಯು** ತೋರಿಸುತ್ತದೆ. ನೇಮನಿಷ್ಠೆಗಳನ್ನು/ ಧರ್ಮಶಾಸ್ತ್ರವನ್ನು ಅನುಸರಿಸಿದ್ದರಿಂದ ಅಬ್ರಹಾಮನು ನೀತಿವಂತನೆಂದು ನಿರ್ಣಯಿಸಲ್ಪಡಲಿಲ್ಲ. ಬದಲಾಗಿ ದೇವರಲ್ಲಿ ಆತನು ನಂಬಿಕೆಯನ್ನಿಟ್ಟಿದ್ದರಿಂದ ನಿರ್ಣಯಿಸಲ್ಪಟ್ಟನು. ಅದೇ ರೀತಿಯಲ್ಲಿ ನೇಮನಿಷ್ಠೆಗಳಿಂದ ನಾವು ನೀತಿವಂತರೆಂದು ನಿರ್ಣಯಿಸಲ್ಪಡುವುದಿಲ್ಲ (ಸುನ್ನತಿ ಮತ್ತು ಇತರೆ ಯೆಹೂದಿ ಸಂಪ್ರದಾಯಗಳು). ಬದಲಾಗಿ ಯೇಸುಕ್ರಿಸ್ತನ ಮೇಲಣ ನಂಬಿಕೆಯ ಮೂಲಕ ನೀತಿವಂತರೆಂದು ನಿರ್ಣಯಿಸಲ್ಪಡುತ್ತೇವೆ.

- ಅಬ್ರಹಾಮನ **ಮಕ್ಕಳು** ಆತನಂತೆಯೇ ನಂಬುವವರಾಗಿದ್ದಾರೆ. ನಂಬಿಕೆಯ ಮೂಲಕ ನೀತಿವಂತರಾಗುವ ಸುವಾರ್ತೆಯು ಹಳೇ ಒಡಂಬಡಿಕೆಯಲ್ಲಿ ಈ ಹಿಂದೆಯೇ ಮುಂದಾಗಿ ಕಾಣಲ್ಪಟ್ಟು ಅಬ್ರಹಾಮನಿಗೆ ತಿಳಿಸಲ್ಪಟ್ಟಿದೆ. "ಯೇಸುಕ್ರಿಸ್ತನ ಮೇಲಣ ನಂಬಿಕೆಯ ಮೂಲಕ ನೀತಿವಂತರೆಂದು ನಿರ್ಣಯಿಸಲ್ಪಡು/ ನೀತಿನಿರ್ಣಯದ ಸುವಾರ್ತೆಯು" ಯೆಹೂದ್ಯರಿಗೂ ಮತ್ತು ಅನ್ಯಜನರಿಗೂ ಅನ್ವಯವಾಗುತ್ತದೆ. ಯೇಸುಕ್ರಿಸ್ತನ ಮೇಲಿನ ನಂಬಿಕೆಯು ನಮ್ಮನ್ನು ಅಬ್ರಹಾಮನ ನಿಜವಾದ ಮಕ್ಕಳು/ ಸಂತತಿ ಮತ್ತು ಅಬ್ರಹಾಮನಿಗೆ ದೇವರು ಮಾಡಿದ ವಾಗ್ದಾನಕ್ಕೆ ಬಾಧ್ಯರನ್ನಾಗಿ ಮಾಡುತ್ತದೆ.

- ಅಬ್ರಹಾಮನು ದೇವರಿಂದ ತನ್ನ ಮೂಲಕ ಭೂಮಿಯ ಮೇಲಿರುವ ಎಲ್ಲಾ ಜನಾಂಗಗಳಿಗೂ ಆಶೀರ್ವಾದವಾಗುವುದೆಂಬ ಒಂದು **ವಾಗ್ದಾನವನ್ನು** ಹೊಂದಿದ್ದನು. ಅಬ್ರಹಾಮನು ಒಬ್ಬ ನಂಬಿಕೆಯ ಮನುಷ್ಯನಾಗಿದ್ದನು ಮತ್ತು ನಂಬುವ ನಾವೆಲ್ಲರೂ ಸಹ ಆತನೊಂದಿಗೆ ಆಶೀರ್ವಾದವನ್ನು ಹೊಂದಿದವರಾಗಿದ್ದೇವೆ. ರಕ್ಷಣೆಯ ಈ ಆಶೀರ್ವಾದವು ("ದೇವರಾತ್ಮನಲ್ಲಿನ ಜೀವನದ) ಯೇಸುಕ್ರಿಸ್ತನ ಮೂಲಕ ಬಂದಿದೆ.

2. ನಿಮ್ಮದೇ ಮಾತುಗಳಲ್ಲಿನ ಗಲಾತ್ಯ 3:1-14 ರ ಸಾರಾಂಶವು ಕನಿಷ್ಠಪಕ್ಷ ಈ ಮುಖ್ಯ ಅಂಶಗಳನ್ನು ಒಳಗೊಂಡಿರಬೇಕಿದೆ:
   - ಪೌಲನು ಗಲಾತ್ಯದವರನ್ನು "ಬುದ್ಧಿಯಿಲ್ಲದವರು" ಎಂದು ಕರೆಯುತ್ತಾನೆ.
   - ಗಲಾತ್ಯದವರ ಅನುಭವ
   - ಅಬ್ರಹಾಮನ ಆಶೀರ್ವಾದ
   - ಧರ್ಮಶಾಸ್ತ್ರದ ಶಾಪ
   - ಕ್ರಿಸ್ತನ ಮೇಲಣ ನಂಬಿಕೆಯಿಂದಾಗುವ ಆಶೀರ್ವಾದ
   - ಒಂದೇ ದೇವಜನರು

# ಉತ್ತರಗಳು 9: ವಾಗ್ದಾನ ಮತ್ತು ಧರ್ಮಶಾಸ್ತ್ರ (3:15-25)

## ಪ್ರಶ್ನೆಗಳಿಗೆ ಉತ್ತರಗಳು

1. ಪೌಲನ ಪ್ರಕಾರ ಈ ಪತ್ಯದಲ್ಲಿ ಕ್ರಿಸ್ತನು ("ಸಂತತಿ") ಅಬ್ರಹಾಮನಿಂದ ಅನೇಕ ಜನಾಂಗಗಳಾಗುವುದೆಂಬ ವಾಗ್ದಾನದ ನೆರವೇರಿಕೆಯಾಗಿದ್ದಾನೆ. ವಾಗ್ದಾನವು ಪ್ರಾಥಮಿಕವಾಗಿ ಯೇಸುಕ್ರಿಸ್ತನೆಂಬ ಒಬ್ಬನೇ ವ್ಯಕ್ತಿಯನ್ನು ಸೂಚಿಸುತ್ತದೆಂಬುದನ್ನು ವಾದಿಸಲು/ ಪ್ರತಿಪಾದಿಸಲು "ಸಂತತಿ" ಗೆ ಪೌಲನು ಗ್ರಿಕಿನ (ಮತ್ತು ಇಬ್ರಿಯದ) ಏಕವಚನವನ್ನು ಉಪಯೋಗಿಸುತ್ತಾನೆ.

   ಬೇರೆ ವಾಕ್ಯಭಾಗಗಳಲ್ಲಿ ಪೌಲನು (3:7 ಮತ್ತು 3:29 ನ್ನು ನೋಡಿರಿ) "ಅಬ್ರಹಾಮನ ಮಕ್ಕಳು" ಮತ್ತು "ಅಬ್ರಹಾಮನ ಸಂತತಿ" ಎಂಬ ಹೇಳಿಕೆಗಳನ್ನು ಯೆಹೂದ್ಯರು ಮತ್ತು ಅನ್ಯಜನರನ್ನೊಳಗೊಂಡ ಯೇಸುಕ್ರಿಸ್ತನಲ್ಲಿ ನಂಬಿಕೆಯಿಡುವವರೆಲ್ಲರ ಬಗ್ಗೆ ಬಳಸುತ್ತಾನೆ.

2. ಪೌಲನು ಮೋಶೆಯನ್ನು ಧರ್ಮಶಾಸ್ತ್ರದ ಮಧ್ಯಸ್ಥನೆಂಬುದಾಗಿ ಮತ್ತು ಧರ್ಮಶಾಸ್ತ್ರವನ್ನು ಅದನ್ನು ಹೊಂದಿದ ಇಸ್ರಾಯೇಲ್ಯರನ್ನು ಕಾಯುವಂಥದ್ದು ಮತ್ತು ಸಂರಕ್ಷಿಸುವಂಥದ್ದಾಗಿದೆ ಎಂಬುದಾಗಿ ವರ್ಣಿಸುತ್ತಾನೆ.

3. ಧರ್ಮಶಾಸ್ತ್ರದ ಸಿಂಧುತ್ವವು ಕ್ರಿಸ್ತನ ಆಗಮನದವರೆಗೆ (ಅಬ್ರಹಾಮನಿಗೆ ದೇವರು ಮಾಡಿದ ವಾಗ್ದಾನದ ನೆರವೇರಿಕೆ) ಮಾತ್ರ ಇತ್ತು.

4. ನಂಬಿಕೆಯು ಬಂದಾಗ ದೇವಜನರನ್ನು ಕಾವಲುಗಾರನಂತೆ ಮತ್ತು ಮೇಲ್ವಿಚಾರಕನಂತೆ ಕಾಯುತ್ತಿದ್ದ ಧರ್ಮಶಾಸ್ತ್ರದ ಕಾರ್ಯನಿರ್ವಹಣೆಯು ಮುಕ್ತಾಯವಾಯಿತು.

## ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನವು ಮೋಶೆಯ ಮೂಲಕ ಇಸ್ರಾಯೇಲ್ಯರಿಗೆ ಕೊಟ್ಟ ಧರ್ಮಶಾಸ್ತ್ರಕ್ಕಿಂತಲೂ ಶ್ರೇಷ್ಠವಾದುದ್ದಾಗಿದೆ ಎಂಬುದನ್ನು ತೋರಿಸಲು ಪೌಲನು ಹೀಗೆ ವಾದಿಸುತ್ತಾನೆ.

   - ವಾಗ್ದಾನವು ಒಂದು "ಕೊನೆಯ ಇಚ್ಛೆ ಮತ್ತು ಒಡಂಬಡಿಕೆ" ಯಂತಿದೆ ಅಥವಾ ಬದಲಾಗದೆ ಇರುವ ಒಂದು ಒಡಂಬಡಿಕೆಯಂತಿದೆ. ಹೀಗಾಗಿ ಧರ್ಮಶಾಸ್ತ್ರವು ಕೊಡಲ್ಪಟ್ಟಾಗ, ಅದು ವಾಗ್ದಾನವನ್ನು ರದ್ದು ಮಾಡಲಿಲ್ಲ. ಇದು ಕ್ರಿಸ್ತನ ಬರೋಣದ ವಾಗ್ದಾನವು ಸೀನಾಯಿ ಬೆಟ್ಟದಲ್ಲಿ ಕೊಡಲ್ಪಟ್ಟ ಧರ್ಮಶಾಸ್ತ್ರಕ್ಕಿಂತಲೂ ಶ್ರೇಷ್ಠವಾಗಿದೆ ಎಂಬುದನ್ನು ತೋರಿಸುತ್ತದೆ.

   - ಧರ್ಮಶಾಸ್ತ್ರವು ಸಮಯದಲ್ಲಿ ಸೀಮಿತವಾಗಿದೆ. ಇದು ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನವು ನೆರವೇರುವವರೆಗೆ ಮಾತ್ರ ಅಂದರೆ – ಕ್ರಿಸ್ತನೊಂದಿಗೆ ಮತ್ತು ಮನುಷ್ಯರಿಗಾಗಿನ ನೀತಿನಿರ್ಣಯದೊಂದಿಗೆ ದೇವರ ಕೃಪೆಯ ಆಗಮನದವರೆಗೆ ದೇವಜನರನ್ನು ಕಾಯುವವನಂತೆ ಮತ್ತು ಸಂರಕ್ಷಕನಂತೆ ಒಳ್ಳೇಯದೂ ಮತ್ತು ಉಪಯುಕ್ತವೂ ಆಗಿತ್ತು. ಇದು ವಾಗ್ದಾನವು ಧರ್ಮಶಾಸ್ತ್ರಕ್ಕಿಂತಲೂ ಶ್ರೇಷ್ಠವಾಗಿದೆ ಎಂಬುದನ್ನು ತೋರಿಸುತ್ತದೆ.

   - ವಾಗ್ದಾನವು ಒಬ್ಬನೇ ದೇವರಿಂದ ಕೊಡಲ್ಪಟ್ಟಿದೆ, ಆದರೆ ಧರ್ಮಶಾಸ್ತ್ರವು ಅನೇಕ ದೂತರು ಮತ್ತು ಮೋಶೆಯ ಮೂಲಕ ಮಧ್ಯಸ್ಥಿಕೆ ವಹಿಸಲ್ಪಟ್ಟಿದೆ. ಇದು ವಾಗ್ದಾನವು ಧರ್ಮಶಾಸ್ತ್ರಕ್ಕಿಂತಲೂ ಶ್ರೇಷ್ಠವಾಗಿದೆ ಎಂಬುದನ್ನು ತೋರಿಸುತ್ತದೆ.

2. ಧರ್ಮಶಾಸ್ತ್ರವು ದೇವರ ವಾಗ್ದಾನವನ್ನು ವಿರೋಧಿಸುವುದಿಲ್ಲ. ನಿಮ್ಮ ಸ್ವಂತ ಉತ್ತರ

ಜಾನ್ ಸ್ಟಾಟ್ ರ ಬಳಿ ಈ ರೀತಿಯ ಸಾರಾಂಶವಿದೆ: "ಧರ್ಮಶಾಸ್ತ್ರವು ವಾಗ್ದಾನವನ್ನು ರದ್ದುಮಾಡುತ್ತದೆ ಎಂಬುದಾಗಿ ಸುಳ್ಳುಹೇಳಿದರು. ಪೌಲನು ಧರ್ಮಶಾಸ್ತ್ರದ ನಿಜವಾದ ಕಾರ್ಯವನ್ನು ಬೋಧಿಸುತ್ತಾನೆ. "ಅದು ವಾಗ್ದಾನವನ್ನು ಖಚಿತಪಡಿಸುವುದು ಮತ್ತು ಅದನ್ನು ಅಗತ್ಯವಾದದ್ದನ್ನಾಗಿ ಮಾಡುತ್ತದೆ".

ಧರ್ಮಶಾಸ್ತ್ರದ ಮುಖ್ಯ ಕಾರ್ಯನಿರ್ವಹಣೆಯನ್ನು ಮಾರ್ಟಿನ್ ಲೂಥರ್ ರವರು ಈ ರೀತಿಯಾಗಿ ವರ್ಣಿಸುತ್ತಾರೆ: "ಇದು ಜನರನ್ನು ಉತ್ತಮವಾಗಿ ಅಲ್ಲ, ಕೆಟ್ಟದ್ದಾಗಿ ಮಾಡುತ್ತದೆ. ಧರ್ಮಶಾಸ್ತ್ರವು ಅವರಿಗೆ ತಮ್ಮ ಪಾಪವನ್ನು ತೋರಿಸುತ್ತದೆಂದು ಅರ್ಥವಾಗಿದೆ. ಈ ಜ್ಞಾನವು ಅವರನ್ನು ದೀನರನ್ನಾಗಿಸುತ್ತದೆ, ಭಯಪಡಿಸುತ್ತದೆ, ಜಜ್ಜುತ್ತದೆ, ಮುರಿಯುತ್ತದೆ ಮತ್ತು ಕೃಪೆಯನ್ನು ಹುಡುಕಲು ಮತ್ತು ಆಶೀರ್ವಾದ ಹೊಂದಿದ ಸಂತತಿಯಾದ ಯೇಸುವಿನ ಬಳಿಗೆ ಬರುವುದಕ್ಕೆ ಅವರನ್ನು ನಡೆಸುತ್ತದೆ"

3. ಪೌಲನ ಪ್ರಕಾರ ಈ ವಾಕ್ಯಭಾಗದಲ್ಲಿ ಧರ್ಮಶಾಸ್ತ್ರದ ಪಾತ್ರವೇನೆಂದರೆ, ದೇವಜನರನ್ನು ಪಾಪದ ತೀವ್ರವಾದ ಪರಿಣಾಮದಿಂದ ರಕ್ಷಿಸುವುದಾಗಿದೆ. ಅಲ್ಲದೆ ಅಬ್ರಹಾಮನಿಗೆ ದೇವರು ಮಾಡಿದ ವಾಗ್ದಾನದ ನೆರವೇರಿಕೆಯಾಗಿರುವ ಕ್ರಿಸ್ತನ ಬರೋಣದವರೆಗೆ ದೇವಜನರನ್ನು ನಡೆಸುವುದು ಮತ್ತು ಮೇಲ್ವಿಚಾರಣೆ ಮಾಡುವುದಾಗಿದೆ. ಯೇಸುಕ್ರಿಸ್ತನ ಮೇಲಣ ನಂಬಿಕೆಯ ಮೂಲಕ ದೊರಕಿದ ನೀತಿನಿರ್ಣಯವೆಂಬ ದೇವರ ಕೃಪಾಕೊಡುಗೆಯಿಂದ ದೇವಜನರು ಇನ್ನೂ ಧರ್ಮಶಾಸ್ತ್ರದ ಕಾವಲಿನಲ್ಲಿ ಇಡಬೇಕಾದ ಅಗತ್ಯವಿಲ್ಲ.

# ಉತ್ತರಗಳು 10: ಪುತ್ರರು ಮತ್ತು ಬಾಧ್ಯರು (3:26-4:20)

## ಪ್ರಶ್ನೆಗಳಿಗೆ ಉತ್ತರಗಳು

1. ಯೆಹೂದ್ಯನು, ಅನ್ಯನೆನ್ನದೆ ಯೇಸುಕ್ರಿಸ್ತನ ಮೇಲಣ ನಂಬಿಕೆಯ ಮೂಲಕ ನಾವು ದೇವರ ಪುತ್ರರಾಗುತ್ತೇವೆ.

2. ಕ್ರಿಸ್ತನಲ್ಲಿನ ವಿಶ್ವಾಸಿಗಳ ಅನ್ಯೋನ್ಯತೆಯನ್ನು ಪೌಲನು ಕ್ರಿಸ್ತನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರು "ಕ್ರಿಸ್ತನನ್ನು ಧರಿಸಿಕೊಂಡವರಾಗಿದ್ದಾರೆ". ವಿಶ್ವಾಸಿಗಳ ಅನ್ಯೋನ್ಯತೆಯಲ್ಲಿ ಎಲ್ಲರೂ ಸಹ ಸಮಾನರಾಗಿದ್ದಾರೆ. ಜನಾಂಗೀಯ ಹಿನ್ನಲೆಯು (ಯೆಹೂದ್ಯನಾಗಲಿ, ಗ್ರೀಕನಾಗಲಿ) ಮುಖ್ಯವಲ್ಲ. ಸಾಮಾಜಿಕ ಸ್ಥಾನಮಾನವು ಪ್ರಾಮುಖ್ಯವಲ್ಲ (ದಾಸನು ಅಥವಾ ಸ್ವತಂತ್ರನು). ಲಿಂಗವು ಪ್ರಾಮುಖ್ಯವಲ್ಲ (ಪುರುಷನಾಗಲಿ, ಸ್ತ್ರೀಯಾಗಲಿ) ಎಂದು ವರ್ಣಿಸುತ್ತಾನೆ.

3. 3:29 ರಲ್ಲಿ ಪೌಲನು ಕ್ರಿಸ್ತನಲ್ಲಿನ ವಿಶ್ವಾಸಿಗಳ ಅನ್ಯೋನ್ಯತೆಯನ್ನು (ಕ್ರಿಸ್ತನಿಗೆ ಸೇರಿದವರು) ಅಬ್ರಹಾಮನ ಸಂತತಿ ಮತ್ತು ಅಬ್ರಹಾಮನಿಗೆ ದೇವರು ಮಾಡಿದ ವಾಗ್ದಾನಕ್ಕೆ ಬಾಧ್ಯರು ಎಂಬುದಾಗಿ ವರ್ಣಿಸುತ್ತಾನೆ (ಅಲ್ಲದೆ ರೋಮಾಪುರದವರಿಗೆ 4:16, 9:7-8). ಈ ಹಿಂದಿನ ಅಧ್ಯಾಯದಲ್ಲಿ ಪೌಲನು ಇದೇ "ಅಬ್ರಹಾಮನ ಸಂತತಿ" ಎಂಬ ಮಾತನ್ನು ಯೇಸುಕ್ರಿಸ್ತನ ಬಗ್ಗೆ ಹೇಳಿದ್ದನ್ನು ಗಮನಿಸಿ.

4. 4:4 ರಲ್ಲಿ ಕ್ರಿಸ್ತನ ಕುರಿತು ಪೌಲನ ವಿವರಣೆ/ ವರ್ಣನೆ :
   - ಕಾಲವು ಪರಿಪೂರ್ಣವಾದಾಗ/ ಸರಿಯಾದ ಸಮಯದಲ್ಲಿ ಆತನು ದೇವರಿಂದ ಕಳುಹಿಸಲ್ಪಟ್ಟನು.
   - ಮನುಷ್ಯನ ಸ್ಥಿತಿಗಳಡಿಯಲ್ಲಿಯ ಒಂದು ಜೀವಿತದೊಳಗೆ ಆತನು ಹುಟ್ಟಿದನು. ಆತನ ತಾಯಿಯು ಒಬ್ಬ ಸ್ತ್ರೀಯಾಗಿದ್ದಳು. ಪ್ರತಿಯೊಬ್ಬ ಮನುಷ್ಯನಂತೆ ಆತನೂ ಧರ್ಮಶಾಸ್ತ್ರಾಧೀನನಾಗಿದ್ದನು.

5. ದೇವರು ತನ್ನ ಮಗನನ್ನು ಕಳುಹಿಸಿದಾಗ ಮನುಷ್ಯನಿಗೆ ಹೀಗಾಯಿತು:
   - ಧರ್ಮಶಾಸ್ತ್ರದ ದಾಸತ್ವದೊಳಗಿಂದ ನಮ್ಮನ್ನು ಬಿಡಿಸುವುದಕ್ಕಾಗಿ ಮಗನು ಬಂದನು.
   - ಮಗನು ನಾವು ದೇವರ ಮಕ್ಕಳಾಗುವುದನ್ನು ಸಾಧ್ಯವಾಗಮಾಡಿದನು. ಒಬ್ಬ ನಿಜಮಗನಿಗಿರುವ ಎಲ್ಲಾ ಹಕ್ಕುಗಳು ನಮಗೆ ಕೊಡಲ್ಪಟ್ಟಿವೆ. ನಾವು ದೇವರ ವಾರಸುದಾರರೂ ಅಬ್ರಹಾಮನಿಗೆ ದೇವರು ಮಾಡಿದ ವಾಗ್ದಾನಕ್ಕೆ ಬಾಧ್ಯರೂ ಆದೆವು. ಇದು ಯೆಹೂದ್ಯ, ಅನ್ಯರೆನ್ನದೆ ಎಲ್ಲಾ ದೇಶಗಳ ಜನರಿಗೂ ಅನ್ವಯವಾಗುತ್ತದೆ.
   - ಮಗನು ನಮಗೆ ಪುತ್ರತ್ವದ ಆತ್ಮ (ಭಾವ) ವನ್ನು ಕೊಟ್ಟು, ತಂದೆಯಾದ ದೇವರೊಂದಿಗೆ ಒಂದು ನಿಕಟವಾದ ಸಂಬಂಧವನ್ನು ಹೊಂದುವಂತೆ ಮಾಡಿದನು.

6. 4:9 ರಲ್ಲಿ ಪೌಲನು ಗಲಾತ್ಯದವರು ಧರ್ಮಶಾಸ್ತ್ರಕ್ಕೆ ಅಧೀನರಾಗುವ ತಮ್ಮ ಹಳೆಯ ಸ್ವಭಾವಕ್ಕೆ ಹಿಂತಿರುಗಿದ್ದನ್ನು ಮತ್ತು ಆ ಮೂಲಕ ಬಿದ್ದುಹೋದ/ ಪಾಪಮಯವಾದ ಈ ಲೋಕವನ್ನು ನಿಯಂತ್ರಿಸುವ ಅಧಿಕಾರದಡಿಯಲ್ಲಿ ಪುನಃ ದಾಸರಾದರೆಂಬುದಾಗಿ ದೂರುತ್ತಾನೆ. ದೇವರ ಮಕ್ಕಳಾದ ಅನುಭವವಿರುವ ಅವರು ಆ ರೀತಿ ಮಾಡಬಹುದೆಂಬುದಕ್ಕಾಗಿ ಪೌಲನು ಆಶ್ಚರ್ಯಗೊಳ್ಳುತ್ತಾನೆ.

7. ಪೌಲನ ಮೊದಲ ಭೇಟಿಯಲ್ಲಿ ಗಲಾತ್ಯದವರು ಆತನ ಅಸ್ವಸ್ಥತೆಯ ನಿಮಿತ್ತ ಕನಿಕರದಿಂದಲೂ ಮತ್ತು ಆತನು ಅವರಿಗೆ ಸಾರಿದ ಸುವಾರ್ತೆಯ ನಿಮಿತ್ತ ಉತ್ಸಾಹದಿಂದಲೂ ಆತನನ್ನು ಸೇರಿಕೊಂಡರು (ವ. 4:13-14).

8. ಪೌಲನು ಗಲಾತ್ಯರಿಗಾಗಿ ಭಾವೋದ್ರಿಕ ಭಾವನೆಗಳನ್ನು ಹೊಂದಿದ್ದಾನೆ. ಯೆಹೂದ್ಯರಂತೆ ಯಾವುದೇ ಸ್ವಾರ್ಥ ಉದ್ದೇಶಗಳಿಲ್ಲದೆ, ಅವರಿಗಾಗಿ ಅತ್ಯುತ್ತಮವಾದುದ್ದನ್ನು ಆತನು ಬಯಸುತ್ತಾನೆ. ಅವರ ಆತ್ಮೀಕ ಹಿತರಕ್ಷಣೆ (ಕ್ಷೇಮ) ಗಾಗಿ ಮತ್ತು ಮತ್ತೊಮ್ಮೆ ಕ್ರಿಸ್ತನು ಅವರ ಜೀವಿತಗಳಲ್ಲಿ ಅವತರಿಸುವುದನ್ನು ಕಾಣುವುದಕ್ಕೆ ಮಹಾವೇದನೆ ಮತ್ತು ಬಾಧೆಯನ್ನು (ತಾಯಿಯು ಪ್ರಸವವೇದನೆ ಪಡುವಂತೆ) ಹಾದುಹೋಗಲು ಸಹ ಆತನು ಸಿದ್ಧನಿದ್ದನು. ಸಾಧ್ಯವಾದರೆ ತಾನೇ ಅವರೊಂದಿಗಿದ್ದುಕೊಂಡು ಅವರಿಗಾಗಿನ ತನ್ನ ಬಯಕೆಯನ್ನು ವ್ಯಕ್ತಪಡಿಸಬೇಕೆಂದು ಆತನು ಆಶಿಸುತ್ತಾನೆ (4:17-20).

## ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಪೌಲನು 3:27 ರಲ್ಲಿ ಉಪಯೋಗಿಸುವ/ ಬಳಸುವ ಚಿತ್ರಣವು ಒಬ್ಬ ವ್ಯಕ್ತಿಯು ಹೊಸ ವಸ್ತ್ರವನ್ನು ಧರಿಸಿಕೊಳ್ಳುವುದಾಗಿದೆ. ದೀಕ್ಷಾಸ್ನಾನ ಮಾಡಿಸಿಕೊಂಡವರು ಹೊಸ ವಸ್ತ್ರವನ್ನು ಧರಿಸಿಕೊಳ್ಳುವುದು ಆದಿಸಭೆಯಲ್ಲಿ ಸಾಮಾನ್ಯವಾಗಿತ್ತು. ಇದು ಒಂದು ಹೊಸ ಜೀವಿತ, ಕ್ರಿಸ್ತನೊಂದಿಗಿನ ಮತ್ತು ಕ್ರಿಸ್ತನಿಂದ ನಿಯಂತ್ರಿಸಲ್ಪಡುವ ಒಂದು ಜೀವಿತದ ಸಂಕೇತವಾಗಿತ್ತು. ಅವರ ಜೀವಿತವು ಬದಲಾಗಿದೆ ಎಂಬುದೇ ಪೌಲನು ಅವರಿಗೆ ಹೇಳುವ ಅಂಶವಾಗಿದೆ. ಇನ್ನು ಅವರು ತಮ್ಮ ಮಾನಸಾಂತರಕ್ಕಿಂತ ಮುಂಚೆ ಇದ್ದಂತ ವ್ಯಕ್ತಿಗಳಲ್ಲ. ಈಗ ಅವರು ವಿಭಿನ್ನವಾಗಿ ಯೋಚಿಸುತ್ತಾರೆ ಮತ್ತು ವಿಭಿನ್ನವಾಗಿ ನಡೆದುಕೊಳ್ಳುತ್ತಾರೆ.

2. -

3. ಧರ್ಮಶಾಸ್ತ್ರದೀನದಡಿಯಲ್ಲಿನ ಮನುಷ್ಯನ ಸ್ಥಿತಿಯ ಕುರಿತ ಪೌಲನ ವರ್ಣನೆ (ವ. 1-3):

   - ಆತನು ಒಬ್ಬ ದಾಸನಿಗಿಂತ ಉತ್ತಮನೇನಲ್ಲ, ಯಾಕೆಂದರೆ ಆತನು ವಿಮುಕ್ತನೂ ಸ್ವತಂತ್ರನೂ ಅಲ್ಲ.
   - ಆತನು ಒಬ್ಬ ಬಾಲಕನಾಗಿದ್ದು, ಆತನ ಜೀವಿತವು ಒಬ್ಬ ಪಾಲಕನಿಂದ ನಿಯಂತ್ರಿಸಲ್ಪಡುತ್ತದೆ.
   - ಆತನೊಬ್ಬ ಬಾಲಕನಂತಿದ್ದು ಇನ್ನೂ ಸಹ ತನ್ನ ಸ್ವಂತ ಆಸ್ತಿಯ ಅಧಿಕಾರವನ್ನು ಹೊಂದದವನಾಗಿದ್ದಾನೆ. ಆತನ ತಂದೆಯು ಅದನ್ನಾತನಿಗೆ ಕೊಡುವವರೆಗೂ ಅದು ನೋಡಿಕೊಳ್ಳುವವನ/ ಮನೆವಾರ್ತೆಯವನ ಕಾಳಜಿಯಲ್ಲಿಯೇ ಇರುತ್ತದೆ.
   - ನಿಜವಾಗಲೂ ಆತನು ಪಾಪಮಯವಾದ ಈ ಲೋಕದ ಶಕ್ತಿಗಳಡಿಯಲ್ಲಿ ಒಬ್ಬ ದಾಸನಾಗಿದ್ದಾನೆ.

4. ಯೇಸುಕ್ರಿಸ್ತನ ಬರೋಣದ ನಂತರದ ಮನುಷ್ಯನ ಸ್ಥಿತಿಯ ಕುರಿತು ಪೌಲನ ವರ್ಣನೆ/ ವಿವರಣೆ (4-8):

   - ಆತನು ಧರ್ಮಶಾಸ್ತ್ರದ ದಾಸತ್ವದೊಳಗಿಂದ ಬಿಡುಗಡೆ ಹೊಂದಿದ್ದಾನೆ. ಆತನು ಇನ್ನು ಮುಂದೆ ದಾಸನಾಗಿರುವುದಿಲ್ಲ.
   - ಆತನು ದೇವರಿಂದ ಸ್ವೀಕರಿಸಲ್ಪಟ್ಟು, ಒಬ್ಬ ದೇವರ ಮಗುವಾಗಿದ್ದಾನೆ. ಹೀಗೆ ಆತನೀಗ ದೇವರ ಕುಟುಂಬದ/ ಮನೆಯ, ದೇವರಜನರ ಒಬ್ಬ ಸದಸ್ಯನಾಗಿದ್ದಾನೆ.
   - ಆತನು ದೇವರೊಂದಿಗೆ ಒಂದು ನಿಕಟವಾದ ಸಂಬಂಧವನ್ನು ಹೊಂದಿದ್ದು, ಆತನನ್ನು "ಡ್ಯಾಡಿ"/ "ತಂದೆಯೇ" ಎಂದು ಕರೆಯುತ್ತಾನೆ.
   - ಕ್ರಿಸ್ತನ ಮೂಲಕ ಮುಂದಿನ ದೇವರ ರಾಜ್ಯದ ಒಬ್ಬ ಬಾಧ್ಯಸ್ತನಾಗಿದ್ದಾನೆ.

5. 4:8 ರಲ್ಲಿ ತದ್ವಿರುದ್ಧತೆಯು ಹೀಗೆ ಸಾರಾಂಶಗೊಂಡಿದೆ: ನೀವು ದೇವರು ತಿಳಿದವರಾಗಿದ್ದೀರಿ. ಇಲ್ಲವೇ ನೀವು ದಾಸರಾಗಿದ್ದೀರಿ.

6. ವಚನ 12 ರಲ್ಲಿನ ಪೌಲನ ವಾದ/ ಪ್ರತಿಪಾದನೆ/ ಚರ್ಚೆ : ಕ್ರಿಸ್ತನೊಂದಿಗಿನ ಪೌಲನ ಹೊಸ ಜೀವನವು ಧರ್ಮಶಾಸ್ತ್ರದ ದಾಸತ್ವದೊಳಗಿಂದ ಆತನನ್ನು ಬಿಡಿಸಿ, ಆತನನ್ನು ಅನ್ಯಜನರೊಂದಿಗೆ ಅನ್ಯೋನ್ಯತೆಯುಳ್ಳವನಾಗುವಂತೆ ಮಾಡಿತು (ನಾನು ನಿಮ್ಮ ಹಾಗೆ ಆದದ್ದರಿಂದ). ಗಲಾತ್ಯದವರು ಈ ಧರ್ಮಶಾಸ್ತ್ರಕ್ಕೆ ಅಧೀನರಾಗಬೇಕೆಂಬ ಯೆಹೂದಿ ಮತದವರ ಬೋಧನೆಯ ಶೋಧನೆಗೆ ಒಳಗಾಗಿದ್ದಾರೆ. ಹಾಗಾಗಿ ಪೌಲನು, ಯೆಹೂದಿ ನಿಯಮಗಳಿಂದ ಸ್ವತಂತ್ರರಾಗಲು ಅವರೂ ಸಹ ತನ್ನಂತೆಯೇ ಆಗಬೇಕೆಂದು ಅವರನ್ನು ಕೇಳಿಕೊಳ್ಳುತ್ತಾನೆ ("ನೀವು ನನ್ನ ಹಾಗೆ ಆಗಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ").

7. 4:12-20 ರಲ್ಲಿನ ಎರಡು ಬಹುಮುಖ್ಯ ತದ್ವಿರುದ್ಧತೆಗಳು:

- ಗಲಾತ್ಯದವರ ಬಗ್ಗೆ: ತಮ್ಮ ರಕ್ಷಣೆಯ ಸ್ವಾತಂತ್ರ್ಯದಲ್ಲಿ ಅವರು ಸಂತೋಷವಾಗಿದ್ದರು. ಈಗ ಅವರು ನೇಮನಿಷ್ಠೆಗಳ ದಾಸತ್ವಕ್ಕಾಗಿ ತಮ್ಮ ಸಂತೋಷವನ್ನು ಕಳಕೊಂಡರು.
- ಬೋಧಕರುಗಳ ಬಗ್ಗೆ: ಯೆಹೂದಿ ಮತದವರು (ಸ್ವಾರ್ಥಮಯ ದುರ್ಬೋಧಕರು) ಮತ್ತು ಪೌಲ (ನಿಸ್ವಾರ್ಥವಾಗಿ ನಿಜವಾದ ಸುವಾರ್ತೆಯನ್ನು ಸಾರುವವನು).

# ಉತ್ತರಗಳು 11: ಎರಡು ಒಡಂಬಡಿಕೆಗಳು (4:21-31)

## ಪ್ರಶ್ನೆಗಳಿಗೆ ಉತ್ತರಗಳು

1. ಹಾಗರಳು ಅಬ್ರಹಾಮನ ಪತ್ನಿಯಾದ ಸಾರಳ ದಾಸಿಯಾಗಿದ್ದಳು. ಇಷ್ಮಾಯೇಲನು ಹಾಗರಳ ಮಗನು ಮತ್ತು ಅಬ್ರಹಾಮನ ಚೊಚ್ಚಲ ಮಗನಾಗಿದ್ದನು. ಹಾಗರಳು "ದಾಸತ್ವದ ಒಡಂಬಡಿಕೆಯನ್ನು" ಸೂಚಿಸುತ್ತಾಳೆ.
2. ಸಾರಳು ಅಬ್ರಹಾಮನ ಪತ್ನಿಯಾಗಿದ್ದಳು. ಇಸಾಕನು ಸಾರಳ ಮಗನೂ ಮತ್ತು ಅಬ್ರಹಾಮನ ಎರಡನೇ ಮಗನೂ ಆಗಿದ್ದನು. ಸಾರಳು "ಸ್ವಾತಂತ್ರ್ಯದ ಒಡಂಬಡಿಕೆಯನ್ನು" ಸೂಚಿಸುತ್ತಾಳೆ.
3. ಕ್ರಿಸ್ತನಲ್ಲಿನ ವಿಶ್ವಾಸಿಗಳು ಮತ್ತು ಇಸಾಕನ ನಡುವಿನ ಪೌಲನ ಹೋಲಿಕೆ: ನಾವು ದಾಸಿಯ ಮಕ್ಕಳಲ್ಲ, ಬದಲಾಗಿ ಸ್ವತಂತ್ರ ಸ್ತ್ರೀಯ (ಧರ್ಮಪತ್ನಿಯ) ಮಕ್ಕಳಾಗಿದ್ದೇವೆ. ಹೀಗಾಗಿ ನಾವು ಮಕ್ಕಳೂ, ದೇವರ ವಾಗ್ದಾನಕ್ಕೆ ಬಾಧ್ಯರೂ ಆಗಿದ್ದೇವೆ.
4. ---------------------------------------------------------------------------------------------------------------

## ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಗಲಾತ್ಯ 4:21-31 ವಾಕ್ಯಭಾಗದ ರಚನೆ:
   - ಗಲಾತ್ಯದವರಿಗೆ ಪರಿಚಯಾತ್ಮಕ ಸುಬೋಧನೆ: "ನನಗೆ ಉತ್ತರಿಸಿ".
   - ಭಾಗ ಒಂದು (ವ. 21-23) ಐತಿಹಾಸಿಕ/ ಚಾರಿತ್ರಿಕ ಹಿನ್ನಲೆಯನ್ನು ಕೊಡುತ್ತದೆ: ಅಬ್ರಹಾಮ ಮತ್ತು ಆತನ ಇಬ್ಬರು ಮಕ್ಕಳು. ಪೌಲನು ಇದನ್ನು ಪಂಚಕಾಂಡಕ್ಕೆ ಸಂಕೇತವಾಗಿ ಹೇಳುತ್ತಾನೆ ("ಇದು ಧರ್ಮಶಾಸ್ತ್ರದಲ್ಲಿ ಬರೆದದೆ").
   - ಭಾಗ ಎರಡು (ವ. 24-27) ಹಿಂದಿನ ವಚನಗಳ ಮೇಲಿನ ಪೌಲನ ಸಾಂಕೇತಿಕ ವ್ಯಾಖ್ಯಾನ. ಇಲ್ಲಿ ಪೌಲನ "ಹೋಲಿಕೆ" (ಸಾದೃಶ್ಯ) ಯನ್ನು ಉಪಯೋಗಿಸುವುದನ್ನು ಗಮನಿಸಿ.
   - ಭಾಗ ಮೂರು (ವ. 28-31) ಪೌಲನ "ಹೋಲಿಕೆ" (ಸಾದೃಶ್ಯ) ಯ ಅನ್ವಯಿಸುವಿಕೆಯಾಗಿದೆ: ಕ್ರಿಸ್ತನಲ್ಲಿನ ವಿಶ್ವಾಸಿಗಳಿಗೆ ಇದು ಏನೆಂದು ಅರ್ಥೈಸುತ್ತದೆ?
2. ಈ ವಾಕ್ಯಭಾಗದಲ್ಲಿ ವಿವರಿಸಲ್ಪಟ್ಟಂತೆ/ ವರ್ಣಿಸಲ್ಪಟ್ಟಂತೆ ಎರಡು ಒಡಂಬಡಿಕೆಗಳು:
   - ಧರ್ಮಶಾಸ್ತ್ರದ ಒಡಂಬಡಿಕೆಯು ಈ ರೀತಿಯ ಮುಖ್ಯ/ ಪ್ರಮುಖ ಹೇಳಿಕೆ (ಭಾವ) ಗಳ ಗುಣಲಕ್ಷಣಗಳನ್ನು ಹೊಂದಿದೆ: ಸಾರಳು ಸ್ವತಂತ್ರಳಾಗಿರುವ ಸ್ತ್ರೀಯಾಗಿದ್ದಾಳೆ. ಇಸಾಕನು ವಾಗ್ದಾನದ ಫಲವಾಗಿ ಹುಟ್ಟಿದ ಸ್ವತಂತ್ರ ಮಗನು. ಹಿಂಸೆಪಡಿಸಿದ್ದು. ಮೇಲಣ ಯೆರೂಸಲೇಮ್. ಸ್ವಾತಂತ್ರ್ಯ. ದೇವರಾತ್ಮನ. ದೇವರ ವಾಗ್ದಾನಗಳಿಗೆ ಬಾಧ್ಯರು.
3. ಈ ವಾಕ್ಯಭಾಗದಲ್ಲಿನ ಪೌಲನ ಮುಖ್ಯ ಅಂಶ: ಕ್ರಿಸ್ತನಲ್ಲಿನ ವಿಶ್ವಾಸಿಗಳು ವಾಗ್ದಾನದ ಒಡಂಬಡಿಕೆ ಸೇರಿದವರಾಗಿದ್ದಾರೆ. ನಾವು ಸ್ವತಂತ್ರರಾಗಿರಲು ಹುಟ್ಟಲ್ಪಟ್ಟಿದ್ದೇವೆಯೇ ಹೊರತು, ಧರ್ಮಶಾಸ್ತ್ರಕ್ಕೆ ದಾಸರಾಗಿರುವುದಕ್ಕಲ್ಲ. ನಾವು ದೇವರ ವಾಗ್ದಾನಗಳಿಗೆ ಬಾಧ್ಯರಾಗಿದ್ದೇವೆ.

# ಉತ್ತರಗಳು 12: ಶಿಲುಬೆ ಅಥವಾ ಸುನ್ನತಿ (5:1-12)

## ಪ್ರಶ್ನೆಗಳಿಗೆ ಉತ್ತರಗಳು

1. ವಚನ 1 ರಲ್ಲಿ ಪೌಲನು "ಕ್ರಿಸ್ತನಲ್ಲಿನ ಸ್ವಾತಂತ್ರ್ಯ" ವನ್ನು "ಧರ್ಮಶಾಸ್ತ್ರಕ್ಕೆ ದಾಸರಾಗಿರುವುದ" ಕ್ಕೆ ತದ್ವಿರುದ್ಧವಾಗಿ ತೋರಿಸುತ್ತಾನೆ. ಪೌಲನು ಗಲಾತ್ಯದವರಿಗೆ ಯೆಹೂದಿ ಮತದವರ ನಿಯಮಗಳಿಗೆ ಒಳಗಾಗದೆ ಕ್ರಿಸ್ತನ ಮೇಲಣ ನಂಬಿಕೆಯ ಮೂಲಕ ತಾವು ಹೊಂದಿದ ಸ್ವಾತಂತ್ರ್ಯದಲ್ಲಿ ನೆಲೆಗೊಂಡಿರಬೇಕೆಂದು ಬೋಧಿಸುತ್ತಾನೆ ("ದಾಸತ್ವದ ನೊಗದಲ್ಲಿ ತಿರುಗಿ ಸಿಕ್ಕಿಸಿಕೊಳ್ಳಬೇಡಿರಿ" ಎಂಬ ಮಾತನ್ನು ಉಪಯೋಗಿಸಿ).

2. ಧರ್ಮಶಾಸ್ತ್ರಕ್ಕೆ ವಿಧೇಯನಾಗುವುದರ ಮೂಲಕ ನೀತಿವಂತನಾಗಲು ಪ್ರಯತ್ನಿಸುವವನು ದೇವರ ಕೃಪೆಯನ್ನು ತಿರಸ್ಕರಿಸುವವನೂ (ಹೋಲಿಸಿ 2:21) ಮತ್ತು ಕ್ರಿಸ್ತನಿಂದ ಅಗಲಿದವನೂ ಆಗಿದ್ದಾನೆ (ವ. 3-4).

3. ನಾವು ನಿರೀಕ್ಷಿಸುವ ನೀತಿವಂತಿಕೆಯನ್ನು ನಾವು "ದೇವರಾತ್ಮನ ಮೂಲಕ ನಂಬಿಕೆಯಿಂದ (ವ. 5)" ಹೊಂದಿಕೊಳ್ಳುತ್ತೇವೆ. ಇದರರ್ಥ ಯೇಸುಕ್ರಿಸ್ತನ ಎರಡನೇ ಬರೋಣ ಮತ್ತು ದೇವರ ಅಂತಿಮ ನ್ಯಾಯತೀರ್ಪಿನ ದಿನದ ನಿರೀಕ್ಷೆಯಲ್ಲಿ ನಮ್ಮ ಜೀವಿತಗಳನ್ನು ನಡೆಸುವವರಾಗಿದ್ದೇವೆ. ಆ ದಿನ ನಮ್ಮ "ನೀತಿವಂತಿಕೆಯ ನಿರೀಕ್ಷೆ" (ಅಥವಾ ಅವರ ನ್ಯಾಯನಿರ್ಣಯ) ಯು ಪೂರ್ಣಗೊಳ್ಳುತ್ತದೆ. ಅಲ್ಲಿಯವರೆಗೂ ಪವಿತ್ರಾತ್ಮನ ಮಾರ್ಗದರ್ಶನ ಮತ್ತು ಸಹಾಯದೊಂದಿಗೆ ನಾವು ಭಯಭಕ್ತಿಯಿಂದ ಬದುಕಬೇಕೆಂದು ದೇವರು ಅಪೇಕ್ಷಿಸುತ್ತಾನೆ.

4. ವಚನ 6 ರಲ್ಲಿ ಸುನ್ನತಿಯ ಕುರಿತು ಪೌಲನು: ಕ್ರಿಸ್ತ ಯೇಸುವಿನಲ್ಲಿರುವ ವ್ಯಕ್ತಿಯೊಬ್ಬನಿಗೆ ಸುನ್ನತಿಯಾದರೂ, ಸುನ್ನತಿಯಾಗದಿದ್ದರೂ ಅದರಿಂದೇನೂ ಪ್ರಯೋಜನವಿಲ್ಲ. ಕ್ರಿಸ್ತನಲ್ಲಿನ ವಿಶ್ವಾಸಿಯೊಬ್ಬನ ಜೀವಿತವು ನಂಬಿಕೆ ಮತ್ತು ಪ್ರೀತಿಯೆಂಬ ಎರಡು ಕಾಲುಗಳ ಮೇಲೆ ನಿಂತುಕೊಂಡಿದೆ. ಯೇಸುಕ್ರಿಸ್ತನಲ್ಲಿನ ನಂಬಿಕೆಯು ನಮಗೆ ನೀತಿವಂತಿಕೆಯನ್ನು ತಂದುಕೊಡುತ್ತದೆ. ದೇವರ ಪ್ರೀತಿ ಮತ್ತು ನಮ್ಮ ನೆರೆಹೊರೆಯವರ ಪ್ರೀತಿಯು ನಮ್ಮಲ್ಲಿನ ದೇವರ ನೀತಿವಂತಿಕೆಯ ಸ್ಪಷ್ಟಪಡಿಸುವಿಕೆಯಾಗಿದೆ ಮತ್ತು ಇದು ನಮ್ಮ ಜೀವಿತಗಳಲ್ಲಿನ ಪವಿತ್ರಾತ್ಮನ ಕಾರ್ಯವಾಗಿದೆ. ನಮ್ಮ ನಂಬಿಕೆಯು ನಮ್ಮ ಪ್ರೀತಿಯ ಮೂಲಕ ವ್ಯಕ್ತಪಡಿಸಲಾಗುತ್ತದೆ. ಹಾಗಾಗಿ ಸುನ್ನತಿಯು ಒಂದು ಸಹಾಯಕ್ಕಿಂತಲೂ ಮಿಗಿಲಾಗಿ ಒಂದು ಅಡ್ಡಿ/ ಅಡತಡೆಯಾಗುತ್ತದೆ. ಈ ಹಿಂದೆ ವಚನ 2 ರಲ್ಲಿ ಪೌಲನು ಸುನ್ನತಿಯ ಅಪಾಯದ ಬಗ್ಗೆ ಗಲಾತ್ಯದವರನ್ನು ಎಚ್ಚರಿಸುತ್ತಾನೆ: ಸುನ್ನತಿಯು (ಇದರೊಂದಿಗೆ ಯೆಹೂದಿ ಧರ್ಮಶಾಸ್ತ್ರ/ ನೇಮನಿಷ್ಠೆಯನ್ನು ಪಾಲಿಸುವುದು ಸಹ) ನಮ್ಮನ್ನು ದೇವರ ಮತ್ತು ಆತನ ನೀತಿವಂತಿಕೆಯ ಹತ್ತಿರಕ್ಕೆ ಕೊಂಡೊಯ್ಯಬಲ್ಲದೆಂದು ಯೋಚಿಸುವುದ ನಿಜವಾಗಲೂ ಕ್ರಿಸ್ತನನ್ನು ಅಲ್ಲಗಳೆಯುವುದಾಗಿದೆ!

5. ತಾನು ಸಾರುವ ಸುವಾರ್ತೆಯ ಕಾರಣದಿಂದ ಪೌಲನು ಇನ್ನೂ ಸಹ ಹಿಂಸೆಪಡುತ್ತಿದ್ದಾನೆ, ಅದು ಯೇಸುಕ್ರಿಸ್ತನ ಕ್ರೂಜೆಗೇರಿಸುವುದರ ಮೇಲಣ ನಂಬಿಕೆಯ ಮೂಲಕವೇ ಹೊರತು ಬೇರಾವುದರಿಂದ ಸಿಗದ ನೀತಿನಿರ್ಣಯದ ಒಂದು ಸುವಾರ್ತೆಯ ನಿಮಿತ್ತವಾಗಿದೆ. ಬದಲಾಗಿ ಆತನು "ನಂಬಿಕೆ ಮತ್ತು ಸುನ್ನತಿ" ಯು ನೀತಿನಿರ್ಣಯ ಮತ್ತು ರಕ್ಷಣೆಗೆ ಮಾರ್ಗವಾಗಿದೆ ಎಂಬ ಸುಳ್ಳು ಸುವಾರ್ತೆಯನ್ನು ಸಾರಿದ್ದರೆ ಆತನೆಂದಿಗೂ ಹಿಂಸೆಗೊಳಗಾಗುತ್ತಿರಲಿಲ್ಲ. ಶಿಲುಬೆಯ ಕುರಿತ ಪೌಲನ ಬೋಧನೆಯು ("ಕೃಪೆಯಿಂದಲೇ ನೀತಿನಿರ್ಣಯ") "ಕರ್ಮ/ ಸತ್ಕ್ರಿಯೆಗಳಿಂದಲೇ ನೀತಿನಿರ್ಣಯವೆಂದು ನಂಬುವವರೆಲ್ಲರಿಗೂ ಮನನೋಯಿಸುವಂಥದ್ದಾಗಿದೆ.

## ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಈ ವಾಕ್ಯಭಾಗದಲ್ಲಿ ಪೌಲನು ಸ್ಪಷ್ಟವಾಗಿ ತನ್ನ ಕಾಳಜಿ ಮತ್ತು ಸಿಟ್ಟನ್ನು ತೋರಿಸುತ್ತಾನೆ:

    - ಆತನು ಪದೇ ಪದೇ ಗಲಾತ್ಯರನ್ನು ಸುಬೋಧಿಸುತ್ತಾನೆ (ವ. 2, 3, 4, 7, 8). ತನ್ನ ಮಾತಿಗೆ ಕಿವಿಗೊಡಬೇಕೆಂದು ಅವರನ್ನು ಒತ್ತಾಯಿಸುತ್ತಾ, ತನ್ನ ಸಂದೇಶವನ್ನು ಅವರಿಗೆ ಹೊಡೆಯುತ್ತಾ, ಅವರನ್ನು ಎಚ್ಚರಿಸುತ್ತಾ ಅವರ ನಡವಳಿಕೆಯನ್ನು ಪ್ರಶ್ನಿಸುತ್ತಾನೆ.

    - ಯೆಹೂದಿ ಮತದವರ ಬಗ್ಗೆ ಆತನು ಅಸಮಧಾನಗೊಂಡಿದ್ದಾನೆ. ಅವರು ಹುಳಿಯಂತಿದ್ದು, ಅದು ಎಲ್ಲಾ ಸಭೆಗಳನ್ನು ಹಾಳು ಮಾಡುವುದು (ವ. 9, ಅವರಿಗೆ ತೊಂದರೆಕೊಟ್ಟು, ಅವರನ್ನು ಗಲಿಬಿಲಿಗೊಳಿಸುವುದು, ವ. 10) ಮತ್ತು ಅವರು ದಂಡೆನೆಯನ್ನು ಅನುಭವಿಸುವರು (ವ. 10), ಅವರು ಅಂಗಚ್ಛೇದನೆಯನ್ನು ಮಾಡಿಸಿಕೊಳ್ಳಬೇಕೆಂದು ಆತನು ಹೇಳುತ್ತಾನೆ (ವ. 12 ಮತ್ತು ಕೇವಲ ಸುನ್ನತಿಯ ಸಮಯದಲ್ಲಿ ಮುಂದೊಗಲನ್ನು ಮಾತ್ರ ತೆಗೆಯುವುದಲ್ಲ)

2. ವಚನ 9 ರಲ್ಲಿ ಪೌಲನು ತನ್ನ ಅಂಶವನ್ನು ವಿವರಿಸಲು ಒಂದು ಗಾದೆಯನ್ನುಪಯೋಗಿಸುತ್ತಾನೆ: ಸ್ವಲ್ಪ ಹುಳಿಯು ಇಡೀ ಕಣಕವನ್ನೆಲ್ಲ ಹುಳಿಯನ್ನಾಗಿ ಮಾಡುವುದು. ಇದನ್ನು ಪೌಲನು ಯೆಹೂದಿ ಮತದವರ ಬೋಧನೆ ಮತ್ತು ಸಭೆಗಳ ಮೇಲೆ ಅದು ಬೀರುವ ಪರಿಣಾಮವನ್ನು ಸೂಚಿಸಿ ಹೇಳುತ್ತಾನೆ. ಅವರ ಸುಳ್ಳು ಸಿದ್ಧಾಂತವು ("ನೀವು ಯಾಕೆ ಸುನ್ನತಿಯನ್ನು ಮಾಡಿಸಿಕೊಳ್ಳಬಾರದು? ಇದು ದೇವರನ್ನು ಮೆಚ್ಚಿಸುತ್ತದೆ! ದೇವರ ಆಜ್ಞೆಗಳನ್ನು ಪಾಲಿಸದೆ ಒಬ್ಬ ವ್ಯಕ್ತಿಯು ನೀತಿವಂತನಾಗಲು ಹೇಗೆ ಸಾಧ್ಯ?") ಕ್ರಮೇಣವಾಗಿ ವಿಶ್ವಾಸಿಗಳನ್ನು ಶಿಲುಬೆಗೆ ಹಾಕಲ್ಪಟ್ಟ ಕ್ರಿಸ್ತನ ಮೇಲಣ ನಂಬಿಕೆಯ ಮೂಲಕ ಸಿಗುವ ರಕ್ಷಣೆ ಮತ್ತು ದೇವರ ಕೃಪೆಯ ನಿಜವಾದ ಸುವಾರ್ತೆಯಿಂದ ದೂರ ಮಾಡುತ್ತದೆ.

3. ಈ ವಾಕ್ಯಭಾಗದಲ್ಲಿ ಪೌಲನು ಎರಡು ಬಗೆಯ ನಂಬಿಕೆಗಳನ್ನು ತದ್ವಿರುದ್ಧವಾಗಿಸುತ್ತಾನೆ (ಒಬ್ಬ ಸತ್ಯವೇದ ಪಂಡಿತರು "ಎರಡು ಧರ್ಮಗಳು" ಎಂಬ ಹೇಳಿಕೆಯನ್ನು ಸಹ ಉಪಯೋಗಿಸುತ್ತಾರೆ):

    - ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವುದರ ಮೂಲಕ ನೀತಿವಂತರೆಂಬ ನಿರ್ಣಯ ಮತ್ತು ರಕ್ಷಣೆ: ಇದು "ಕರ್ಮಗಳಿಂದ/ ಕ್ರಿಯೆಗಳಿಂದ" ಸಿಗುವ ರಕ್ಷಣೆಯಾಗಿದೆ. ಈ ರೀತಿಯ ನಂಬಿಕೆಯನ್ನು ವಿವರಿಸಲು/ ವರ್ಣಿಸಲು ಪೌಲನು ಇಂತಹ ಪದಗಳು ಮತ್ತು ಹೇಳಿಕೆಗಳನ್ನು ಬಳಸುತ್ತಾನೆ: ದಾಸತ್ವದ ನೊಗ, ಸುನ್ನತಿ, ಧರ್ಮಶಾಸ್ತ್ರ/ ನೇಮನಿಷ್ಠೆಯಿಂದ ನೀತಿವಂತರಾಗಲು ಪ್ರಯತ್ನಿಸುವುದು, ಇಡೀ ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವ ಹಂಗಿನಲ್ಲಿದ್ದಾರೆ, ಕೃಪಾಶ್ರಯದೊಳಗಿಂದ ಬಿದ್ದುಹೋಗಿದ್ದಾರೆ, ಕ್ರಿಸ್ತನಿಂದ ಅಗಲಿ ಹೋದರು, ಕ್ರಿಸ್ತನಿಂದ ಯಾವುದೇ ಪ್ರಯೋಜನವಿಲ್ಲದಂತಾಗಿದೆ.

    - ಕ್ರಿಸ್ತನ ಮೇಲಿನ ನಂಬಿಕೆಯ ಮೂಲಕ ನೀತಿನಿರ್ಣಯ ಮತ್ತು ರಕ್ಷಣೆ: ಇದು "ಕೃಪೆಯ ಮೂಲಕ ರಕ್ಷಣೆ" ಯಾಗಿದೆ. ಈ ಬಗೆಯ ನಂಬಿಕೆಯನ್ನು ವಿವರಿಸಲು ಪೌಲನು ಇಂತಹ ಪದ ಮತ್ತು ಹೇಳಿಕೆಗಳನ್ನುಪಯೋಗಿಸುತ್ತಾನೆ: ಸ್ವಾತಂತ್ರ್ಯ, ಕ್ರಿಸ್ತನು ನಮ್ಮನ್ನು ಬಿಡುಗಡೆ ಮಾಡಿದ್ದಾನೆ, ದೇವರಾತ್ಮನು, ನಂಬಿಕೆಯಿಂದ, ನೀತಿವಂತರಾಗುತ್ತೇವೆಂಬ ನಿರೀಕ್ಷೆ, ಕ್ರಿಸ್ತನಲ್ಲಿ, ನಂಬಿಕೆಯಿಂದ ಎದುರುನೋಡುತ್ತೇವೆ, ಪ್ರೀತಿಯಿಂದ ಕೆಲಸ ನಡಿಸುವ ನಂಬಿಕೆ, ಸತ್ಯಕ್ಕೆ ವಿಧೇಯರಾಗುವುದು, ಕ್ರಿಸ್ತನ ಶಿಲುಬೆ.

    ಈ ಎರಡು ಬಗೆಯ (ರೀತಿಯ) ನಂಬಿಕೆಗಳನ್ನು ಒಟ್ಟಾಗಿ ಸೇರಿಸಲಾಗದೆಂಬುದನ್ನು ಪೌಲನು ಗಲಾತ್ಯದವರಿಗೆ ಸ್ಪಷ್ಟಪಡಿಸುತ್ತಾನೆ. "ಕ್ರಿಯೆ/ ಕರ್ಮಗಳು ಮತ್ತು ಕೃಪೆಯ ಮೂಲಕ ನೀತಿನಿರ್ಣಯ ಮತ್ತು ರಕ್ಷಣೆ" ಎಂಬುದಾಗಿ ವಿವರಿಸ/ ವರ್ಣಿಸಬಹುದಾದ ಸುವಾರ್ತೆಯನ್ನು ಯೆಹೂದಿ ಮತದವರು ಸಾರುತ್ತಿದ್ದರು. ಈ ದುರ್ಬೋಧನೆಯು ಗಲಾತ್ಯದಲ್ಲಿರುವ

ಸಭೆಗಳಿಗೆ ವಿಷಕಾರಿಯಾಗಿ ಅವುಗಳನ್ನು ಹಾಳುಮಾಡುತ್ತಿತ್ತು. ಪೌಲನು ಈ ದುರ್ಬೋಧನೆಯನ್ನು ಬಹಿರಂಗಪಡಿಸಿ ಅದನ್ನು ಬಲವಾಗಿ ವಿರೋಧಿಸುತ್ತಾನೆ !

# ಉತ್ತರಗಳು 13: ಆತ್ಮನಲ್ಲಿ ಜೀವಿಸಿರಿ (5:13-26)

## ಪ್ರಶ್ನೆಗಳಿಗೆ ಉತ್ತರಗಳು

1. ವಿಶ್ವಾಸಿಗಳಾಗಿ ನಮ್ಮ ಸ್ವಾತಂತ್ರ್ಯದ ಮೂಲ ಕ್ರಿಸ್ತನಾಗಿದ್ದಾನೆ. ಆತನು ನಮ್ಮನ್ನು ಬಿಡುಗಡೆ ಮಾಡಿದ್ದಾನೆ (ವ. 17). ವಚನ 13 ರಲ್ಲಿ ಪೌಲನು ಕ್ರಿಸ್ತನಲ್ಲಿನ ನಮ್ಮ ಸ್ವಾತಂತ್ರ್ಯದ ಕುರಿತು ಎರಡು ಪ್ರಾಮುಖ್ಯ ಸಂಗತಿಗಳನ್ನು/ ಅಂಶಗಳನ್ನು ಸೇರಿಸುತ್ತಾನೆ:
    - ಸ್ವತಂತ್ರರಾಗಿರುವುದು ನಮ್ಮ ಕ್ರೈಸ್ತೀಯ ಕರೆಯಾಗಿದೆ.
    - ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಳ್ಳಬಹುದು, ಆದುದರಿಂದ ನಾವಿದನ್ನು ಹೇಗೆ ಉಪಯೋಗಿಸುತ್ತೇವೆಂದು ಜಾಗ್ರತಿಯಿಂದಿರಬೇಕು.
2. ಗಲಾತ್ಯ 5:16-26 ರಲ್ಲಿ ಪೌಲನು "ಶರೀರವನ್ನು" "ಆತ್ಮದೊಂದಿಗೆ" ತದ್ವಿರುದ್ಧವಾಗಿಸುತ್ತಾನೆ. ಇವೆರಡರ ನಡುವಿನ ತದ್ವಿರುದ್ಧತೆಯು ಗಲಾತ್ಯ ಪತ್ರಿಕೆಯಲ್ಲಿ ಒಂದು ಮರುಕಳಿಸುವ ವಿಷಯವಾಗಿದೆ (3:3, 4:29, 6:8 ನ್ನು ನೋಡಿರಿ). "ಶರೀರ"ವು ಮಾನವನ ಬೀಳುವಿಕೆಯ ಸ್ವಭಾವವನ್ನು, ಈ ಲೋಕದಲ್ಲಿ ಮಾನವನ ಪಾಪಮಯ ಸ್ವಭಾವವನ್ನು ಸೂಚಿಸುತ್ತದೆ. "ದೇವರಾತ್ಮ"ವೆಂದರೆ ವಿಶ್ವಾಸಿಗಳಲ್ಲಿ ವಾಸಿಸುವ ಮತ್ತು ಕ್ರಿಸ್ತನಲ್ಲಿ ನಂಬಿಕೆಯಿಡುವ ನಮ್ಮ ಮೂಲಕ ಕಾರ್ಯ ಮಾಡುವ ಪವಿತ್ರಾತ್ಮನಾಗಿದ್ದಾನೆ. (4:23 ರಲ್ಲಿ ಪೌಲನು ಅಬ್ರಹಾಮನ ಇಬ್ಬರು ಮಕ್ಕಳಾದ ಇಷ್ಮಾಯೇಲ (ದಾಸಿಯಾದ ಹಾಗರಳ ಮಗನು) ಮತ್ತು ಇಸಾಕ (ತನ್ನ ಪತ್ನಿಯಾದ ಸಾರಳ ಮಗನು) ರನ್ನು ಹೋಲಿಸುವಾಗ "ಶರೀರ"ವನ್ನು "ವಾಗ್ದಾನ"ದೊಂದಿಗೆ ತದ್ವಿರುದ್ಧಗೊಳಿಸುತ್ತಾನೆ. ತಮ್ಮ ರಕ್ಷಕನೆಂದು ಕ್ರಿಸ್ತನ ಮೇಲೆ ನಂಬಿಕೆಯಿಡುವ ಬದಲು ತಮ್ಮ ನೀತಿವಂತಿಕೆಗಾಗಿ ಧರ್ಮಶಾಸ್ತ್ರವನ್ನು ಅವಲಂಬಿಸುವವರು ಶಾರೀರಿಕವಾಗಿ ಅಬ್ರಹಾಮನ ಮಕ್ಕಳಾಗಿದ್ದಾರೆ. ನಮ್ಮ ನೀತಿವಂತಿಕೆಗಾಗಿ ಕ್ರಿಸ್ತನಲ್ಲಿ ನಂಬಿಕೆಯಿಡುವ ನಾವು ಅಬ್ರಹಾಮನ ನಿಜವಾದ ಮಕ್ಕಳು, ವಾಗ್ದಾನದ ಮಕ್ಕಳಾಗಿದ್ದೇವೆ).
3. ಗಲಾತ್ಯ 5:16-26 ರಲ್ಲಿ ಪೌಲನು ಎರಡು ಪಟ್ಟಿಗಳನ್ನು ಮುಂದಿಡುತ್ತಾನೆ: ಕೆಟ್ಟ ಸಂಗತಿಗಳೊಂದಿಗಿನ ಪಟ್ಟಿಯು "ಶರೀರಭಾವದ ಕರ್ಮಗಳು" ಎಂಬ ತಲೆಬರಹವನ್ನು ಹೊಂದಿದೆ. ಒಳ್ಳೆಯ ಸಂಗತಿಗಳೊಂದಿಗಿನ ಪಟ್ಟಿಯು "ದೇವರಾತ್ಮನ ಫಲ" ಎಂಬ ತಲೆಬರಹವನ್ನು ಹೊಂದಿದೆ.
4. ಶರೀರಭಾವದ ಕಾರ್ಯಗಳನ್ನು ನಡಿಸುವವರು ದೇವರ ರಾಜ್ಯಕ್ಕೆ ಬಾಧ್ಯರಾಗುವುದಿಲ್ಲ (ವ. 21). ಆದುದರಿಂದ ಅವರು ದೇವಜನರೊಂದಿಗೆ ಒಂದು ಭವಿಷ್ಯವನ್ನು ಮುನ್ನೋಡಲಾಗದು.
5. ಧರ್ಮಶಾಸ್ತ್ರವು ದೇವರಾತ್ಮನ ಫಲಗಳಿಗೆ ವಿರುದ್ಧವಾದುದ್ದಲ್ಲ (ವ. 23). ದೇವರಾತ್ಮನಿಂದ ನಡಿಸಿಕೊಳ್ಳುತ್ತಿರುವ ನಾವು ಸ್ವತಂತ್ರರಾಗಿದ್ದು, ಧರ್ಮಶಾಸ್ತ್ರಕ್ಕೆ ದಾಸರಲ್ಲ (4:7). ಹಾಗಾಗಿ ನಾವು ಧರ್ಮಶಾಸ್ತ್ರಕ್ಕೆ/ ನೇಮನಿಷ್ಠೆಗಳಿಗೆ ಅಧೀನರಲ್ಲ (5:18). ಬದಲಾಗಿ ನಾವು ಮಹಾ ಆಜ್ಞೆಯನ್ನು ಪಾಲಿಸುವುದರ ಮೂಲಕ ("ದೇವರನ್ನು ಪ್ರೀತಿಸಿರಿ ಮತ್ತು ನಿಮ್ಮಂತೆಯೇ ನಿಮ್ಮ್ಮ ನೆರೆಯವರನ್ನೂ ಪ್ರೀತಿಸಿರಿ"). ಪವಿತ್ರಾತ್ಮನ ಸಹಾಯ ಮತ್ತು ನಡೆಸುವಿಕೆಯೊಂದಿಗೆ ನಾವು "ಕ್ರಿಸ್ತನ ನಿಯಮ"ವನ್ನು ನೆರವೇರಿಸುವವರಾಗಿದ್ದೇವೆ. ನಂಬುವವರಾದ ನಮ್ಮಲ್ಲಿ ಪವಿತ್ರಾತ್ಮನ ಮೂಲಕ ಯೇಸುಕ್ರಿಸ್ತನು ವಾಸಿಸುತ್ತಾನೆ. ನಾವು ಹೆಚ್ಚುಹೆಚ್ಚಾಗಿ ಆತನಂತೆ ಆಗುವಾಗ (2 ಕೊರಿಂಥ 3:18), ನಮ್ಮ ಜೀವಿತಗಳು ದೇವರಾತ್ಮನ ಫಲವನ್ನು ಕೊಡುವಾಗ ನಾವು ಕ್ರಿಸ್ತನ ನಿಯಮವನ್ನು ನೆರವೇರಿಸುತ್ತೇವೆ.

## ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಗಲಾತ್ಯ 5:13-15 ರಲ್ಲಿ ನಾವು ಕ್ರೈಸ್ತೀಯ ಸ್ವಾತಂತ್ರ್ಯದ ಬಗ್ಗೆ ಈ ಸಂಗತಿಗಳನ್ನು ಕಲಿಯುತ್ತೇವೆ:

    - ಸ್ವಾತಂತ್ರ್ಯವು ಕ್ರೈಸ್ತೀಯ ಜೀವಿತ ಮತ್ತು ಅನುಭವಕ್ಕೆ ಮೂಲಭೂತವಾದುದ್ದಾಗಿದೆ: ನಾವು ಕ್ರಿಸ್ತನಲ್ಲಿನ ಸ್ವಾತಂತ್ರ್ಯಕ್ಕಾಗಿ ಕರೆಯಲ್ಪಟ್ಟಿದ್ದೇವೆಯೇ ಹೊರತು, ಪಾಪಕ್ಕೆ ದಾಸರಾಗುವುದಕ್ಕಲ್ಲ. ನಾವು ಸ್ವಾತಂತ್ರ್ಯದಲ್ಲಿ ಬದುಕುತ್ತೇವೆಯೇ ಹೊರತು ಯೆಹೂದಿ ಧರ್ಮಶಾಸ್ತ್ರಕ್ಕೆ ದಾಸರಾಗಿ ಅಲ್ಲ.

    - ಕ್ರೈಸ್ತೀಯ ಸ್ವಾತಂತ್ರ್ಯವು ಒಂದು ಜವಾಬ್ದಾರಿಯೊಂದಿಗೆ ಬರುತ್ತದೆ. ಈ ಜವಾಬ್ದಾರಿಯು ನಮ್ಮ ರಕ್ಷಕನಾದ ಕ್ರಿಸ್ತನಿಗಾಗಿದೆ. ಇದು ನಮ್ಮ ಪಾಪಮಯ ಸ್ವಭಾವವನ್ನು ತಣಿಸುವುದಕ್ಕಾಗಿ ಬಳಸುವ ಒಂದು ಸ್ವಾರ್ಥಮಯವಾದ ಸ್ವಾತಂತ್ರ್ಯವಲ್ಲ. ಆದರೆ ಇದು ಒಬ್ಬರಿಗೊಬ್ಬರು ಅಧೀನರಾಗಿದ್ದು, ಪರಸ್ಪರ ಒಬ್ಬರಿಗೊಬ್ಬರು ಸೇವೆ ಮಾಡುವುದಕ್ಕಾಗಿ ಇರುವ ಸ್ವಾತಂತ್ರ್ಯವಾಗಿದೆ. ಹೀಗಾಗಿ ನಮ್ಮ ಸ್ವಾತಂತ್ರ್ಯದ ಜೀವಿತವು ಕ್ರಿಸ್ತನನ್ನು ಮತ್ತು ಆತನ ರಾಜ್ಯದ ಮೌಲ್ಯಗಳನ್ನು ಪ್ರತಿಬಿಂಬಿಸುತ್ತದೆ. ಮುಂಬರುವ ವಾಕ್ಯಭಾಗದಲ್ಲಿ ಪೌಲನು (5:16-26), ಕ್ರಿಸ್ತನ ಪವಿತ್ರಾತ್ಮನು ನಮ್ಮಲ್ಲಿ ವಾಸಿಸುತ್ತಾ, ನಮ್ಮ ಮೂಲಕ ಕಾರ್ಯಮಾಡುವುದರಿಂದ ಇದು ಸಾಧ್ಯವೆಂಬುದನ್ನು ಪೌಲನು ತೋರಿಸುತ್ತಾನೆ.

    - ಕ್ರೈಸ್ತೀಯ ಸ್ವಾತಂತ್ರ್ಯವು ಪ್ರೀತಿಯ ಮಹಾ ಆಜ್ಞೆಯ ಮೂಲಕ ವ್ಯಕ್ತವಾಗಿದೆ. "ದೇವರನ್ನು ಪ್ರೀತಿಸಿರಿ ಮತ್ತು ನಿನ್ನ ನೆರೆಯವರನ್ನು ನಿಮ್ಮಂತೆಯೇ ಪ್ರೀತಿಸಿರಿ"

2. ಗಲಾತ್ಯದಲ್ಲಿನ ಸಭೆಗಳೊಳಗಿನ ಜಗಳ/ ಸಂಘರ್ಷವು ಗಂಭೀರವಾಗಿತ್ತೆಂಬುದಾಗಿ ವಚನ 15 ತಿಳಿಸುತ್ತದೆ. ಯೆಹೂದಿ ಮತದವರು ಬೋಧಿಸಿದ ದುರ್ಬೋಧನೆಯು ಉಂಟುಮಾಡಿದ ಆತಂಕವು ಸಭೆಗಳನ್ನು ಮತ್ತು ವಿಶ್ವಾಸಿಗಳ ನಂಬಿಕೆಗಳನ್ನು ಹಾಳುಮಾಡಲು ಹೆದರಿಸಿತು.

3. ಕ್ರಿಸ್ತನಲ್ಲಿನ ವಿಶ್ವಾಸಿಗಳ ಜೀವಿತದಲ್ಲಿ ಪವಿತ್ರಾತ್ಮನ ಪಾತ್ರ (ಗಲಾತ್ಯ 5:16-26 ರ ಆಧಾರ ಮೇಲೆ):

    - ಆತ್ಮನ ಮೂಲಕ ನಮಗೆ ಜೀವವಿದೆ (ವ. 25): ಅಂದರೆ ನಾವು ಕ್ರಿಸ್ತನನ್ನು ಅಂಗೀಕರಿಸಿದಾಗ, ಪವಿತ್ರಾತ್ಮನು ನಮ್ಮ ಮನುಷ್ಯ ಆತ್ಮಗಳನ್ನು ನಿಜವಾಗಲೂ ಜೀವವುಳ್ಳದ್ದಾಗಿ, ಆತ್ಮೀಕವಾಗಿ ಜೀವವುಳ್ಳದ್ದಾಗಿ ಮಾಡಿದ್ದಾನೆ. ಯೇಸುವು "ಆತ್ಮನಿಂದ ಹುಟ್ಟಬೇಕು" ಎಂಬ ಮಾತನ್ನು ಉಪಯೋಗಿಸುತ್ತಾನೆ (ಯೋಹಾನ 3:3-6).

    - ನಂಬುವವರಾದ ನಮ್ಮಲ್ಲಿ ಪವಿತ್ರಾತ್ಮನು ವಾಸಿಸುತ್ತಾನೆ ಮತ್ತು ನಾವು ನಿರಂತರವಾಗಿ ಪವಿತ್ರಾತ್ಮನನ್ನುಸರಿಸಿ ನಡೆದುಕೊಳ್ಳಬೇಕು (ವ. 16). 1 ಥೆಸಲೋನಿಕ 5:19 ರಲ್ಲಿ ಪೌಲನು ತನ್ನ ಓದುಗರಿಗೆ "ಪವಿತ್ರಾತ್ಮನನ್ನು ನಂದಿಸಬೇಡಿರಿ" ಎಂದು ಹೇಳುತ್ತಾನೆ. ನಾವು ಆತ್ಮೀಕವಾಗಿ ಬದುಕಿರಬೇಕು/ ಜೀವಂತವಾಗಿರಬೇಕು, ತಿರುಗಿರಬಾರದು ಅಥವಾ ಹಿಂಜಾರಿ ಹೋಗಿರಬಾರದು. ನಾವು "ದೇವರಾತ್ಮನಿಂದ ನಡೆಸಿಕೊಳ್ಳುವ"ವರಾಗಿರಬೇಕು (ವಚನ 18 ಮತ್ತು ನನ್ನ ಟಿಪ್ಪಣಿ).

    - ನಂಬುವವರಾದ ನಮ್ಮ ಮೂಲಕ ಪವಿತ್ರಾತ್ಮನು ಕಾರ್ಯಮಾಡುತ್ತಾನೆ ಮತ್ತು ನಾವು ಅನುವುಮಾಡಿಕೊಡುವವರೆಗೂ ನಮ್ಮ ಜೀವಿತದಲ್ಲಿ ಆತನು ಆತ್ಮೀಕ ಫಲಗಳನ್ನು ಉಂಟುಮಾಡುತ್ತಾನೆ (ವ. 22-23). ನಮ್ಮ ಜೀವಿತಗಳಲ್ಲಿ ಆತ್ಮೀಕ ಫಲದ ಬೆಳವಣಿಗೆಯನ್ನು ನಾವು ಸಕ್ರಿಯವಾಗಿ ಉತ್ತೇಜಿಸಬೇಕು.

    - ನಂಬುವವರಾದ ನಮ್ಮನ್ನು ಪವಿತ್ರಾತ್ಮನು ನಡೆಸುತ್ತಾನೆ (ವ. 25). ಹಾಗಾಗಿ ದೈನಂದಿನ ಮಾರ್ಗದರ್ಶನಕ್ಕಾಗಿ/ ನಡೆಸುವಿಕೆಗಾಗಿ ನಾವು ಪವಿತ್ರಾತ್ಮನನ್ನು ನಂಬಬೇಕು ಮತ್ತು ಆತನ ಮಾರ್ಗದರ್ಶನಕ್ಕೆ ವಿಧೇಯರಾಗಿರಬೇಕು.

4. ಖಂಡಿತವಾಗಿಯೂ ಪೌಲನ ಪಟ್ಟಿಗಳು ಇನ್ನೂ ಮುಗಿದಿಲ್ಲ!

5. ಗಲಾತ್ಯದಲ್ಲಿನ ಸಭೆಗಳಲ್ಲಿ ಮತ್ಸರ ಮತ್ತು ಆತ್ಮೀಕ ಅಹಂಕಾರ/ ಗರ್ವದ ಸಮಸ್ಯೆಯಿತ್ತೆಂಬುದನ್ನು ವಚನ 26 ರಿಂದ ನಾವು ತಿಳಿದುಕೊಳ್ಳಬಹುದು. ಕೆಲ ವಿಶ್ವಾಸಿಗಳು ಬೇರೆಯವರಿಗಿಂತ ತಮ್ಮನ್ನು ಹೆಚ್ಚು ಆತ್ಮೀಕರೆಂಬುದಾಗಿ ಪರಿಗಣಿಸಿದರು. ಇದು ಸಭೆಯ ಐಕ್ಯತೆಗೆ ಬೆದರಿಕೆಯನ್ನೊಡ್ಡುವ ಸ್ಪರ್ಧೆ ಮತ್ತು ಅಸೂಯೆ/ ಹೊಟ್ಟೇಕಿಚ್ಚಿಗೆ ನಡೆಸಿತು.

# ಉತ್ತರಗಳು 14: ಬಿತ್ತುವುದು ಮತ್ತು ಕೊಯ್ಯುವುದು (6:1-10)

## ಪ್ರಶ್ನೆಗಳಿಗೆ ಉತ್ತರಗಳು

1. ಪಾಪ/ ದೋಷದಲ್ಲಿ ಸಿಕ್ಕ ವಿಶ್ವಾಸಿಯೊಬ್ಬನು ಸರಿಪಡಿಸಲ್ಪಡಬೇಕು. ಆದರೆ ಶಾಂತಭಾವದಿಂದ ಮತ್ತು ಕಾಳಜಿಯಿಂದ ಆತನನ್ನು ಸರಿಪಡಿಸಬೇಕು (ವ. 1).

2. ಒಬ್ಬರು ಮತ್ತೊಬ್ಬರ ಭಾರವನ್ನು ಹೊತ್ತುಕೊಳ್ಳುವುದರಿಂದ ನಾವು ಕ್ರಿಸ್ತನ ನಿಯಮವನ್ನು ನೆರವೇರಿಸುತ್ತೇವೆಂದು ಪೌಲನು ವಚನ 2 ರಲ್ಲಿ ಹೇಳುತ್ತಾನೆ. ಹೊರಗಣ ಲೋಕದಿಂದ ಕಷ್ಟ ಮತ್ತು ಶೋಧನೆಗಳನ್ನು ನಾವು ಎದುರಿಸುವಾಗ ಸಭೆಯ ಒಳಗಡೆಯ ಬದುಕಿನಲ್ಲಿನ ನಾವು ಒಬ್ಬರಿಗೊಬ್ಬರು ಸಹಕರಿಸುತ್ತಾ ಪರಸ್ಪರ ಉತ್ತೇಜಿಸಬೇಕೆಂಬುದು ಈ ರೂಪಾಲಂಕಾರದ ಅರ್ಥವಾಗಿದೆ.

3. ನಮ್ಮ ಮನೋಭಾವ (ಮತ್ಸರ, ಅಹಂಕಾರ/ ಗರ್ವ, ಹೊಟ್ಟೇಕಿಚ್ಚು, ಇತರರಿಗೆ ಅಗೌರವದಂತಹ) ಮತ್ತು ಕ್ರಿಯೆಗಳಿಗಾಗಿ (ಉದಾಹರಣೆಗೆ ನಮ್ಮ ಸಹ ವಿಶ್ವಾಸಿಗಳನ್ನು ನೋಡಿಕೊಳ್ಳುವುದು/ ಉಪಚರಿಸುವುದು) ದೇವರಿಗೆ ನಮ್ಮ ವ್ಯಕ್ತಿಗತ ಜವಾಬ್ದಾರಿಯ ಹಿನ್ನಲೆಯಲ್ಲಿ ಪೌಲನು "ಪ್ರತಿಯೊಬ್ಬನು ಸ್ವಂತ ಹೊರೆಯನ್ನು ಹೊತ್ತುಕೊಳ್ಳಬೇಕು" ಎಂದು (ವ. 3-5) ಹೇಳುತ್ತಾನೆ.

4. ವಚನ 7 ರಲ್ಲಿ ಪೌಲನು ದೈನಂದಿನ ಜೀವನದಿಂದ ಒಂದು ರೂಪಾಲಂಕಾರವನ್ನುಪಯೋಗಿಸುತ್ತಾನೆ: ಬಿತ್ತುವುದು ಮತ್ತು ಕೊಯ್ಯುವುದು ಒಬ್ಬ ರೈತನು ತಾನು ಬಿತ್ತಿರುವ ಅಥವಾ ನೆಟ್ಟಿರುವ ಬೆಳೆಯನ್ನೇ ಕೊಯ್ಯುವನು. ತಾನು ಟೊಮ್ಯಾಟೋವನ್ನು ಬಿತ್ತಿದ್ದರೆ ಮೆಣಸಿನಕಾಯಿಯನ್ನು ಕೊಯ್ಯಲಾರನು. ಇದೇ ತತ್ವವು ವಿಶ್ವಾಸಿಗಳಾದ ನಮ್ಮ ಜೀವಿತಕ್ಕೆ ಅನ್ವಯವಾಗುತ್ತದೆ: ಒಂದು ವೇಳೆ ಕೆಟ್ಟದ್ದನ್ನು ಬಿತ್ತಿದ್ದರೆ, ಅದರಿಂದ ಒಳ್ಳೇಯದನ್ನು ನಾವು ಕೊಯ್ಯಲಾಗದು.

5. ತನ್ನ ಓದುಗರಿಗೆ ಒಂದು ಬುದ್ಧಿವಾದದೊಂದಿಗೆ ಪೌಲನು ಈ ವಾಕ್ಯಭಾಗವನ್ನು ಮುಕ್ತಾಯಗೊಳಿಸುತ್ತಾನೆ. ಆತನು ಅವರಿಗೆ ಒಳ್ಳೇಯದನ್ನು ಮಾಡಬೇಕೆಂದು ಹೇಳುತ್ತಾನೆ (ಆತನ ರೂಪಾಲಂಕಾರದ ಪ್ರಕಾರ ಒಳ್ಳೆಯ ಬೆಳೆಯನ್ನು ಬಿತ್ತಬೇಕು ಹೊರತು ಕೆಟ್ಟ ಬೆಳೆಯನ್ನಲ್ಲ). ಸಭೆಯ ಜೀವನದಲ್ಲಿ ಇದು ವಿಶೇಷವಾದ ಪ್ರಾಮುಖ್ಯತೆಯನ್ನು ಹೊಂದಿದೆ.

## ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ವಚನ 1 ರಿಂದ ಆತ್ಮೀಕ ಜನರಾದ ನಾವು (ಕ್ರಿಸ್ತನಿಗೆ ಸೇರಿದವರು, ಕ್ರಿಸ್ತನ ಆತ್ಮನಿಂದ ಹೊಸದಾಗಿ ಹುಟ್ಟಿದವರು, ಪವಿತ್ರಾತ್ಮನ ನಡೆಸುವಿಕೆಯಿಂದ ಜೀವಿಸುವವರು ಮತ್ತು ಆತ್ಮನ ಫಲವನ್ನು ಕೊಡುವವರು) ದೋಷ/ ಪಾಪದಲ್ಲಿ ಸಿಕ್ಕ ಒಬ್ಬ ಸಹ ವಿಶ್ವಾಸಿಯೊಂದಿಗೆ ಹೇಗೆ ವ್ಯವಹರಿಸಬೇಕೆಂಬುದನ್ನು ನಾವು ಕಲಿಯಬಹುದು. ಆ ವ್ಯಕ್ತಿಯನ್ನು ಕ್ರಿಸ್ತನೊಂದಿಗೆ ಮತ್ತು ಸಭೆಯೊಂದಿಗೆ ಪೂರ್ಣ ಅನ್ಯೋನ್ಯತೆಯೊಳಗೆ ತರುವುದೇ ನಮ್ಮ ಗುರಿಯಾಗಿರಬೇಕು. ನಾವು ಆತನನ್ನು ಸರಿಪಡಿಸಬೇಕು, ಆದರೆ ಎರಡು ಸಂಗತಿಗಳಿಂದ:

   - ನಾವು ಆ ವ್ಯಕ್ತಿಯನ್ನು ಶಾಂತಭಾವದಿಂದ ಸರಿಮಾಡಬೇಕು. ಇಲ್ಲಿ ದೋಷಿಯನ್ನು ಕೇಂದ್ರಿಕರಿಸಬೇಕು. ಆತನನ್ನು ಒಂದು ಪ್ರೀತಿಯ ಸಕಾರಾತ್ಮಕವಾದ ಮತ್ತು ರಚನಾತ್ಮಕವಾದ ರೀತಿಯಲ್ಲಿ ನಡೆಸಿಕೊಳ್ಳಬೇಕು.

- ನಾವು ದುಷ್ಪ್ರೇರಣೆ/ ಶೋಧನೆಗೆ ಒಳಗಾಗದಂತೆ ಎಚ್ಚರಿಕೆಯಾಗಿರಬೇಕು. ಇಲ್ಲಿ ಗಮನವು/ ದೃಷ್ಟಿಯು ಸರಿಮಾಡುವವನ ಮೇಲಿರುತ್ತದೆ. ದೋಷಿಯಂತೆ ಸರಿಮಾಡುವವನು ಸಹ ಅದೇ ಪಾಪವನ್ನು ಮಾಡುವ ದುಷ್ಪ್ರೇರಣೆಗೆ ಒಳಗಾಗುವನೆಂಬುದಾಗಿ ಪೌಲನು ಹೇಳುತ್ತಾನೆಂದು ನಾವು ಯೋಚಿಸುವುದಿಲ್ಲ. ನಾವು ಒಬ್ಬ ಪಾಪಿಯನ್ನು/ ದೋಷಿಯನ್ನು ಶಾಂತಭಾವದಿಂದಲೂ, ಪ್ರೀತಿಯಿಂದಲೂ ಸರಿಮಾಡಬೇಕೆಂದು ಪೌಲನು ಬಯಸುತ್ತಾನೆಂಬುದಾಗಿ ನಾನು ಯೋಚಿಸುತ್ತೇನೆ.

  ಕಠಿಣರೂ, ವಿವೇಚನೆಯಿಲ್ಲದವರೂ, ಪ್ರೀತಿಸದವರೂ, ಖಂಡಿಸುವವರೂ ಮತ್ತು ಆಪಾದಿಸುವವರೂ ಆಗುವುದೇ ನಮ್ಮ ಶೋಧನೆ/ ದುಷ್ಪ್ರೇರಣೆಯಾಗಿದೆ.

2. ವಚನ 2 ಮತ್ತು 1 ರ ನಡುವಿನ ಸಂಬಂಧವನ್ನು ಹೀಗೆ ಅರ್ಥೈಸಿಕೊಳ್ಳಬಹುದು: ಸಭೆಯ ಜೀವನ/ ಬದುಕಿನಲ್ಲಿ "ಒಬ್ಬರು ಮತ್ತೊಬ್ಬರ ಭಾರವನ್ನು ಹೊತ್ತುಕೊಳ್ಳುವುದು ಮತ್ತು ಆ ಮೂಲಕ ಕ್ರಿಸ್ತನ ನಿಯಮವನ್ನು ನೆರವೇರಿಸುವ" ಒಂದು ಉದಾಹರಣೆಯು (ವ. 2) ದೋಷಿಗಳನ್ನು ಮತ್ತು ಪಾಪಿಗಳನ್ನು ಒಂದು ಶಾಂತವಾದ ಮತ್ತು ಆತ್ಮೀಕವಾದ ರೀತಿಯಲ್ಲಿ (ಭಾವದಿಂದ) ಸರಿಮಾಡುವುದಾಗಿದೆ (ವ. 1).

3. ವಚನ 6 ರಲ್ಲಿನ "ಎಲ್ಲಾ ಒಳ್ಳೆಯವುಗಳಲ್ಲಿ ಪಾಲುಕೊಡಲಿ" ಎಂಬ ಪೌಲನ ಹೇಳಿಕೆಯನ್ನು ತದನಂತರದಲ್ಲಿ ಆತನು "ಆಳು ತನ್ನ ಕೂಲಿಗೆ ಯೋಗ್ಯನಾಗಿದ್ದಾನೆ" (1 ಕೊರಿಂಥ 9:6-11 ರೊಂದಿಗೆ ಹೋಲಿಸಿ) ಎಂದು ತಿಮೊಥೆಯನಿಗೆ ಬರೆಯುವದರ ಒಂದು ಬದಲಾವಣೆಯೆಂಬುದಾಗಿ ನಾವು ಅರ್ಥೈಸಿಕೊಳ್ಳಬೇಕೆಂದು ನಾನು ಯೋಚಿಸುತ್ತೇನೆ. ಒಂದು ಸಭೆಯು ಅದರ ಸಭಾಪಾಲಕನ ಭೌತಿಕ ಅಗತ್ಯತೆಗಳನ್ನು ನೋಡಿಕೊಳ್ಳಬೇಕು. ವಿಶ್ವಾಸಿಗಳು ದೇವರ ವಾಕ್ಯದ ಬೋಧಕರಿಂದ ಆಶೀರ್ವದಿಸಲ್ಪಡುವಾಗ, ತಮಗೆ ಬೋಧಿಸುವವರೊಂದಿಗೆ ತಮ್ಮ ಆಶೀರ್ವಾದವನ್ನು ಹಂಚಿಕೊಳ್ಳಬೇಕು. ಇದು "ಒಬ್ಬನು ಮತ್ತೊಬ್ಬನ ಭಾರವನ್ನು ಹೊತ್ತುಕೊಳ್ಳುವ ಮತ್ತು ಕ್ರಿಸ್ತನ ನಿಯಮವನ್ನು ನೆರವೇರಿಸುವುದರ ಒಂದು ಮಾದರಿಯಾಗಿದೆ.

4. ವಚನ 7-10 ರಲ್ಲಿ ಪೌಲನ ಸಂದೇಶ: ದೇವರು ನನ್ನ ಹೃದಯ ಮತ್ತು ಆತ್ಮವನ್ನು ನೋಡುತ್ತಾನೆ. ಭಕ್ತಿವಂತನೂ ಮತ್ತು ಆತ್ಮೀಕನಂತೆ ನಟಿಸುವುದರ ಮೂಲಕ ನಾನು ದೇವರನ್ನು ಮರುಳುಗೊಳಿಸಲಾಗದು. ಈಗ ನಾನು ಏನನ್ನು ಬಿತ್ತುವೆನೋ ಅದೇ ಸುಗ್ಗಿಯ ಸಮಯದಲ್ಲಿ ಫಲಕೊಡುವದು (ದೇವರ ನ್ಯಾಯತೀರ್ಪಿನ ದಿನ). ಹೀಗಾಗಿ ನನ್ನ ಜೀವಿತದಲ್ಲಿನ ಪವಿತ್ರಾತ್ಮನು ಈ ಲೋಕದಲ್ಲಿ ಮಾತ್ರ ಪವಿತ್ರಾತ್ಮನ ಫಲಗಳನ್ನು ಉಂಟುಮಾಡುವುದಿಲ್ಲ. ಈಗ ನನ್ನ ಜೀವಿತದಲ್ಲಿನ ಆತ್ಮನ ಫಲವು ನಿತ್ಯತ್ವಕ್ಕಾಗಿ ಸಹ ಪರಿಣಾಮಗಳನ್ನು ಹೊಂದಿದೆ. ನ್ಯಾಯತೀರ್ಪಿನ ದಿನ ನಾನು ದೇವರ ರಾಜ್ಯದಲ್ಲಿ ನನ್ನ ಪ್ರತಿಫಲವಾಗಿರುವ ನಿತ್ಯಜೀವವನ್ನು ಹೊಂದುವೆನು. ಆದರೆ ಈಗ ನಾನು "ಶರೀರಭಾವವನ್ನು ಕುರಿತು ಬಿತ್ತಿದರೆ" ಆ ದಿನದಲ್ಲಿ ನಾನು ನಾಶನವನ್ನು ಕೊಯ್ಯುವೆನು. ಹಾಗಾಗಿ ನಾನು ಹೇಗೆ ಜೀವಿಸುತ್ತೇನೆಂಬುದರ ಬಗ್ಗೆ ನಾನು ಎಚ್ಚರಿಕೆಯಿಂದಿರಬೇಕು. ನನಗೆ ಪವಿತ್ರಾತ್ಮನ ಮಾರ್ಗದರ್ಶನ ಬೇಕಿದೆ, ಆ ಮೂಲಕ ನಾನು ಯಾವಾಗಲೂ ಒಳ್ಳೇಯದನ್ನು ಮಾಡಬಹುದು. ದೇವರ ನ್ಯಾಯತೀರ್ಪಿನ ದಿನದವರೆಗೆ, "ಸುಗ್ಗಿಯ ಕಾಲದವರೆಗೆ" ನಾನು ನಂಬಿಗಸ್ತನಾಗಿಯೂ ಮತ್ತು ತಾಳ್ಮೆಯಿಂದಲೂ ಆತ್ಮನನ್ನು ಕುರಿತು ಬಿತ್ತುತ್ತಲೇ ಇರಬೇಕು.

# ಉತ್ತರಗಳು 15: ಪೌಲನ ಕಡೇ ಮಾತುಗಳು (6:11-18)

## ಪ್ರಶ್ನೆಗಳಿಗೆ ಉತ್ತರಗಳು

1. ಎರಡು ಸ್ವಾರ್ಥಮಯ ಉದ್ದೇಶಗಳಿಗಾಗಿ ಅನ್ಯಜನರಿಗೆ ಸುನ್ನತಿಯಾಗಬೇಕೆಂದು ಬೋಧಿಸಿದ್ದಕ್ಕಾಗಿ ಪೌಲನು ಯೆಹೂದಿ ಮತದವರನ್ನು ದೂರುತ್ತಾನೆ (ವ. 12-13):
    - ಹಿಂಸೆಯಿಂದ ಅವರು ದೂರವಿರಲು ಬಯಸಿದರು. ನೀತಿನಿರ್ಣಯ ಮತ್ತು ರಕ್ಷಣೆಗೆ ಇರುವ ಏಕೈಕ ಮಾರ್ಗವು ಶಿಲುಬೆಗೆ ಹಾಕಲ್ಪಟ್ಟ ಕ್ರಿಸ್ತನಲ್ಲಿ ನಂಬಿಕೆಯಿಡುವುದು ಮತ್ತು ದೇವರ ಉಚಿತವರವಾಗಿರುವ ಕೃಪೆಯಲ್ಲಿ ಭರವಸವಿಡುವುದಾಗಿದೆ ಎಂದು ಸಾರುವುದು ಅವರ ಯೆಹೂದಿ ಸಹೋದರರಿಂದ ವಿರೋಧ ಮತ್ತು ಹಿಂಸೆಯನ್ನು ತಂದೊಡ್ಡಿತು. ಆದರೆ ಅನ್ಯವಿಶ್ವಾಸಿಗಳಿಗೆ ಸುನ್ನತಿ ಮಾಡುವ ಅವಶ್ಯಕತೆಯ ಕುರಿತು ಬೋಧಿಸುವುದು ಅವರ ಯೆಹೂದಿ ಸಹೋದರರಿಂದ ಪ್ರಸಂಶೆ/ ಹೊಗಳಿಕೆಯನ್ನು ತಂದಿತು.
    - ತಮ್ಮ ಸಾಧನೆಯ ಬಗ್ಗೆ ಅವರು ಹೆಚ್ಚಳಪಡಲು ಬಯಸಿದರು. ಅನ್ಯಜನರು ಸುನ್ನತಿ ಮಾಡಿಸಿಕೊಳ್ಳಬೇಕೆಂಬ ಅವರ ಬೋಧನೆಯು ಯಶಸ್ವಿಯಾಗಿತ್ತು. ತಮ್ಮ ಮುಂದೊಗಲನ್ನು ತೆಗೆಸಿಕೊಂಡವರೇ ಯಶಸ್ಸಿಗೆ ಸಾಕ್ಷಿಯಾಗಿದ್ದರು (ಅವರ ಚರ್ಮ).
2. ಸ್ಥಿರತೆಯಿಲ್ಲದ್ದಕ್ಕಾಗಿ ಪೌಲನು ಯೆಹೂದಿ ಮತದವರನ್ನು ದೂರುತ್ತಾನೆ (ವ. 13): ಅವರು ಧರ್ಮಶಾಸ್ತ್ರವನ್ನು ಬೋಧಿಸಿದರು (ಅನ್ಯಜನರು ಸುನ್ನತಿ ಮಾಡಿಸಿಕೊಳ್ಳಬೇಕು ಮತ್ತು ಯೆಹೂದಿ ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯಬೇಕು), ಆದರೆ ಸ್ವತಃ ಅವರೇ ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯಲಿಲ್ಲ. ಪೌಲನು ಬಹುಶಃ "ಕ್ರಿಸ್ತನ ನಿಯಮ" ವನ್ನು ಸೂಚಿಸಿ ಹೇಳುತ್ತಿರಬಹುದು (ಗಲಾತ್ಯ 6:2), ಮತ್ತಾಯ 22:36-40 ರೊಂದಿಗೆ ಹೋಲಿಸಿ.
3. ಅನ್ಯಜನರಿಗೆ ಸುನ್ನತಿಯಾಗಬೇಕಾದ ಅವಶ್ಯಕತೆಯ ಕುರಿತು ಅವರನ್ನು ತಾವು ಹೇಗೆ ಮನವೊಲಿಸಿದರೆಂಬುದರ ಬಗ್ಗೆ ಯೆಹೂದಿ ಮತದವರು ಹೆಚ್ಚಳಪಟ್ಟರು. ಶಿಲುಬೆಯ ಮೇಲಿನ ತನ್ನ ಮರಣದ ಮೂಲಕ ಯೇಸು ತನಗಾಗಿ ಏನನ್ನು ಮಾಡಿದನೆಂಬುದರ ಕುರಿತು ಪೌಲನು ಹೆಚ್ಚಳಪಡುತ್ತಾನೆ. ಪೌಲನು ತನ್ನ ಯಾವುದೇ ಸಾಧನೆಯ ಬಗ್ಗೆ ಹೆಚ್ಚಳಪಡಲು ಬಯಸಲಿಲ್ಲ. ಬದಲಾಗಿ ಕೇವಲ ತನಗಾಗಿ ಮಾಡಿದ ಯೇಸುವಿನ ಸಾಧನೆಯ ಕುರಿತಾಗಿ ಮಾತ್ರ ಹೆಚ್ಚಳಪಡಲು ಬಯಸಿದನು (ವ. 13-14).
4. ವಚನ 15 ರಲ್ಲಿ ಪೌಲನು ಎರಡು ಸಂಗತಿಗಳನ್ನು ತದ್ವಿರುದ್ಧವಾಗಿಸುತ್ತಾನೆ: ಸುನ್ನತಿ (ಇದು ಪ್ರಾಮುಖ್ಯವಾದುದ್ದಲ್ಲ) ಮತ್ತು ಒಂದು ಹೊಸ ಸೃಷ್ಠಿ (ಇದು ನಿಜವಾಗಲೂ ಪ್ರಾಮುಖ್ಯವಾದದ್ದು).
5. ಪೌಲನು ಒಂದು ಆಶೀರ್ವಾದದೊಂದಿಗೆ ತನ್ನ ಪತ್ರಿಕೆಯನ್ನು ಮುಕ್ತಾಯಗೊಳಿಸುತ್ತಾನೆ.

## ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. 6:15 ("ಸುನ್ನತಿಯಾಗುವುದು ಮತ್ತು ಸುನ್ನತಿಯಾಗದೆ ಇರುವುದರಲ್ಲಿ ಏನೂ ಇಲ್ಲ") ಮತ್ತು 5:2 ("ನೀವು ಸುನ್ನತಿ ಮಾಡಿಸಿಕೊಂಡರೆ ಕ್ರಿಸ್ತನಿಂದ ನಿಮಗೆ ಏನೂ ಪ್ರಯೋಜನವಿಲ್ಲ") ರ ನಡುವಿನ ಸ್ಪಷ್ಟವಾದ ವಿರೋಧ/ ವಿವಾದವನ್ನು

ಸುಲಭವಾಗಿ ಬಗೆಹರಿಸಬಹುದಾಗಿದೆ. ವೈಯಕ್ತಿಕ ನೈರ್ಮಲ್ಯ/ ಆರೋಗ್ಯಕ್ಕಾಗಿ ಒಂದು ಸಾಂಸ್ಕೃತಿಕ ಸಂಪ್ರದಾಯಕ್ಕಾಗಿ ಸುನ್ನತಿ ಮಾಡಿಸಿಕೊಳ್ಳುವುದು ಅಥವಾ ಶಸ್ತ್ರಚಿಕಿತ್ಸೆಯ ವಿಧಾನಕ್ಕೆ ಒಳಗೊಳ್ಳುವುದು ಏನೂ ಅಲ್ಲವಾಗಿದೆ. ಆದರೆ ಸುನ್ನತಿಯನ್ನು (ಯೆಹೂದಿ ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವುದನ್ನು ಇದರೊಂದಿಗೆ ಸೇರಿಸುವುದು) ದೇವರನ್ನು ಮೆಚ್ಚಿಸಲು ಮತ್ತು ನೀತಿವಂತಿಕೆಯನ್ನು ಹೊಂದಿಕೊಳ್ಳಲು ಇರುವ ಮಾರ್ಗವೆಂಬುದಾಗಿ ಪರಿಗಣಿಸುವುದು ಖಂಡಿತವಾಗಿಯೂ ತಪ್ಪಾಗಿದೆ. ಅದನ್ನು ನಂಬುವುದು ನಮಗಾಗಿ ಇರುವ ದೇವರ ಖಚಿತವಾದ ವರವನ್ನು ತಿರಸ್ಕರಿಸುವುದಾಗಿದೆ: ಕ್ರಿಸ್ತನ ಮತ್ತು ಶಿಲುಬೆಯ ಮೇಲಣ ಆತನ ಮರಣದ ಮೂಲಕ ಸಿಗುವ ನಮ್ಮ ನೀತಿನಿರ್ಣಯ ಮತ್ತು ರಕ್ಷಣೆ.

2. ತನ್ನ ಸ್ವಂತ ಜೀವನದ ಮೇಲಿನ "ನಮ್ಮ ಕರ್ತನಾದ ಯೇಸುಕ್ರಿಸ್ತನ ಶಿಲುಬೆಯ" ಪರಿಣಾಮದ ಕುರಿತ ಪೌಲನ ತಿಳುವಳಿಕೆಯು (ವ. 14) ಎರಡು ಆಯಾಮ/ ಅಂಶಗಳನ್ನು ಒಳಗೊಂಡಿದೆ: ಪೌಲನ ಪಾಲಿಗೆ ಲೋಕವು ಶಿಲುಬೆಗೆ ಹಾಕಲ್ಪಟ್ಟಿತು. ದಮಸ್ಕದ ದಾರಿಯಲ್ಲಿ ಯೇಸುಕ್ರಿಸ್ತನು ತನ್ನನ್ನು ಪ್ರಕಟಿಸಿಕೊಂಡ ನಂತರ ಪೌಲನ ಆಧ್ಯತೆಗಳು ಸಂಪೂರ್ಣವಾಗಿ ಬದಲಾದವು. ಮೊದಲು ಆತನಿಗೆ ಪ್ರಾಮುಖ್ಯವಾದುದ್ದೆಲ್ಲವೂ (ಆತನ ಸಂಪ್ರದಾಯ, ಆತನ ಶಿಕ್ಷಣ, ಆತನ ಧಾರ್ಮಿಕ ದಾಹ, ಆತನ ಸಾಧನೆಗಳು) ಈಗ ಆತನಿಗೆ ಕಸವೂ ಬೆಲೆಯಿಲ್ಲದವುಗಳೂ ಆದವು (ಫಿಲಿಪ್ಪಿ 3:4-8 ರೊಂದಿಗೆ ಹೋಲಿಸಿರಿ). ಈ ಲೋಕದಲ್ಲಿ ಜನರು ಬೆಲೆಕೊಡುವ ಸಂಗತಿಗಳು ಆತನಿಗೆ ಏನೂ ಅಲ್ಲದವುಗಳಾಗಿ ಕಂಡವು (2 ಕೊರಿಂಥ 6:4-10 ರಲ್ಲಿನ ಪೌಲನ ಸಾಕ್ಷಿಯೊಂದಿಗೆ ಹೋಲಿಸಿರಿ).

   - ಪೌಲನು ಲೋಕದ ಪಾಲಿಗೆ ಶಿಲುಬೆಗೆ ಹಾಕಿಸಿಕೊಂಡನು. ಧರ್ಮಶಾಸ್ತ್ರದಿಂದ ಪ್ರೇರಿತವಾಗಿ ಮರಣಕ್ಕೆ ಫಲವನ್ನು ಹುಟ್ಟಿಸಿದ ದುರಾಶೆಗಳಿಂದ ನಿಯಂತ್ರಿಸಲ್ಪಟ್ಟ ಶರೀರದಲ್ಲಿ ಪೌಲನು ಮುಂದೆ ಬದುಕಲಿಲ್ಲ (ಜೀವಿಸಲಿಲ್ಲ). ಬದಲಾಗಿ ಆತನು ಆತ್ಮನಲ್ಲಿ ಜೀವಿಸಿದನು, ಆತ್ಮನಿಂದ ನಡೆಸಲ್ಪಟ್ಟನು, ಆತ್ಮನನ್ನನುಸರಿಸಿದನು ಮತ್ತು ಆತ್ಮನ ಫಲವನ್ನು ಕೊಟ್ಟನು.

3. ವಚನ 15 ಮತ್ತು ವಚನ 16 ರ ಮೇಲಿನ ನನ್ನ ಟಿಪ್ಪಣಿಗಳ ಒಂದು ಸಾರಾಂಶ:

   ಅ) ಸುನ್ನತಿಯಾದ ಅನ್ಯಜನರು ಮತ್ತು ಸುನ್ನತಿ ಮಾಡಿಸಿಕೊಂಡ ಯೆಹೂದ್ಯರನ್ನು ಒಳಗೊಂಡು ಕ್ರಿಸ್ತನಲ್ಲಿ ಹೊಸದಾಗಿ ಸೃಷ್ಟಿಸಲ್ಪಟ್ಟ ದೇವರ ಜನರು (ವ. 15).

   ಆ) ಯೆಹೂದ್ಯರು ಮತ್ತು ಅನ್ಯಜನರಿಬ್ಬರನ್ನು ಒಳಗೊಂಡಿರುವ ಸಭೆ, ಕ್ರಿಸ್ತನಲ್ಲಿನ ವಿಶ್ವಾಸಿಗಳ ಅನ್ಯೋನ್ಯತೆ (ವ. 16).

4. ವಚನ 16 ರಲ್ಲಿ ಪೌಲನು "ಈ ಸೂತ್ರಕ್ಕೆ ಸರಿಯಾಗಿ ನಡೆಯಿರಿ" ಎಂದು ಬರೆಯುವಾಗ ಖಂಡಿತವಾಗಿ ಆತನು ಕ್ರಿಸ್ತನ ಶಿಲುಬೆ (ವ. 14) ಮತ್ತು ಹೊಸ ಸೃಷ್ಟಿ (ವ. 15) ಯನ್ನು ಅಂದರೆ ಸುನ್ನತಿಯಾದ ಯೆಹೂದ್ಯರು ಮತ್ತು ಸುನ್ನತಿಯಾಗದ ಅನ್ಯಜನರನ್ನೊಳಗೊಂಡ ಕ್ರಿಸ್ತನಲ್ಲಿನ ದೇವರ ಹೊಸ ಜನರನ್ನು ಸೂಚಿಸುತ್ತಿರಬೇಕು.

5. ಪೌಲನ ಸಂಕ್ಷಿಪ್ತವಾದ ಮುಕ್ತಾಯದ ಆಶೀರ್ವಾದವು ಗಲಾತ್ಯ ಪತ್ರಿಕೆಯಲ್ಲಿನ ಆತನ ಸಮಗ್ರ ಸಂದೇಶದೊಂದಿಗೆ ಸರಿಹೊಂದುತ್ತದೆ: ಗಲಾತ್ಯದಲ್ಲಿನ ಕ್ರಿಸ್ತನ ವಿಶ್ವಾಸಿಗಳು ನೀತಿನಿರ್ಣಯ, ನೀತಿವಂತಿಕೆ ಮತ್ತು ರಕ್ಷಣೆಯನ್ನು ಹೊಂದಿಕೊಳ್ಳಲು ಯೇಸುಕ್ರಿಸ್ತನ ಮತ್ತು ಶಿಲುಬೆಯ ಮೇಲಣ ಆತನ ಮರಣದಲ್ಲಿನ ದೇವರ ಕೃಪೆಯೊಂದೇ ಏಕೈಕ ಮಾರ್ಗವಾಗಿದೆ. ಸುನ್ನತಿಯ ಮೂಲಕವಾಗಿರುವ ಮನುಷ್ಯನ ಪ್ರಯತ್ನ ಮತ್ತು ಯೆಹೂದಿ ಧರ್ಮಶಾಸ್ತ್ರ (ನೇಮನಿಷ್ಠೆ) ವನ್ನು ಕೈಕೊಂಡು ನಡೆಯುವುದು (ಯೆಹೂದಿ ಮತದವರು ಪ್ರಸಂಗಿಸಿದ ಸಂದೇಶ) ಅವರಿಗೆ ಒಂದು ಆಯ್ಕೆಯಲ್ಲ !

# ಅನುಬಂಧ: ಯಾರು ಮತ್ತು ಯಾವಾಗ?

## ಗಲಾತ್ಯದವರು ಯಾರಾಗಿದ್ದರು?

ಪೌಲನು ಗಲಾತ್ಯದಲ್ಲಿರುವ ಸಭೆಗಳಿಗೆ ತನ್ನ ಪತ್ರಿಕೆಯನ್ನು ಬರೆಯುತ್ತಾನೆ (ವ. 1:2) ಮತ್ತು ಅವರನ್ನು "ಬುದ್ಧಿಯಿಲ್ಲದ ಗಲಾತ್ಯದವರೇ" ಎಂದು ಕರೆಯುತ್ತಾನೆ (3:1). ಈ ಗಲಾತ್ಯದವರು ಯಾರಾಗಿದ್ದರೆಂಬುದನ್ನು ಸತ್ಯವೇದ ಪಂಡಿತರು ಒಪ್ಪುವುದಿಲ್ಲ. ಈ ವಿವಾದಕ್ಕೆ ಕಾರಣವೇನೆಂದರೆ, ಆ ದಿನಗಳಲ್ಲಿನ ಗಲಾತ್ಯವೆಂಬುದಾಗಿ ಎರಡು ಬೇರೆ ಬೇರೆ ಭೌಗೋಳಿಕ ಪ್ರದೇಶಗಳಿಗೆ ಕರೆಯಲಾಗುತ್ತಿದ್ದು, ಒಂದು ಚಿಕ್ಕ ಪ್ರದೇಶ ಮತ್ತು ಇನ್ನೊಂದು ವಿಶಾಲ ಪ್ರದೇಶವಾಗಿದ್ದು ಇದು ಸಣ್ಣ ಪ್ರದೇಶವನ್ನು ಸಹ ಒಳಗೊಂಡಿತ್ತು.

ಜನಾಂಗೀಯ ಗಲಾತ್ಯರು/ ಗಲಾತ್ಯ ಜನಾಂಗದವರು ನೂರಾರು ವರ್ಷಗಳ ಹಿಂದೆ ಯುರೋಪಿನಿಂದ ವಲಸೆ ಹೋಗಿ ಅಸ್ಯ ಸೀಮೆಯ ಮಧ್ಯಭಾಗದಲ್ಲಿ ನೆಲೆಯೂರಿದ್ದರು (ಈಗಿನ ಟರ್ಕಿಯಲ್ಲಿನ ಅಂಕಾರರ ಸುತ್ತಮುತ್ತ). ಅವರ ಪ್ರದೇಶ ಅಥವಾ "ದೇಶವು" ಗಲಾತ್ಯವೆಂಭುದಾಗಿ ಕರೆಯಲ್ಪಟ್ಟಿದೆ. ರೋಮನ್ ಸಾಮ್ರಾಜ್ಯದ ವಿಸ್ತರಣೆಯೊಂದಿಗೆ ರೋಮನ್ನರು ಒಂದು ವಿಶಾಲವಾದ/ ದೊಡ್ಡ ಪ್ರಾಂತ್ಯವನ್ನು ಸೃಷ್ಟಿಸಿದ್ದರು, ಅಲ್ಲದೇ ಅದನ್ನು ಗಲಾತ್ಯವೆಂದು ಕರೆದರು. ಇದರ ಉತ್ತರದಲ್ಲಿ ಗಲಾತ್ಯರು ಮತ್ತು ಉತ್ತರದಲ್ಲಿ ಲುಕೋನ್ಯರು, ಪಿಸಿದ್ಯರು ಮತ್ತು ಬೇರೆ ಜನಾಂಗೀಯ ಗುಂಪುಗಳು ನೆಲೆಸಿದ್ದರು.

ಹೀಗಾಗಿ ಪೌಲನು ಮೂಲ ಗಲಾತ್ಯರು ವಾಸಿಸುತ್ತಿರುವಲ್ಲಿನ ಸಭೆಗಳಿಗೆ (ರೋಮನ್ನರ ಉತ್ತರ ಪ್ರಾಂತ್ಯವಾಗಿರುವ ಗಲಾತ್ಯ) ಬರೆದನೋ? ಅಥವಾ ಹೆಚ್ಚಾಗಿ ಪಿಸಿದ್ಯರು ಮತ್ತು ಲುಕೋನ್ಯರು ನೆಲೆಸಿರುವ/ ವಾಸಿಸಿರುವ ರೋಮನ್ನರ ದಕ್ಷಿಣ ಪ್ರಾಂತ್ಯವಾಗಿರುವ ಗಲಾತ್ಯದಲ್ಲಿನ ಸಭೆಗಳಿಗೆ ಬರೆದನೋ?

ಅಪೊಸ್ತಲರ ಕೃತ್ಯದಲ್ಲಿ ಲೂಕನ ಪ್ರಕಾರ, ಪೌಲನು ತನ್ನ ಮೂರು ಮಿಷನರಿ/ ಸೇವಾ ಪ್ರಯಾಣಗಳಲ್ಲಿ ರೋಮನ್ ಪ್ರಾಂತ್ಯವಾಗಿರುವ ಗಲಾತ್ಯವನ್ನು ಸಂಧಿಸುತ್ತಾನೆ. ತನ್ನ ಮೊದಲನೇಯ ಪ್ರಯಾಣದಲ್ಲಿ ಆತನು ಕೇವಲ ದಕ್ಷಿಣ ಪ್ರಾಂತ್ಯವನ್ನು ಮಾತ್ರ ಸಂಧಿಸಿದ್ದನು (ಪಿಸಿದ್ಯದ ಅಂತಿಯೋಕ್ಯ, ಲುಸ್ತ್ರ, ದೆರ್ಬೆ, ಇಕೋನ್ಯ, ಅಪೊಸ್ತಲರ ಕೃತ್ಯಗಳು ಅಧ್ಯಾಯ 13 ಮತ್ತು 14 ನ್ನು ನೋಡಿರಿ). ಆದರೆ ತನ್ನ ಎರಡನೇ ಮತ್ತು ಮೂರನೇ ಪ್ರಯಾಣಗಳಲ್ಲಿ ಆತನು (ಅಪೊ.ಕೃತ್ಯ. 16:6, 18:23), "ನಿಜವಾದ" ಗಲಾತ್ಯರು, ಜನಾಂಗೀಯ ಗಲಾತ್ಯರು ವಾಸಿಸಿದ ದಕ್ಷಿಣ ಪ್ರಾಂತ್ಯವನ್ನು ಸಹ ಸಂಧಿಸಿರುವಂತೆ ತೋರುತ್ತದೆ.

ಪೌಲನ ಪತ್ರಿಕೆಯ ಸ್ವೀಕೃತರ ಜನಾಂಗೀಯ ಮತ್ತು ಭೌಗೋಳಿಕ ಮತ್ತು ಹಿನ್ನಲೆಯ ಸಮಸ್ಯೆ/ ವಿಷಯವು ಅವರ ಸಾಂಸ್ಕೃತಿಕ ಮತ್ತು ಧಾರ್ಮಿಕ ಹಿನ್ನಲೆಯ ಕುರಿತ ನಮ್ಮ ತಿಳುವಳಿಕೆಯ ಮೇಲೆ ಪರಿಣಾಮ ಬೀರದು. ಅವರು ಅನ್ಯಜನರಾಗಿದ್ದರು (4:8) ಮತ್ತು ಅವರ ನಡುವಿನ ಪೌಲನ ಸೇವೆಯ ಪರಿಣಾಮವಾಗಿ ಅವರು ಕ್ರಿಸ್ತನನ್ನು ಅಂಗೀಕರಿಸಿದ್ದಾರೆಂಬುದು ನಮಗೆ ತಿಳಿದಿದೆ (1:8, 11, 4:13).

ಆದರೆ ಪೌಲನು ಈ ಪತ್ರಿಕೆಯನ್ನು ಯಾವಾಗ ಬರೆದನೆಂಬುದರ ಮೇಲೆ ಪರಿಣಾಮ ಬೀರುತ್ತದೆ.

## ಗಲಾತ್ಯ ಪತ್ರಿಕೆಯನ್ನು ಯಾವಾಗ ಬರೆಯಲಾಗಿದೆ?

ವಿಶಾಲಾರ್ಥದಲ್ಲಿ ಈ ಪತ್ರಿಕೆಯ ದಿನಾಂಕವು ಎರಡು ಪ್ರಶ್ನೆಗಳ ನಮ್ಮ ಉತ್ತರಗಳ ಮೇಲೆ ಆಧರಿತವಾಗಿದೆ:

- ಪೌಲನು ಪತ್ರಿಕೆಯನ್ನು ಬರೆದ "ಗಲಾತ್ಯರು" ಯಾರಾಗಿದ್ದರು? ಒಂದು ವೇಳೆ ಅವರು ರೋಮನ್ ಪ್ರಾಂತ್ಯದ ದಕ್ಷಿಣ ಭಾಗವಾಗಿರುವ ಗಲಾತ್ಯದಲ್ಲಿ ವಾಸಿಸಿದ ಜನಾಂಗೀಯ ಗಲಾತ್ಯದವರಾಗಿದ್ದರೆ. ಬಹುಃಶ ಪೌಲನು ತನ್ನ ಮೂರನೇ ಸೇವಾ ಪ್ರಯಾಣದ ಅವಧಿಯಲ್ಲಿ ಈ ಪತ್ರಿಕೆಯನ್ನು ಬರೆದಿರಬಹುದು (ಕ್ರಿ.ಶ. 53-57).
- ಗಲಾತ್ಯ 2:1-10 ರಲ್ಲಿರುವಂತೆ ಯೆರೂಸಲೇಮಿನಲ್ಲಿನ ಅಪೊಸ್ತಲರೊಂದಿಗಿನ ಪೌಲನ ಭೇಟಿಯು/ ಮಾತುಕತೆ ಅಪೊಸ್ತಲರ ಕೃತ್ಯಗಳು 15ನೇ ಅಧ್ಯಾಯದಲ್ಲಿರುವ "ಯೆರೂಸಲೇಮ್ ಸಭೆ/ ಸಮಿತಿ" ಯಂಥಹ ಭೇಟಿಯಾಗಿತ್ತಾ/ ಮಾತುಕತೆಯಾಗಿತ್ತಾ? ಒಂದು ವೇಳೆ ಅವು ವಿಭಿನ್ನವಾದ ಭೇಟಿ/ ಮಾತುಕತೆ/ ಸಭೆಗಳಾಗಿದ್ದರೆ ಕ್ರಿ.ಶ. 49 ರಲ್ಲಿ ನಡೆದ "ಯೆರೂಸಲೇಮ್ ಸಭೆ/ ಸಮಿತಿ" ಗಿಂತ ಮೊದಲೇ ಪೌಲನು ಗಲಾತ್ಯ ಪತ್ರಿಕೆಯನ್ನು ಬರೆದಿರಬಹುದು.

  ಮೊದಲನೇಯ ಪ್ರಶ್ನೆಯನ್ನು ಯಾವುದೇ ನಿಶ್ಚಿತತೆಯೊಂದಿಗೆ ಉತ್ತರಿಸಲಾಗದು. ಇದರರ್ಥ ಗಲಾತ್ಯ ಪತ್ರಿಕೆಯ ದಿನಾಂಕವು ಎರಡನೇ ಪ್ರಶ್ನೆಯನ್ನು ನಾವು ಹೇಗೆ ಉತ್ತರಿಸುತ್ತೇವೆಂಬುದರ ಮೇಲೆ ಆಧಾರಿತವಾಗಿದೆ: ಕ್ರೈಸ್ತ ನಂಬಿಕೆಗಾಗಿ ಅನ್ಯ ವಿಶ್ವಾಸಿಗಳು ಸುನ್ನತಿ ಮಾಡಿಕೊಳ್ಳುವ ಅವಶ್ಯಕತೆಯ ಕುರಿತು ನಿರ್ಧರಿಸಲು ಪೌಲನು ಯೆರೂಸಲೇಮಿನಲ್ಲಿನ ಅಪೊಸ್ತಲರೊಂದಿಗೆ ಒಂದು ಅಥವಾ ಎರಡುಬಾರಿ ಸಭೆ ಕೂಡಿದ್ದನೋ?

**ಎರಡು ಸಭೆಗಳು.** ಗಲಾತ್ಯ 2:1-10 ರಲ್ಲಿ ಪೌಲನು ಹೇಳುವ ವಿಷಯವು ಪೌಲ ಮತ್ತು ಯೆರೂಸಲೇಮಿನಲ್ಲಿನ ಅಪೊಸ್ತಲರ ನಡುವಿನ ಈ ಹಿಂದಿನ ಭೇಟಿ/ ಸಭೆಯನ್ನು ವಿವರಿಸು/ ವರ್ಣಿಸುತ್ತದೆಂಬುದಾಗಿ ಯೋಚಿಸುವವರು ಅಪೊಸ್ತಲರ ಕೃತ್ಯಗಳು 11:29-30 ರಲ್ಲಿ ಯೆರೂಸಲೇಮಿಗೆ ಪೌಲನ ಮತ್ತು ಬಾರ್ನಬರ "ಕ್ಷಾಮ ಭೇಟಿ" ಯ ಅವಧಿಯನ್ನು ಸೂಚಿಸುತ್ತಾರೆ. ಮೊದಲ ಸೇವಾ ಪ್ರಯಾಣದ ನಂತರ (ಪಿಸಿದ್ಯ, ಲುಸ್ತ್ರ, ಇಕೋನ್ಯದಲ್ಲಿನ ಅಂತಿಯೋಕ್ಯವನ್ನು ಸಂಧಿಸಿದ ನಂತರ) ಆದರೆ "ಯೆರೂಸಲೇಮಿನ ಸಭೆ" ಗಿಂತ ಮೊದಲು (ಅಪೊ.ಕೃತ್ಯ 15 ರಲ್ಲಿ) ಪೌಲನು ತನ್ನ ಅಂತಿಯೋಕ್ಯದಿಂದ (ಕ್ರಿ.ಶ. 48-49 ರಲ್ಲಿ) ಗಲಾತ್ಯದವರಿಗೆ ತನ್ನ ಪತ್ರಿಕೆಯನ್ನು ಬರೆದನೆಂಬುದಾಗಿ ಅವರು ಮುಕ್ತಾಯ/ ಅಭಿಪ್ರಾಯಪಡುತ್ತಾರೆ. ಪರಿಣಾಮವಾಗಿ ಗಲಾತ್ಯದ ರೋಮನ್ ಪ್ರಾಂತ್ಯದ ದಕ್ಷಿಣ ಭಾಗದಲ್ಲಿ ಸಭೆಗಳಾಗಿ ಪೌಲನ ಸ್ವೀಕೃತರನ್ನು ಅವರು ಕಾಣುತ್ತಾರೆ? (ಜನಾಂಗೀಯ ಗಲಾತ್ಯರಲ್ಲದವರು). ಅಲ್ಲದೇ ಅವರು ಗಲಾತ್ಯ ಪತ್ರಿಕೆಯು ಹೊಸ ಒಡಂಬಡಿಕೆಯಲ್ಲಿನ ಪೌಲನ ಪತ್ರಿಕೆಗಳಲ್ಲಿ ಪ್ರಾರಂಭಿಕವಾದುದ್ದೆಂಬುದಾಗಿ ಪರಿಗಣಿಸುತ್ತಾರೆ.

**ಒಂದು ಸಭೆ.** ಗಲಾತ್ಯ 2:1-10 ರಲ್ಲಿ ಪೌಲನು ಹೇಳುವುದು ಅಪೊಸ್ತಲರ ಕೃತ್ಯದಲ್ಲಿ "ಯೆರೂಸಲೇಮ್ ಸಭೆ" ಯನ್ನು ಸೂಚಿಸುತ್ತದೆಂಬುದಾಗಿ ಯೋಚಿಸುವವರು ಸಾಮಾನ್ಯವಾಗಿ ತನ್ನ ಮೂರನೇ ಸೇವಾ ಪ್ರಯಾಣದ ಅವಧಿಯಲ್ಲಿ (ಕ್ರಿ.ಶ. 53-57) ಎಫೆಸದಲ್ಲಿ ದೀರ್ಘಕಾಲ ಇರುವ ಸಮಯದಲ್ಲಿ ಪೌಲನು ಗಲಾತ್ಯ ಪತ್ರಿಕೆಯನ್ನು ಬರೆದನೆಂಬುದಾಗಿ ಅಭಿಪ್ರಾಯಪಡುತ್ತಾರೆ. ಅನಂತರ ಆತನು ಬಹುಶಃ ಗಲಾತ್ಯದ ರೋಮನ್ ಪ್ರಾಂತ್ಯದ ಉತ್ತರ ಭಾಗವನ್ನು ಒಂದುಬಾರಿಯಾದರೂ ಸಂಧಿಸಿರಬಹುದು. ಒಂದುವೇಳೆ ಅವರು ಜನಾಂಗೀಯ ಗಲಾತ್ಯದವರಾಗಿದ್ದರೆ ಪೌಲನು ಅವರನ್ನು (ತನ್ನ ಸ್ವೀಕೃತರನ್ನು) "ಎಲೈ ಬುದ್ಧಿಯಿಲ್ಲದ ಗಲಾತ್ಯದವರೇ" ಎಂಬುದಾಗಿ ಕರೆದಿರಲು ಸಾಧ್ಯವಿಲ್ಲವೆಂಬುದಾಗಿ ಕಾಣುತ್ತಾರೆ (ಗಲಾತ್ಯ 3:1). ಗಲಾತ್ಯ ಪತ್ರಿಕೆಗೆ ನಂತರದ ದಿನಾಂಕವನ್ನು ಕೊಡಲು ಇರುವ ಇನ್ನೊಂದು ಮುಖ್ಯ ಕಾರಣವೇನೆಂದರೆ, ಪೌಲನು ಎಫೆಸದಲ್ಲಿ ಬಹುಕಾಲ ಕಳೆದ ನಂತರ ಆತನ ಮೂರನೇ ಪ್ರಯಾಣದ ಕೊನೆಯಲ್ಲಿ ಕೊರಿಂಥದಿಂದ ಬರೆಯಲಾಗಿದೆ ಎಂದು ನಾವು ತಿಳಿದಿರುವ ರೋಮಾಪುರದವರಿಗೆ ಬರೆದ ಪತ್ರಿಕೆಗೆ ಸಮಾನವಾಗಿದೆ.

### ಗಲಾತ್ಯದವರಿಗೆ 2:1-10 ಮತ್ತು ಅಪೊಸ್ತಲರ ಕೃತ್ಯಗಳು 15:1-29 ಪರಸ್ಪರ ಹೇಗೆ ಸಂಬಂಧಿಸುತ್ತವೆ?

ಗಲಾತ್ಯ 2:1-10 ಮತ್ತು ಅಪೊ.ಕೃತ್ಯ. 15:1-29 ಪರಸ್ಪರ ಹೇಗೆ ಸಂಬಂಧಿಸುತ್ತವೆಂಬುದನ್ನು ಸತ್ಯವೇದ ಪಂಡಿತರು ಒಪ್ಪದೇ ಇರುವುದನ್ನು ನಾವು ಮೇಲೆ ನೋಡಿದ್ದೇವೆ. ಪಠ್ಯಗಳು ಪೌಲ ಮತ್ತು ಯೆರೂಸಲೇಮಿನಲ್ಲಿನ ಅಪೊಸ್ತಲರ ನಡುವಿನ ಒಂದೇ ರೀತಿಯ ಭೇಟಿ/ ಸಭೆಯನ್ನು ವರ್ಣಿಸುತ್ತವೆಯೋ ಅಥವಾ ಎರಡು ಬೇರೆ ಬೇರೆ ಭೇಟಿ/ ಸಭೆಗಳನ್ನು ವರ್ಣಿಸುತ್ತವೆಯೋ?

ನನ್ನ ಸ್ವಂತ ತಿಳುವಳಿಕೆ

- ಎರಡು ವಾಕ್ಯಭಾಗದ ವಿಷಯ/ ಪಟ್ಟಿಗಳು ವಿವರದಲ್ಲಿ ವಿಭಿನ್ನವಾಗಿದ್ದರೂ ಸಹ ಒಂದೇ ಸಮಸ್ಯೆಯ ಕುರಿತು ಮಾತನಾಡುತ್ತವೆ/ ವ್ಯವಹರಿಸುತ್ತವೆ: ಅನ್ಯ ಹಿನ್ನಲೆಯ ವಿಶ್ವಾಸಿಗಳು ಮತ್ತು ಸುನ್ನತಿ (ಇನ್ನೂ ವಿಸ್ತಾರವಾಗಿ ಅನ್ಯ ವಿಶ್ವಾಸಿಗಳು ಯೆಹೂದಿ ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವ ಅಗತ್ಯತೆ). ಅನ್ಯ ವಿಶ್ವಾಸಿಗಳು ಮತ್ತು ಯೆಹೂದಿ ಧರ್ಮಶಾಸ್ತ್ರದ ಕುರಿತು ಯೆರೂಸಲೇಮಿನಲ್ಲಿನ ಅಪೊಸ್ತಲರು ಮತ್ತು ಪೌಲನ ನಡುವೆ ಎರಡು ಸಭೆಗಳು/ ಭೇಟಿಗಳು ನಡೆದವೆಂದು ನನಗೆ ತೋರುವುದಿಲ್ಲ. ಅಂತಹ ಒಂದು ಸಭೆಯು ಒಂದೇ ಬಾರಿ ಪೂರ್ಣವಾಗಿ ಸಮಸ್ಯೆಯನ್ನು ಬಗೆಹರಿಸಬಹುದಾಗಿತ್ತು.
- ಹಾಗಾಗಿ ಎರಡು ವಾಕ್ಯಭಾಗ/ ಪಟ್ಟಿ/ ಸಂಗತಿಗಳ ನಡುವಿನ ಭಿನ್ನತೆ/ ವ್ಯತ್ಯಾಸವು ಗ್ರಂಥಕರ್ತನ ವಿಭಿನ್ನ ದೃಷ್ಟಿಕೋನಗಳಿಂದ ಉದ್ಭವಿಸುತ್ತದೆ. ಪೌಲ ಮತ್ತು ಲೂಕರಿಬ್ಬರೂ ಒಂದೇ ಸಭೆಯ ಬಗ್ಗೆ ವಿಭಿನ್ನವಾದ ಸಂದರ್ಭಗಳಲ್ಲಿ/ ಹಿನ್ನಲೆಗಳಲ್ಲಿ ಬರೆದಿದ್ದಾರೆ. ತನ್ನ ಅಪೊಸ್ತಲತನ ಮತ್ತು ತಾನು ಸಾರಿದ ಸುವಾರ್ತೆಯ ಅಧಿಕಾರವು ಯೆರೂಸಲೇಮಿನಲ್ಲಿನ ಮುಂಚೂಣಿಯಲ್ಲಿರುವ ಅಪೊಸ್ತಲರಿಂದಲೇ ಅಧಿಕೃತಗೊಂಡಿದೆ ಎಂಬುದನ್ನು ಪೌಲನು ಗಲಾತ್ಯದವರಿಗೆ ಸಾಭೀತುಪಡಿಸಬೇಕಿತ್ತು. ಸುವಾರ್ತೆಯ ವಿಸ್ತರಣೆಯ ಹಿನ್ನಲೆಯಲ್ಲಿ ಮಿಷನರಿಗಳು (ಪೌಲ ಮತ್ತು ಬಾರ್ನಬ) ಮತ್ತು ಯೆರೂಸಲೇಮಿನಲ್ಲಿನ ಅಪೊಸ್ತಲರ ನಡುವಿನ ಈ ನಿರ್ಣಾಯಕ ಸಭೆಯನ್ನು ಲೂಕನು ದಾಖಲಿಸುತ್ತಾನೆ: ರೋಮನ್ ಸಾಮ್ರಾಜ್ಯದುದ್ದಕ್ಕೂ ಸುವಾರ್ತೆಯು ವಿಸ್ತರಿಸುವುದಕ್ಕಾಗಿ ಅನ್ಯ ವಿಶ್ವಾಸಿಗಳು ಮತ್ತು ಯೆಹೂದಿ ಧರ್ಮಶಾಸ್ತ್ರ (ನೇಮ) ದ ಸಮಸ್ಯೆಯು ಬಗೆಹರಿಯಬೇಕಿತ್ತು. ಈ ವಿಷಯವು ಬಗೆಹರಿದಾಗ ಪೌಲನು ಯೆರೂಸಲೇಮ್ ಸಭೆಯ ಅನುಮೋದನೆಯೊಂದಿಗೆ ತನ್ನ ಅನ್ಯಜನರ ನಡುವಿನ ಸೇವೆಯನ್ನು ಮುಂದುವರಿಸಬಹುದಾಗಿತ್ತು.
- ನಡೆದದ್ದೆಲ್ಲವನ್ನೂ ಸಹ ಪೌಲನಾಗಲೀ ಲೂಕನಾಗಲೀ ದಾಖಲಿಸಲಿಲ್ಲವೆಂಬುದನ್ನು ನೀವೊಮ್ಮೆ ಒಪ್ಪಿಕೊಳ್ಳುವಾಗ ಪಟ್ಟಿ/ ವಾಕ್ಯಭಾಗ/ ವಿಷಯಗಳ ನಡುವಿನ ಭಿನ್ನತೆ/ ವ್ಯತ್ಯಾಸವನ್ನು ಸಂಧಾನಗೊಳಿಸಲು/ ರಾಜಿ ಮಾಡಲು ಸಾಧ್ಯವಾಗುತ್ತದೆ. ಇದರ ಮೂರು ಉದಾಹರಣೆಗಳಿಗಾಗಿ ಕೆಳಕಂಡ ಭಾಗವನ್ನು ನೋಡಿ.

### ಗಲಾತ್ಯದವರಿಗೆ 2:1-10 ಮತ್ತು ಅಪೊಸ್ತಲರ ಕೃತ್ಯಗಳು 15:1-29

ನಡೆದದ್ದೆಲ್ಲವನ್ನೂ ಸಹ ಪೌಲನಾಗಲೀ ಲೂಕನಾಗಲೀ ದಾಖಲಿಸಲಿಲ್ಲವೆಂಬುದನ್ನು ನೀವೊಮ್ಮೆ ಒಪ್ಪಿಕೊಳ್ಳುವಾಗ ಪಟ್ಟಿ/ ವಾಕ್ಯಭಾಗ/ ವಿಷಯಗಳ ನಡುವಿನ ಭಿನ್ನತೆ/ ವ್ಯತ್ಯಾಸವನ್ನು ಸಂಧಾನಗೊಳಿಸಲು/ ರಾಜಿ ಮಾಡಲು ಸಾಧ್ಯವಾಗುತ್ತದೆ. ಮೂರು ಉದಾರಣೆಗಳು:

1. **ಕ್ಷಾಮ ಪರಿಹಾರಕ್ಕಾಗಿ ಯೆರೂಸಲೇಮಿಗೆ ಭೇಟಿ (ಅಪೊ.ಕೃತ್ಯ. 11:29-30)**

**ಪ್ರಶ್ನೆ:** ತಾನು ಮತ್ತು ಬಾರ್ನಬರು ಕ್ಷಾಮ ಪರಿಹಾರದೊಂದಿಗೆ ಅಂತಿಯೋಕ್ಯ ಸಭೆಯಿಂದ ಯೆರೂಸಲೇಮಿಗೆ ಕಳುಹಿಸಲ್ಪಟ್ಟರೆಂಬುದನ್ನು ಪೌಲನು ಯಾಕೆ ಗಲಾತ್ಯ ಪತ್ರಿಕೆಯಲ್ಲಿ ತಿಳಿಸುವುದಿಲ್ಲ (ಅಪೊ.ಕೃತ್ಯ. 11:29-30 ರೊಂದಿಗೆ ಹೋಲಿಸಿ)?

**ಉತ್ತರ:** ಈ ಭೇಟಿಗೂ ತನ್ನ ಅಪೊಸ್ತಲತನ ಮತ್ತು ತಾನು ಸಾರಿದ ಸುವಾರ್ತೆಯ ವಿಷಯಕ್ಕೂ ಯಾವುದೇ ಸಂಬಂಧವಿಲ್ಲ. ಹಾಗಾಗಿ ಅದನ್ನಾತನು ತಿಳಿಸುವ ಅಗತ್ಯವಿಲ್ಲ.

## 2. "ಒಂದು ದೈವಪ್ರೇರಣೆ/ ಪ್ರಕಟಣೆಗೆ ಪ್ರತಿಕ್ರಿಯೆಯಾಗಿ" ಮತ್ತು ಅಗಬನ ಪ್ರವಾದನೆ

**ಪ್ರಶ್ನೆ:** ಒಂದು ದೈವ ಪ್ರೇರಣೆಯ ಮೂಲಕ ತಾನು ಯೆರೂಸಲೇಮಿಗೆ ಹೋದೆನೆಂಬುದಾಗಿ ಪೌಲನು ಬರೆಯುತ್ತಾನೆ (ಗಲಾತ್ಯ 2:2), ಹಾಗಾಗಿ ಅಪೊಸ್ತಲರ ಕೃತ್ಯಗಳು 11:28 ರಲ್ಲಿನ ಅಗಬನ ಪ್ರವಾದನೆಯನ್ನು ಸೂಚಿಸುವುದಿಲ್ಲವೋ?

**ಉತ್ತರ:** ಅಗಬನ ಪ್ರವಾದನೆಯು ಕ್ಷಾಮದ ಕುರಿತಾಗಿಯಾಗಲೀ, ಆತನ ಅಪೊಸ್ತಲತನ ಮತ್ತು ಸುವಾರ್ತೆಯ ಕುರಿತಾಗಿಯಾಗಲೀ ಅಲ್ಲ, ಹಾಗಾಗಿ ಗಲಾತ್ಯ 2:2 ರಲ್ಲಿ ಪೌಲನು "ದೈವಪ್ರೇರಣೆಗನುಸಾರವಾಗಿ" ಎಂದು ಹೇಳುವುದು ಅಗಬನ ಪ್ರವಾದನೆಯನ್ನು ಸೂಚಿಸಲಾರದು.

ನನ್ನ ತೀರ್ಮಾನ/ ಮುಕ್ತಾಯ: ಅಂತಿಯೋಕ್ಯದಲ್ಲಿ ಸಭಾಪಾಲಕರಾಗಿರುವ ಬಾರ್ನಬ ಮತ್ತು ಪೌಲರು ಅಗಬನ ಪ್ರವಾದನೆಗೆ ಒಂದು ಪ್ರತಿಕ್ರಿಯೆಯಾಗಿ ಕ್ಷಾಮ ಪರಿಹಾರದೊಂದಿಗೆ ತಮ್ಮ ಸಭೆಯಿಂದ ಯೆರೂಸಲೇಮಿಗೆ ಕಳುಹಿಸಲ್ಪಟ್ಟಿದ್ದರು (ಅಪೊಸ್ತಲರ ಕೃತ್ಯಗಳು 11:19-30, 12:25), ಹಾಗಾಗಿ ಇದು ಪೌಲನು ಗಲಾತ್ಯ ಪತ್ರಿಕೆ 2ನೇ ಅಧ್ಯಾಯದಲ್ಲಿ ಸೂಚಿಸುವ ಭೇಟಿಯಾಗಲಾಗದು. ಅನಂತರ ಅವರು ತಮ್ಮ ಮೊದಲ ಸೇವಾ ಪ್ರಯಾಣಕ್ಕೆ ಹೊರಡುತ್ತಾರೆ (ಅಪೊ.ಕೃತ್ಯ. 13:1-4). ಅವರು ಅಂತಿಯೋಕ್ಯಕ್ಕೆ ಹಿಂತಿರುಗಿ ಬಂದು ತಮ್ಮ ಯಶಸ್ವೀ ಯಾತ್ರೆ/ ಪ್ರಯಾಣದ ಒಂದು ವರದಿಯನ್ನು ಕೊಟ್ಟು ಕೆಲಕಾಲ ಅಲ್ಲೇ ಉಳಿದುಕೊಳ್ಳುತ್ತಾರೆ (ಅಪೊ.ಕೃತ್ಯ. 14:24-28). ಯೆರೂಸಲೇಮಿನಿಂದ ಯೆಹೂದ್ಯರು ಬಂದು ಅಂತಿಯೋಕ್ಯದಲ್ಲಿ ವಿವಾದವನ್ನೆಬ್ಬಿಸಿದ್ದರು (ಅಪೊ.ಕೃತ್ಯ. 15:1-2), ಆದುದರಿಂದ ಅಲ್ಲಿರುವ ಅಪೊಸ್ತಲರೊಂದಿಗೆ ಈ ಸಮಸ್ಯೆಯನ್ನು/ ವಿವಾದವನ್ನು ಬಗೆಹರಿಸಲು ಪೌಲ ಮತ್ತು ಬಾರ್ನಬರನ್ನು ಯೆರೂಸಲೇಮಿಗೆ ಕಳುಹಿಸಬೇಕೆಂದು ಪವಿತ್ರಾತ್ಮನು ಸಭೆಗೆ ಹೇಳಿದನು (ಅಪೊ.ಕೃತ್ಯ. 15 ಮತ್ತು ಗಲಾತ್ಯ 2:1-10).

## 3. ಕೇವಲ "ಸ್ತಭಗಳಾ" ಅಥವಾ ಇಡೀ ಸಭೆಯೋ?

**ಪ್ರಶ್ನೆ:** ಆದರೆ ಲೂಕನ ಪ್ರಕಾರ ಪೌಲ ಮತ್ತು ಬಾರ್ನಬರು ಕೇವಲ ಕೆಲವೇ ಅಪೊಸ್ತಲರನ್ನಲ್ಲ, ಬದಲಾಗಿ ಇಡೀ ಸಭೆಯನ್ನೇ ಸಂಧಿಸಿದರು (ಅಪೊ.ಕೃತ್ಯ. 15:4, 12, 22), ಆದುದರಿಂದ ಇದು ಪೌಲನು ಗಲಾತ್ಯ ಪತ್ರಿಕೆಯಲ್ಲಿ ಬರೆಯುವ ಸಭೆ/ ಭೇಟಿಯಾಗಿರಲಾರದು.

**ಉತ್ತರ:** ಯೆರೂಸಲೇಮಿನಲ್ಲಿನ ಸಭೆಯು ಪಾಲ್ಗೊಂಡಿರುವುದರ/ ಭಾಗಿಯಾಗಿರುವುದರ ಕುರಿತು ಪೌಲನು ತಿಳಿಸುವುದಿಲ್ಲ. ಯಾಕೆಂದರೆ ಗಲಾತ್ಯ 2:1-10 ರಲ್ಲಿನ ಆತನ ಕಾಳಜಿಯು ತಾನು ಮತ್ತು ತನ್ನ ಸೇವೆಯು ಯೆರೂಸಲೇಮಿನಲ್ಲಿಯ ಅಪೊಸ್ತಲರಿಂದ ಅಧಿಕಾರ ಹೊಂದಿದ್ದಾರೆಂಬುದನ್ನು ಸಾಭೀತುಪಡಿಸುವುದಾಗಿತ್ತು. ತೀರ್ಪನ್ನು ಹೊರಡಿಸಿದವರು ಪೇತ್ರ ಮತ್ತು ಯಾಕೋಬ: ಅಪೊಸ್ತಲರ ಕೃತ್ಯಗಳು 15:7 ("ಪೇತ್ರನು ಎದ್ದು ನಿಂತು ಹೇಳಿದನು") ಮತ್ತು ವಚನ 13 ("ಯಾಕೋಬನು ಹೇಳಿದ್ದೇನೆಂದರೆ") ಮತ್ತು ವಚನ 19 (ಹೀಗಿರಲಾಗಿ ನನ್ನ ಅಭಿಪ್ರಾಯ ಏನೆಂದರೆ). ಅನಂತರ ಹಿರಿಯರು ಮತ್ತು ಇಡೀ ಸಭೆಯು ಯಾಕೋಬ ಮತ್ತು ಪೇತ್ರರೊಂದಿಗೆ ಒಪ್ಪಿಕೊಂಡಿತು.

ನನ್ನ ತೀರ್ಮಾನ/ ಮುಕ್ತಾಯ: ಈ ರೀತಿ ಆಗಿದ್ದಿರಬಹುದು. ಅಂತಿಯೋಕ್ಯದಿಂದ ಬಂದ ನಿಯೋಗವನ್ನು ಅಪೊಸ್ತಲರು, ಹಿರಿಯರು ಮತ್ತು ಸಭೆಯು (ಸಮೂಹವು) ಸ್ವೀಕರಿಸಿತು. ಅವರೆಲ್ಲರೂ ಸಹ ಪೌಲ ಮತ್ತು ಬಾರ್ನಬರ ಸಾಕ್ಷಿಯನ್ನು ಕೇಳಿದರು (ಅಪೊ.ಕೃತ್ಯ. 15:15). ಅನಂತರ ಪೌಲನ/ ಬಾರ್ನಬ ಮತ್ತು ಯಾಕೋಬ/ ಪೇತ್ರ/ ಯೋಹಾನರ ನಡುವೆ ಒಂದು ಸಣ್ಣ ಸಭೆ/ ಭೇಟಿಯುಂಟಾಗಿತ್ತು, ಅದರಲ್ಲಿ ಸಮಸ್ಯೆಯನ್ನು ವಿವರವಾಗಿ ಚರ್ಚಿಸಿ ಅದನ್ನು ಬಗೆಹರಿಸಲಾಯಿತು (ಗಲಾತ್ಯ 2:2, 6, 9 ಮತ್ತು ಅಪೊ.ಕೃತ್ಯ. 15:6). ಹಾಗೆಯೇ ಎಲ್ಲಾ ಹಿರಿಯರು ಮತ್ತು ಇಡೀ ಸಭೆಯು ಒಪ್ಪಂದಕ್ಕಾಗಿ ಸಮ್ಮತಿ/ ಒಪ್ಪಿಗೆಯನ್ನು ಕೊಟ್ಟರು ಮತ್ತು ಆಗ ಅನ್ಯಜನರ ಸಭೆಗಳಿಗೆ ಒಂದು ಪತ್ರ/ ಪತ್ರಿಕೆಯು ಬರೆಯಲ್ಪಟ್ಟಿತು (ಅಪೊ.ಕೃತ್ಯ. 15:22-23).